"ಮಂಗಳೂರು ತಾಲೂಕಿನಲ್ಲಿ ಹೈನುಗಾರಿಕೆ"
ಒಂದು ವಿಶ್ಲೇಷಣೆ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ ಪದವಿಗಾಗಿ
ಸಾದರ ಪಡಿಸಿದ ಸಂಪ್ರಬಂಧ
(ಅಭಿವೃದ್ಧಿ ಅಧ್ಯಯನ ವಿಭಾಗ)

ಸಂಶೋಧಕರು
ಜಯಲಕ್ಷ್ಮಿ
ನೋಂದಣಿ ಸಂಖ್ಯೆ : KTSMDS-00699

ಮಾರ್ಗದರ್ಶಕರು
ಡಾ. ವಾಲ್ಟರ್ ಡಿ'ಸೋಜ

1148

...ಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು – 575 001
ಜುಲೈ – ೨೦೧೪

ಪು. ಸಂ. ತ ಆರತಿ.
1148
AKSHARA GRANTHALAYA
ACC.NO. 048957

1148

1148

“ಮಂಗಳೂರು ತಾಲೂಕಿನಲ್ಲಿ ಹೈನುಗಾರಿಕೆ” ಒಂದು ವಿಶ್ಲೇಷಣೆ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ ಪದವಿಗಾಗಿ

ಸಾದರ ಪಡಿಸಿದ ಸಂಪ್ರಬಂಧ

(ಅಭಿವೃದ್ಧಿ ಅಧ್ಯಯನ ವಿಭಾಗ)

ಸಂಶೋಧಕರು

ಜಯಲಕ್ಷ್ಮಿ

ನೋಂದಣಿ ಸಂಖ್ಯೆ : **KTSMDS–00699**

ಮಾರ್ಗದರ್ಶಕರು

ಡಾ. ವಾಲ್ಟರ್ ಡಿ’ಸೋಜ

ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ, ಮಂಗಳೂರು – 575 001

ಜುಲೈ – ೨೦೧೪

637.1
JAY ಮ
048957

ಯೋಗ್ಯತಾ ಪತ್ರ

ಜಯಲಕ್ಷ್ಮಿ ಅವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ 'ಮಂಗಳೂರು ತಾಲೂಕಿನಲ್ಲಿ ಹೈನುಗಾರಿಕೆ – ಒಂದು ವಿಶ್ಲೇಷಣೆ' ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ.ಫಿಲ್ ಪದವಿ ಪ್ರಾಪ್ತಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕೆಂದು ಸಿದ್ಧಪಡಿಸಿರುತ್ತಾರೆ. ಈ ಸಂಪ್ರಬಂಧವು ಸಂಶೋಧಕರ ಸ್ವಂತ ಪರಿಶ್ರಮ, ವಿಶ್ಲೇಷಣೆ, ಅಭಿಪ್ರಾಯ ಸಂಗ್ರಹ ಮತ್ತು ಸಂಶೋಧನೆಯ ಫಲ ಸ್ವರೂಪವಾಗಿದೆ. ಇವರು ಈ ಸಂಪ್ರಬಂಧವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಅಥವಾ ಇನ್ನಿತರ ಉದ್ದೇಶಗಳಿಗಾಗಲಿ ಬಳಸಿಕೊಂಡಿಲ್ಲ.

ಸ್ಥಳ : ಮಂಗಳೂರು

ದಿನಾಂಕ : 12–06–2014

ಡಾ. ವಾಲ್ಟರ್ ಡಿ'ಸೋಜ

ಸಂಶೋಧನಾ ಮಾರ್ಗದರ್ಶಕರು

ಕರ್ನಾಟಕ ತಿಯೊಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ, ಮಂಗಳೂರು

ಪ್ರಮಾಣ ಪತ್ರ

ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಎಂ.ಫಿಲ್ ಪದವಿಗಾಗಿ ಸಾದರಪಡಿಸಿದ 'ಮಂಗಳೂರು ತಾಲೂಕಿನಲ್ಲಿ ಹೈನುಗಾರಿಕೆ – ಒಂದು ವಿಶ್ಲೇಷಣೆ' ಎಂಬ ಈ ಸಂಪ್ರಬಂಧವು ನನ್ನ ಸ್ವಂತ ಕೃತಿಯಾಗಿದ್ದು ವಿಶ್ಲೇಷಣೆ ಮತ್ತು ಅಧ್ಯಯನದ ಫಲಶ್ರುತಿಯಾಗಿದೆ. ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರದಲ್ಲಿ ಡಾ. ವಾಲ್ಟರ್ ಡಿ'ಸೋಜ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಈ ಸಂಪ್ರಬಂಧವು ಬೇರಾವುದೇ ಪದವಿ, ಡಿಪ್ಲೊಮಾ ಅಥವಾ ತತ್ಸಮಾನ ಉಪಾಧಿಗಳ ಪ್ರಾಪ್ತಿಗಾಗಿ ಅಥವಾ ಆರ್ಥಿಕ ಲಾಭಕ್ಕಾಗಿ ಇಡಿಯಾಗಿ ಅಥವಾ ಬಿಡಿಯಾಗಿ ಬಳಸಿಕೊಂಡಿಲ್ಲವೆಂದು ನಾನು ಈ ಮೂಲಕ ದೃಢಪಡಿಸುತ್ತೇನೆ.

ಸ್ಥಳ : ಮಂಗಳೂರು

ದಿನಾಂಕ : 12–06–2014

ಜಯಲಕ್ಷ್ಮಿ

ಸಂಶೋಧಕರು

ಕರ್ನಾಟಕ ತಿಯೊಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ, ಮಂಗಳೂರು

ಅಧ್ಯಯನದ ವಿವರಗಳು

ಅಧ್ಯಾಯ–೧

ಅಧ್ಯಯನದ ಸ್ವರೂಪ ಮತ್ತು ವ್ಯಾಪ್ತಿ

ಅಧ್ಯಾಯ – ೧

ಅಧ್ಯಯನದ ಸ್ವರೂಪ ಮತ್ತು ವ್ಯಾಪ್ತಿ

೧.೧ ಪೀಠಿಕೆ:

ಭಾರತವು ಕೃಷಿಯೇ ಪ್ರಧಾನವಾಗುಳ್ಳ ರಾಷ್ಟ್ರ. ಕೃಷಿಗೆ ಪೂರಕವಾಗಿರುವ ಪಶುಸಂಗೋಪನೆ ಹಾಗೂ ಹೈನುಗಾರಿಕೆಗಳು ಸಹ ದೇಶದ ಆರ್ಥಿಕ ವ್ಯವಸ್ಥೆಗೆ ಗಣನೀಯ ಕೊಡುಗೆ ನೀಡುತ್ತಿವೆ ರಾಷ್ಟ್ರ ವ್ಯಾಪ್ತಿಯಾಗಿರುವ ಈ ಪರಿಕಲ್ಪನೆ ಕರ್ನಾಟಕದಲ್ಲಿ ಸಾಕಾರಗೊಂಡಿದ್ದು ಹೈನುಗಾರಿಕೆ ಅತ್ಯಂತ ಆಕರ್ಷಣೆ ಹಾಗೂ ಪ್ರಮುಖ ಉದ್ಯಮಗಳಲ್ಲಿ ಒಂದೊಂದು ಪರಿಗಣಿಸಲಾಗಿದೆ. ಕ್ಷಿರೋದ್ಯಮವು ಸಣ್ಣ ಹಳ್ಳಿಗಳಿಂದ ದೊಡ್ಡ ಪಟ್ಟಣ ಹಾಗೂ ನಗರಗಳಲ್ಲೂ ಸಹ ನಿರ್ವಹಿಸಬಹುದಾದ ಕಸುಬಾಗಿದೆ. ಒಂದು ರೀತಿಯಲ್ಲಿ ಗ್ರಾಮೀಣ ಪ್ರದೇಶಗಳ ನಿರುದ್ಯೋಗಿ ಯುವ ಪೀಳಿಗೆಗೆ ಒಂದು ವರದಾನವಾಗಿರುವ ಹೈನುಗಾರಿಕೆಯು ಸ್ವಯಂ ಉದ್ಯೋಗದ ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ಎಂದು ಹೇಳಿದರೂ ತಪ್ಪಾಗಲಾರದು. ಈ ಮೂಲಕ ಗ್ರಾಮೀಣ ಆರ್ಥಿಕತೆಯಲ್ಲಿ ಗಣನೀಯ ಪಾತ್ರ ವಹಿಸುತ್ತದೆ. ಇದರಿಂದಾಗಿ ಗ್ರಾಮೀಣ ಜನತೆ ಅದರಲ್ಲಿಯೂ ವಿಶೇಷವಾಗಿ ಮಹಿಳೆಯರು ಹಾಗೂ ನಿರುದ್ಯೋಗಿ ಯುವಕರು ಆರ್ಥಿಕವಾಗಿ ಸ್ವಾವಲಂಬನೆ ಸಾಧಿಸಿರುವುದೇ ಸ್ವಲ್ಪ ಮಟ್ಟಿಗೆ ನಿರುದ್ಯೋಗ ನಿವಾರಣೆಯಾಗಲು ಸಹಕಾರಿಯಾಗಿದೆ. ಸ್ವಾತಂತ್ರ್ಯೋತ್ತರ ಕಾಲದಲ್ಲಿ ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಹೈನು ಉತ್ಪಾದನೆಗೆ ಹಾಗೂ ಪಶುಸಂಗೋಪನೆಗೆ ಹೆಚ್ಚಿನ ಒತ್ತು ನೀಡಲಾಯಿತು. ಹಸುಗಳ ತಳಿಯನ್ನು ಉತ್ತಮಗೊಳಿಸಿ ಮತ್ತು ಉತ್ಕೃಷ್ಟ ಮೇವನ್ನು ಒದಗಿಸುವ ಮೂಲಕ ಹೈನು ಉತ್ಪಾದನೆಯಲ್ಲಿ ಪ್ರಗತಿ ಸಾಧಿಸಲಾಯಿತು. ತಳಿ ವೃದ್ಧಿಪಡಿಸಲು ಪ್ರಯತ್ನ ನಡೆಯಿತು. ತಳಿ ಉತ್ತಮಗೊಂಡಂತೆ ಹಾಲಿನ ಉತ್ಪದಾನೆಯ ಪ್ರಮಾಣದಲ್ಲಿ ಶ್ರೀಘ್ರ ಏರಿಕೆ ಕಂಡು ಬಂತು. ಆದರೆ ದೇಶೀಯ ತಳಿಗಳಿಗಿಂತ ವಿದೇಶಿ ತಳಿಗಳಲ್ಲಿ ಕಂಡು ಬಂದ ತ್ವರಿತ ಫಲಿತಾಂಶ ಗಮನ ಸೆಳೆಯಿತು.

ಕರ್ನಾಟಕದಲ್ಲಿ ಕ್ಷೀರೋದ್ಯಮವು ೧೯೫೦ ರಿಂದಲೂ ಅಸ್ತಿತ್ವದಲ್ಲಿದ್ದು, ಪ್ರಾರಂಭದಲ್ಲಿ ಸಣ್ಣ ಮಟ್ಟದಲ್ಲಿ ಪ್ರಾರಂಭವಾದ ಉದ್ಯಮವು ಇಂದು ಸಹಕಾರಿ ರಂಗದ ಅತೀ ಯಶಸ್ವೀ ಉದ್ಯಮಗಳಲ್ಲಿ ಒಂದು ಎಂದು ಪರಿಗಣಿಸಲಾಗಿದೆ.

೧.೨ ಭಾರತದಲ್ಲಿ ಹೈನುಗಾರಿಕೆಯ ಇತಿಹಾಸ:

ದೇಶದ ಗುಜರಾತ್ ರಾಜ್ಯದ ಕೈರಾ ಜಿಲ್ಲೆಯ ಆಣಂದ ಗ್ರಾಮದಲ್ಲಿ ಹೈನುಗಾರಿಕಾ ಅಂದೋಲನ ೧೯೪೬ ರಲ್ಲಿ ಆರಂಭವಾಯಿತು. ಹಾಲು ಮಾರುಕಟ್ಟೆಯಲ್ಲಿ ಬೇರುಬಿಟ್ಟ ಮಧ್ಯವರ್ತಿಗಳು ಹಾಗೂ ಖಾಸಗಿ ಡೈರಿಗಳ ಏಕಸ್ವಾಮಿತ್ವ ನೀತಿಯಿಂದ ಮುಕ್ತರಾಗಲು ಕೈರಾ ಜಿಲ್ಲೆಯ ಆಣಂದದಲ್ಲಿ ಮೊಟ್ಟಮೊದಲ ಬಾರಿಗೆ 'ಕೈರಾ ಜಿಲ್ಲಾ ಹಾಲು ಉತ್ಪಾದಕ ಸಹಕಾರ ಸಂಘ' ಹುಟ್ಟಿಕೊಂಡಿತು. ಡಾ. ಕುರಿಯನ್ ಈ ಸಂಸ್ಥೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಿ ಬೆಳೆಸಿದರು. ಅಂತೆಯೇ ಇದು ಕೈರಾ ಜಿಲ್ಲಾ ಹಾಲು ಉತ್ಪಾದಕರ ಒಕ್ಕೂಟವಾಯಿತು. ಈ ಒಕ್ಕೂಟವು ತನ್ನ ಹೈನು ಉತ್ಪನ್ನಗಳಿಗೆ ೧೯೫೫ರಲ್ಲಿ 'ಅಮೂಲ್' ಎಂದು ನಾಮಕರಣ ಮಾಡಿತು. ಇದರ ಯಶಸ್ವಿನಿಂದ ಗುಜರಾತ್ ರಾಜ್ಯದಲ್ಲಿ ಮತ್ತೆ ಇದೇರೀತಿ ಐದು ಒಕ್ಕೂಟಗಳು ಸ್ಥಾಪನೆಗೊಂಡವು. (http//www.amuldairy.com/index.php/..) ೧೯೬೪ರಲ್ಲಿ ಅಂದಿನ ಪ್ರಧಾನ ಮಂತ್ರಿಗಳಾಗಿದ್ದ ಲಾಲ್ ಬಹದ್ದೂರ್ ಶಾಸ್ತ್ರಿಯವರು ತಮ್ಮ ಗುಜರಾತ್ ಭೇಟಿಯಲ್ಲಿ ಡಾ॥. ವರ್ಗೀಸ್ ಕುರಿಯನ್‌ರ ಸಹಕಾರಿ ಚಳುವಳಿಯನ್ನು ಕಂಡು ಬೆರಗಾದರು. ಅಲ್ಲದೇ ಆಣಂದ ಮಾದರಿಯ ಡೈರಿ ಸಹಕಾರಿ ಸಂಘಗಳನ್ನು ದೇಶದ ಎಲ್ಲಾ ರಾಜ್ಯಗಳಿಗೂ ವಿಸ್ತರಿಸುವಂತೆ ಡಾ॥. ಕುರಿಯನ್‌ಗೆ ಸೂಚಿಸಿದರು. ಅಂತೆಯೇ ರಾಷ್ಟ್ರೀಯ ಹೈನು ಅಭಿವೃದ್ಧಿ ನಿಗಮ (ಎನ್.ಡಿ.ಡಿ.ಬಿ) ಸ್ಥಾಪನೆಯಾಯಿತು. ಅದಂತೆ ಕರ್ನಾಟಕದಲ್ಲಿ ಕರ್ನಾಟಕ ಹಾಲು ಮಹಾಮಂಡಳಿ(ಕೆ.ಎಂ.ಎಫ್) ಜನ್ಮ ತಾಳಿತು. ಕೆ.ಎಂ.ಎಫ್ ತನ್ನ ಉತ್ಪನ್ನಗಳಿಗೆ 'ನಂದಿನಿ' ಎಂದು ಹೆಸರಿಟ್ಟಿದೆ. ಪ್ರಸ್ತುತ ೨೦ಕ್ಕೂ ಅಧಿಕ ಹೈನು ಉತ್ಪನ್ನಗಳು ಈ ಹೆಸರಿನಲ್ಲಿ ಮಾರುಕಟ್ಟೆಯಲ್ಲಿ ಜನಪ್ರಿಯವಾಗಿದೆ.

ದೇಶದೆಲ್ಲೆಡೆ ಹಾಲಿನ ಹೊಳೆ ಹರಿಸುವ ಉದ್ದೇಶದಿಂದ ಕ್ಷೀರಕ್ರಾಂತಿಯು ಡಾ॥. ವರ್ಗೀಸ್ ಕುರಿಯನ್ ಹಾಗೂ ಶ್ರೀ ತ್ರಿಭುವನ್ ದಾಸ್ ಇವರ ನೇತೃತ್ವದಲ್ಲಿ ೧೯೭೦ರಲ್ಲಿ ಆರಂಭವಾಯಿತು. ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯು ದೇಶದ ಉದ್ದಗಲಕ್ಕೂ ರಾಜ್ಯ ಮಟ್ಟದಲ್ಲಿ ಸಹಕಾರಿ ಹಾಲು ಮಹಾಮಂಡಳಿಗಳು ಮತ್ತು ಜಿಲ್ಲಾ ಮಟ್ಟದಲ್ಲಿ ಸಹಕಾರಿ ಹಾಲು ಒಕ್ಕೂಟಗಳನ್ನು ಸ್ಥಾಪಿಸಿ, ಆ ಸಂಸ್ಥೆಗಳ ಮೂಲಕ ಹಳ್ಳಿಗಳಲ್ಲಿ ಅಮೂಲ್ ಮಾದರಿಯ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಸಂಘಟಿಸಲಾಯಿತು. ಈ ಸಹಕಾರಿ ವ್ಯವಸ್ಥೆಯ ಮೂಲಕ ಹೈನು ಅಭಿವೃದ್ಧಿಗಾಗಿ ವಿವಿಧ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲಾಯಿತು. ಈ ಯೋಜನೆಗಳ ಅಭೂತಪೂರ್ವ ಯಶಸ್ವಿನ ಫಲವಾಗಿಯೇ ದೇಶದಲ್ಲಿ ಹಾಲಿನ ಉತ್ಪಾದನೆ ಅತಿ ವೇಗವಾಗಿ ಬೆಳೆದು ಶ್ವೇತ ಕ್ರಾಂತಿಯಾಯಿತು. ೧೯೭೩-೧೯೯೬ ಅವಧಿಯಲ್ಲಿ ಹಾಲು

ಉತ್ಪಾದನೆಯ ಪ್ರಮಾಣ ಎರಡಷ್ಟು ಹೆಚ್ಚಾಗಿದೆ. ೨೦೧೦ನೇ ಸಾಲಿನಲ್ಲಿ ದೇಶದಲ್ಲಿ ೧೧,೧೦೦ಕೋಟಿ ಲೀಟರುಗಳಿಗಿಂತ ಹೆಚ್ಚು ಹಾಲು ಉತ್ಪಾದನೆಯ ಪ್ರಮಾಣ ಎರಡರಷ್ಟು ಹೆಚ್ಚಾಗಿದೆ. ಈ ಪ್ರಮಾಣವು ೨೦೧೫ರಲ್ಲಿ ೧೨,೪೦೦ ಕೋಟಿ ಲೀಟರು ಎಂದು ಅಂದಾಜಿಸಲಾಗಿದೆ. (ಹೈನು ಹೊನ್ನು, ಡಾ. ಎನ್. ಬಿ. ಶ್ರೀಧರ ಮತ್ತು ಇತರರು, 2013).

೧.೩ ಹೈನುಗಾರಿಕೆಯ ಅರ್ಥ:

ಮನುಷ್ಯನ ಅನುಭೋಗಕ್ಕಾಗಿ ದನ, ಎಮ್ಮೆ, ಆಡು, ಕುರಿ ಮೊದಲಾದ ಪ್ರಾಣಿಗಳ ಹಾಲನ್ನು ಸಂಗ್ರಹಿಸುವುದಕ್ಕಾಗಿ ಇರುವಂತಹ ಸಾಹಸೋದ್ಯಮವನ್ನು ಹೈನುಗಾರಿಕೆ ಅಥವಾ ಕ್ಷೀರೋದ್ಯಮ ಎನ್ನಬಹುದು. ಇಲ್ಲಿ ಹಾಲು ಎಂದರೆ ಆರೋಗ್ಯವಾಗಿರುವ, ಸಸ್ತನಿ ಪ್ರಾಣಿಗಳ ಕೆಚ್ಚಲಿನಿಂದ ಸ್ರವಿಸುವ ಆರೋಗ್ಯಕರವಾದ, ದ್ರವ ರೂಪದ ಪೌಷ್ಠಕ ಆಹಾರ, ಹಾಲು ಎಂದರೆ ಅಮೃತ ಸಮಾನ. ಸಣ್ಣ ಮಕ್ಕಳಿಂದ ಆರಂಭಗೊಂಡು ವಯೋವೃದ್ಧರವರೆಗೂ ಸಹ ಹಾಲು ದಿನನಿತ್ಯದ ಆಹಾರ. ಸಾಧಾರಣವಾಗಿ ಹಾಲಿನಲ್ಲಿ ಶೇಕಡಾ 3.4 ಪ್ರೋಟೀನ್, ಶೇ. 0.2 ಲವಣಗಳು, ಹಾಗೂ ವಿಟಮಿನ್ ಇರುತ್ತದೆ. ಇದರಿಂದಾಗಿ ಹಾಲು ಕುಡಿದು ಬೆಳೆಯುವ ಮಕ್ಕಳಲ್ಲಿ ತಾಯಿಯ ಹಾಲಿನ ನಂತರದ ಅದ್ಭುತ ಪೌಷ್ಠಕ ಆಹಾರವಾಗಿದೆ.

ದೇಶವು ಕಳೆದ ೨೦೦೦ನೇ ಸಾಲಿನಿಂದ ಪ್ರಪಂಚದಲ್ಲಿಯೇ ಅತೀ ಹೆಚ್ಚು ಹಾಲು ಉತ್ಪಾದನೆ ಮಾಡುವ ರಾಷ್ಟ್ರವೆಂದು ಹೆಸರು ಪಡೆದಿದೆ. ದೇಶದ ಒಟ್ಟು ಹಾಲು ಉತ್ಪಾದನೆಯಲ್ಲಿ ಶೇ. ೫೫ ಎಮ್ಮೆಗಳು, ಶೇ. ೪೩ ವಿದೇಶಿ, ಮಿಶ್ರ ಹಾಗೂ ದೇಶೀ ತಳಿ ಹಸುಗಳು ಮತ್ತು ಶೇ. ೨ರಷ್ಟು ಆಡು, ಕುರಿಗಳಿಂದ ಬರುತ್ತಿದೆ. (ಅಭಿವೃದ್ಧಿ ಪಥ, ಡಾ. ಹಿ.ಚಿ. ಬೋರಲಿಂಗಯ್ಯ) ಹಾಲು ಉತ್ಪಾದನೆಯ ಶೇ. ೨೦ರಷ್ಟು ಸಂಸ್ಕರಿಸಿದ ಹಾಲು ಗ್ರಾಹಕರಿಗೆ ಮಾರಾಟವಾದರೆ, ಶೇ. ೨೦ರಷ್ಟು ಭಾಗ ಹಾಲಿನ ಉತ್ಪನ್ನಗಳಾದ ಮೊಸರು, ಮಜ್ಜಿಗೆ, ಬೆಣ್ಣೆ, ತುಪ್ಪ ಪನೀರ್, ಲಸ್ಸಿ ಇತ್ಯಾದಿಗಳ ರೂಪದಲ್ಲಿ ದೇಶ–ವಿದೇಶಗಳಲ್ಲಿ ಮಾರಾಟವಾಗುತ್ತದೆ.

೧.೪ ಸಮಸ್ಯೆ / ಸಮಸ್ಯೀಕರಣ:

ಭಾರತವು ಪ್ರಪಂಚದಲ್ಲಿಯೇ ಅತೀ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾಗಿದ್ದು ಹೈನುಗಾರಿಕೆ ಕೂಡಾ ವಾರ್ಷಿಕವಾಗಿ ಶೇ. ೪ರ ಪ್ರಗತಿಯೊಂದಿಗೆ ಮುನ್ನುಗ್ಗುತ್ತಿದೆ. ಭಾರತವು ಜಗತ್ತಿನಲ್ಲಿಯೇ ಹಾಲು ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿದ್ದರೂ ಹೈನುಗಾರಿಕಾ ಉದ್ಯಮದಲ್ಲಿ ಕೆಲವೊಂದು ಸಮಸ್ಯೆಗಳನ್ನು ಗುರುತಿಸಲಾಗಿದೆ.

ಒಂದು ರೀತಿಯಿಂದ ಹೈನುಗಾರಿಕೆಯು ನಿರುದ್ಯೋಗ ನಿವಾರಣೆಗೆ ಸಹಕಾರಿಯಾದರೂ ನಮ್ಮ ದೇಶದಲ್ಲಿ ಇಂದಿಗೂ ನಿರುದ್ಯೋಗ ಸಮಸ್ಯೆ ಸಂಪೂರ್ಣವಾಗಿ ನಿವಾರಣೆಯಾಗಿಲ್ಲ ಜನರು ಹೈನುಗಾರಿಕೆಯನ್ನು ಎರಡು ಉದ್ದೇಶದಿಂದ ಅವಲಂಭಿಸಿದ್ದಾರೆ. ಒಂದು ವಾಣಿಜ್ಯ ಉದ್ದೇಶಕ್ಕಾಗಿ, ಎರಡು ಸ್ವಂತ ಉಪಯೋಗಕ್ಕಾಗಿ. ಇಲ್ಲಿ ಹಲವಾರು ಪ್ರಶ್ನೆಗಳು ಉದ್ಭವಿಸುತ್ತದೆ. ಕೆಲವೇ ಜನ ಯಾಕೆ ಹೈನುಗಾರಿಕೆಯನ್ನು ವಾಣಿಜ್ಯ ಉದ್ದೇಶದಿಂದ ಅವಲಂಭಿಸಿದ್ದಾರೆ ಉಳಿದವರು ಯಾಕೆ ಹೈನುಗಾರಿಕೆಯನ್ನು ವಾಣಿಜ್ಯ ಉದ್ದೇಶದಿಂದ ಮಾಡುತ್ತಿಲ್ಲ? ಇದಕ್ಕೆ ಕಾರಣವೇನು? ಸ್ವಂತ ಉಪಯೋಗಕ್ಕಾಗಿ ಹೈನುಗಾರಿಕೆಯನ್ನು ಅವಲಂಬಿಸಿಕೊಂಡವರು ಯಾಕೆ ಅದನ್ನು ವಾಣಿಜ್ಯ ಉದ್ದೇಶಕ್ಕಾಗಿ ಮಾಡುವುದಿಲ್ಲ? ಅಷ್ಟೆ ಅಲ್ಲದೆ ಈಗಾಗಲೇ ಹೈನುಗಾರಿಕೆಯನ್ನು ಮಾಡುತ್ತಿರುವ ಜನರಿಗೆ ಈ ಹೈನು ಉದ್ಯಮವು ಲಾಭದಾಯಕವಾಗಿದೆಯೇ, ಅಥವಾ ಲಾಭದಾಯಕವಾಗಿಲ್ಲವೋ? ಒಂದು ವೇಳೆ ಲಾಭದಾಯಕವಾಗಿಲ್ಲದಿದ್ದರೆ ಅದಕ್ಕೆ ಕಾರಣವೇನು? ಯಾವೆಲ್ಲ ಸಮಸ್ಯೆಗಳನ್ನು ಹೈನುಗಾರರು ಎಂಬುವುದನ್ನು ತಿಳಿಯಲು ಈ ಅಧ್ಯಯನದಲ್ಲಿ ಪ್ರಯತ್ನಿಸಲಾಗಿದೆ.

ಹೈನುಗಾರಿಕೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸರಕಾರ ಹಲವಾರು ರೀತಿಯ ಯೋಜನೆಗಳನ್ನು ಹಮ್ಮಿಕೊಂಡಿದೆ. ಇದರ ಸದುಪಯೋಗ ಆಗುತ್ತಿದೆಯೋ? ಎಂಬುವುದರ ಕುರಿತು ವಿಶ್ಲೇಷಣೆ ಅಗತ್ಯ. ಅಷ್ಟೇ ಅಲ್ಲದೇ ಸರಕಾರ ಈಗಾಗಲೇ ಹಾಕಿರುವ ಯೋಜನೆಗಳಲ್ಲಿ ಬದಲಾವಣೆಯ ಅವಶ್ಯಕತೆ ಇದೆಯೇ? ಅಥವಾ ಈಗಾಗಲೇ ಇರುವ ಯೋಜನೆಗಳು ಉತ್ತಮವಾಗಿದ್ದರೆ ಅವುಗಳನ್ನು ಯಾವ ರೀತಿ ಸದುಪಯೋಗಪಡಿಸಿಕೊಳ್ಳಬಹುದು? ಸರಕಾರ ಮತ್ತು ಹಾಲು ಉತ್ಪಾದಕರ ಸಹಕಾರ ಸಂಘಗಳು ಹಲವಾರು ಸವಲತ್ತುಗಳನ್ನು ನೀಡುತ್ತಿದೆ. ಆದರೆ ಇದರ ಬಗ್ಗೆ ಜನರಿಗೆ ಸರಿಯಾದ ತಿಳುವಳಿಕೆ ಇಲ್ಲದಿರುವುದನ್ನು ಕಾಣಬಹುದು. ಇರುವಂತಹ ಸೌಲಭ್ಯಗಳು ಎಲ್ಲಾ ಪ್ರದೇಶಗಳಲ್ಲಿ ಲಭ್ಯವಿದೆಯೋ, ಇಲ್ಲವೋ? ಹೈನುಗಾರಿಕೆಯಲ್ಲಿ ತೊಡಗಿರುವ ಜನರು ಯಾವ-ಯಾವ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ? ಇದನ್ನು ಹೇಗೆ ಬಗೆಹರಿಸಬಹುದು? ಯಾರು ಪರಿಹರಿಸಬಹುದು? ಅಲ್ಲದೆ ಹೈನುಗಾರಿಕೆಯಲ್ಲಿ ತೊಡಗಿರುವ ಉದ್ಯಮಿಗಳು ಯಾವ ರೀತಿಯ ವಿಧಾನಗಳನ್ನು ಅನುಸರಿಸುತ್ತಿದ್ದಾರೆ? ಇತ್ತೀಚೆಗೆ ಆಧುನಿಕ ವಿಧಾನಗಳನ್ನು ಅಳವಡಿಸಿಕೊಂಡಿದ್ದಾರೆಯೇ? ಇಲ್ಲವೋ? ಬಳಸಿಕೊಂಡಿದ್ದರೆ ಎಷ್ಟರ ಮಟ್ಟಿಗೆ ಲಾಭದಾಯಕವಾಗಿದೆ? ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ.

೧.೫ ಅಧ್ಯಯನದ ಮಹತ್ವ:

ಈ ಅಧ್ಯಯನದಲ್ಲಿ ಹೈನುಗಾರಿಕೆಯಲ್ಲಿ ಕಂಡುಕೊಂಡಂತಹ ಸಮಸ್ಯೆಗಳು ಹಾಗೂ ಶೋಧದ ಆಧಾರದಲ್ಲಿ ಮುಂದೆ ಹೈನುಗಾರಿಕಾ ಬೆಳವಣಿಗೆಯ ದೃಷ್ಟಿಯಿಂದ ಹೈನುಗಾರಿಕಾ ಉದ್ಯಮದ ಅಭಿವೃದ್ಧಿಯಲ್ಲಿ ಬಳಸಿಕೊಳ್ಳಬಹುದಾಗಿದೆ. ಹೈನುಗಾರಿಕೆಯಲ್ಲಿ ಇರುವಂತಹ ಲೋಪದೋಷಗಳನ್ನು ಸರಿಪಡಿಸಿಕೊಳ್ಳವುದರಲ್ಲಿ ಈ ಅಧ್ಯಯನವು ಪ್ರಾಮುಖ್ಯತೆ ಹೊಂದಿದೆ.

ಹೈನುಗಾರಿಕಾ ಚಟುವಟಿಕೆಯಿಂದ ಬಹಳಷ್ಟು ದೊಡ್ಡ ಪ್ರಮಾಣದ ಆದಾಯ ದೊರೆಯದಿದ್ದರೂ ಬಹಳಷ್ಟು ಜನರು ತಮ್ಮ ಜೀವನ ನಿರ್ವಹಣೆಗಾಗಿ ಅವಲಂಭಿಸಿಕೊಂಡಿದ್ದಾರೆ. ಇದರ ಬಗ್ಗೆ ಚಿತ್ರಣವನ್ನು ಈ ಅಧ್ಯಯನದಲ್ಲಿ ನೀಡಲಾಗಿದೆ. ಇತ್ತೀಚಿನ ದಿನಗಳಲ್ಲಿ ಸಾವಯವ ಕೃಷಿಗೆ ಪ್ರಾಮುಖ್ಯತೆಯನ್ನು ನೀಡಲಾಗುತಿದ್ದು, ಇದಕ್ಕೆ ಹೈನುಗಾರಿಕೆಯಿಂದ ಸೆಗಣಿಗೊಬ್ಬರವನ್ನು ಪೂರೈಸಿ ಉತ್ತಮ ಫಸಲು ಪಡೆಯಬಹುದು. ಅಷ್ಟೇ ಅಲ್ಲದೆ ಹಿಂದೆ ಹೈನುಗಾರಿಕೆಯಲ್ಲಿ ಸಾಂಪ್ರದಾಯಿಕ ಚಿಕಿತ್ಸಾ ವಿಧಾನ. ಅಥವಾ ಹಳೇ ಪದ್ಧತಿಯನ್ನು ಅನುಸರಿಸುತ್ತಿದ್ದರು, ಆದರೆ ಇಂದು ಈ ಸಾಂಪ್ರದಾಯಿಕ ವಿಧಾನದಲ್ಲಿ ಬದಲಾವಣೆ ಆಗಿರುವುದನ್ನು ಕಾಣಬಹುದು. ಹೀಗೆ ಎಷ್ಟರ ಮಟ್ಟಿಗೆ ವೈಜ್ಞಾನಿಕ ತಂತ್ರಜ್ಞಾನವನ್ನು, ವೈಜ್ಞಾನಿಕ ಚಿಕಿತ್ಸಾ ಕ್ರಮವನ್ನು ಅನುಸರಿಸುತ್ತಿದ್ದಾರೆ ಎಂಬುವುದನ್ನು ಅಧ್ಯಯನ ಮಾಡಲಾಗಿದೆ. ಒಟ್ಟಿನಲ್ಲಿ ಗ್ರಾಮೀಣ ಆರ್ಥಿಕತೆಯ ಸುಧಾರಣೆಯಲ್ಲಿ ಹೈನುಗಾರಿಕೆಯು ಫಲಕಾರಿಯಾಗಬಹುದೇ ಎಂಬುವುದನ್ನು ಈ ಅಧ್ಯಯನದಿಂದ ತಿಳಿದುಕೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ.

೧.೬ ಅಧ್ಯಯನದ ಉದ್ದೇಶ:

೧. ಅಧ್ಯಯನ ಪ್ರದೇಶದಲ್ಲಿ ಹೈನುಗಾರಿಕೆಯ ಪರಿಸ್ಥಿತಿಯನ್ನು ಅಧ್ಯಯನ ಮಾಡುವುದು.

೨. ಹೈನುಗಾರಿಕಾ ವಿಧಾನವನ್ನು ಅಧ್ಯಯನ ಮಾಡುವುದು

೩. ಅಧ್ಯಯನ ಪ್ರದೇಶದಲ್ಲಿ ಹೈನುಗಾರಿಕಾ ಅಭಿವೃದ್ಧಿಗೆ ಸಹಕಾರಿ ಸಂಘಗಳ ಪಾತ್ರದ ಕುರಿತು ವಿಶ್ಲೇಷಣೆ.

೧.೭ ಅಧ್ಯಯನ ವಿಧಾನ:

ಈ ಸಂಶೋಧನಾ ವಿಷಯದ ಅಧ್ಯಯನವನ್ನು ಈ ಕೆಳಗಿನ ವಿಧಾನಗಳ ಮೂಲಕ ಕೈಗೊಳ್ಳಲಾಗಿದೆ.

1. ಅಧ್ಯಯನಕ್ಕೆ ಭಾರತದ ಕರ್ನಾಟಕ ರಾಜ್ಯದ ಮಂಗಳೂರು ತಾಲೂಕನ್ನು ಆಯ್ಕೆ ಮಾಡಲಾಗಿದೆ.

2. **ದತ್ತಾಂಶ ಸಂಗ್ರಹಣೆ:**

ಅ) ಪ್ರಾಥಮಿಕ ಮೂಲಗಳಿಂದ: ಹೈನುಗಾರಿಕೆಯಲ್ಲಿ ತೊಡಗಿರುವ ಕೆಲವೊಂದು ಕುಟುಂಬಗಳನ್ನು ಸಂದರ್ಶಿಸಿ ಲಿಖಿತ ಪ್ರಶ್ನಾವಳಿಗಳ ಮೂಲಕ ಮಾಹಿತಿ ಸಂಗ್ರಹ ಮಾಡಲಾಗಿದೆ.

ಆ) ಹೈನುಗಾರಿಕೆ ಸಂಬಂಧಿಸಿದಂತೆ ಕೆಲವೊಂದು ಹಾಲು ಉತ್ಪಾದಕರ ಸಹಕಾರ ಸಂಘಗಳು, ಅಧಿಕಾರಿಗಳ ನೇರ ಸಂದರ್ಶನದ ಮುಖಾಂತರ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಇ) ಅನುಷಂಗೀಕ ಮೂಲಗಳು:

ಸಮೀಕ್ಷೆ, ವರದಿಗಳು, ಪ್ರಬಂಧ, ಪತ್ರಿಕಾ ವರದಿ, ಇಲಾಖೆಯ ದಾಖಲೆಗಳು, ಅಂತರ್ ಜಾಲ ತಾಣಗಳು ಮತ್ತಿತರ ಮೂಲಗಳಿಂದ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ.

೧.೮ ಅಧ್ಯಯನದ ಮಿತಿಗಳು:

ಸಂಶೋಧಕನು ಗುರುತಿಸುವಂತೆ ಪ್ರಸ್ತುತ ಅಧ್ಯಯನಕ್ಕೆ ಕೆಲವು ಮಿತಿಗಳಿವೆ. ಪ್ರಪ್ರಥಮವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಐದು ತಾಲೂಕುಗಳಲ್ಲಿ ಬೆಳ್ತಂಗಡಿ ಹಾಗೂ ಬಂಟ್ವಾಳ ತಾಲೂಕಿನಲ್ಲಿ ಮಂಗಳೂರು ತಾಲೂಕಿಗಿಂತ ಅಧಿಕ ಪ್ರಮಾಣದ ಹೈನುಗಾರಿಕಾ ಮಟ್ಟವನ್ನು ಗುರುತಿಸಿಕೊಳ್ಳಬಹುದು. ಈ ಅಧ್ಯಯನದಲ್ಲಿ ಮಂಗಳೂರು ತಾಲೂಕನ್ನು ಮಾತ್ರ ಆಯ್ಕೆ ಮಾಡಲಾಗಿದೆ. ಇದು ಈ ಅಧ್ಯಯನದ ಒಂದು ಮಿತಿಯಾಗಿದೆ. ಎರಡನೆಯ ಎರಡನೆಯದಾಗಿ ಈ ಅಧ್ಯಯನದಲ್ಲಿ ಅಂಕಿ ಅಂಶಗಳ ಮತ್ತು ಮಾಹಿತಿ ಸಂಗ್ರಹಣೆಯ ಮೂಲಕ ಫಲಿತಗಳನ್ನು ಕಂಡುಕೊಳ್ಳಲಾಗಿದೆ. ಇಲ್ಲಿ ಮಾಹಿತಿಯನ್ನು ಸಂಗ್ರಹಿಸುವಾಗ ಸಂದರ್ಶಕರು ಈ ಮಾಹಿತಿಗಳನ್ನು ನೀಡುವುದರಿಂದ ತಮಗೇನು ಲಾಭವಿದೆ ಎಂದು ತಿಳಿದುಕೊಂಡು ವಿವರಣಾತ್ಮಕ ಮಾಹಿತಿಯನ್ನು ನೀಡಲಿಲ್ಲ. ಇದರಿಂದ ಪರಿಣಾಮಾತ್ಮಕ ಅಂಕಿಅಂಶಗಳ ಕೊರತೆಯನ್ನು ಕಾಣಬಹುದಾಗಿದೆ.

೧.೯ ಅಧ್ಯಾಯಗಳ ಕಿರುಮಾಹಿತಿ:

ಈ ಸಂಪ್ರಬಂಧವನ್ನು ಹೀಗೆ ಆಯೋಜಿಸಲಾಗಿದೆ.

೧. ಅಧ್ಯಯನದ ಸ್ವರೂಪ ಮತ್ತು ವ್ಯಾಪ್ತಿ:

ಈ ಅಧ್ಯಯನದಲ್ಲಿ ಹೈನುಗಾರಿಕೆಯ ಇತಿಹಾಸ, ಅರ್ಥ ಹೈನುಗಾರಿಕಾ ಉದ್ಯಮದಲ್ಲಿರುವ ಸಮಸ್ಯೆ, ಈ ಅಧ್ಯಯನದ ಮಹತ್ವ, ಅಧ್ಯಯನದ ಉದ್ದೇಶಗಳು, ಅಧ್ಯಯನದ ವಿಧಾನಗಳು ಹಾಗೂ ಅಧ್ಯಯನದ ಮಿತಿಗಳು ಮತ್ತು ಅಧ್ಯಾಯಗಳ ಕಿರುಮಾಹಿತಿಯ ಬಗ್ಗೆ ತಿಳಿಸಲಾಗಿದೆ.

೨. ಹೈನುಗಾರಿಕಾ ಉದ್ಯಮದ ಕುರಿತು ಮಾಹಿತಿ ಅನುಷಂಗಿಕ ಮೂಲಗಳಿಂದ:

ಮೊದಲಿಗೆ ಪೀಠಿಕೆ, ಮಂಗಳೂರು ತಾಲೂಕಿನಲ್ಲಿ ಹೈನುಗಾರಿಕಾ ಬದಲಾವಣೆಗಳು, ಮಂಗಳೂರು ತಾಲೂಕಿನಲ್ಲಿ ಹೈನು ಉದ್ಯಮವು ನಡೆದು ಬಂದ ರೀತಿ, ಆರ್ಥಿಕ ವ್ಯವಸ್ಥೆಯಲ್ಲಿ ಹೈನುಗಾರಿಕೆಯ ಪಾತ್ರ ಮೊದಲಾದ ಅಂಶಗಳ ಬಗ್ಗೆ ಚಿತ್ರಣವನ್ನು ಈ ಅಧ್ಯಾಯದಲ್ಲಿ ನೀಡಲಾಗಿದೆ.

೩. ಅಧ್ಯಯನದ ಪ್ರದೇಶ ಪರಿಚಯ ಮತ್ತು ಇದರ ವ್ಯಾಪ್ತಿಯಲ್ಲಿ ಹೈನುಗಾರಿಕೆಯ ಪರಿಸ್ಥಿತಿ:

ಈ ಅಧ್ಯಾಯದಲ್ಲಿ ಅಧ್ಯಯನ ಪ್ರದೇಶದ ಪರಿಚಯ ಹಾಗೂ ಈ ವ್ಯಾಪ್ತಿಯಲ್ಲಿ ಬರುವ ಕೆಲವೊಂದು ಹಾಲು ಉತ್ಪಾದಕರ ಸಹಕಾರ ಸಂಘ ಹಾಗೂ ಅವುಗಳ ಪಾತ್ರದ ಬಗ್ಗೆ ಸ್ಥೂಲ ಚಿತ್ರಣವನ್ನು ನೀಡಲಾಗಿದೆ.

೪. ಹೈನುಗಾರಿಕಾ ಅಭಿವೃದ್ಧಿಗೆ ಸಹಕಾರಿ ಸಂಘಗಳ ಕೊಡುಗೆಗಳ ಕುರಿತು ವಿಶ್ಲೇಷಣೆ

ಈ ಅಧ್ಯಾಯದಲ್ಲಿ ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟದ ಪಾತ್ರ, ಪ್ರಶ್ನಾವಳಿಗೆ ಉತ್ತರಿಸಿದವರಿಗೆ ಸಂಬಂಧಿಸಿದಂತೆ ಸಾಮಾನ್ಯ ಮಾಹಿತಿಗಳು ಮತ್ತು ಅದರ ವಿಶ್ಲೇಷಣೆಗಳು, ಹೈನುಗಾರಿಕೆಯಲ್ಲಿ ತೊಡಗಿರುವವರ ಅಭಿಪ್ರಾಯಗಳು ಹಾಗೂ ಸಮಸ್ಯೆಗಳನ್ನು ಸರಿಪಡಿಸುವ ಮಾರ್ಗೋಪಾಯಗಳ ಬಗ್ಗೆ ತಿಳಿಸಲಾಗಿದೆ.

೫. ಅಧ್ಯಯನದ ಶೋಧ, ಸಾರಾಂಶ ಮತ್ತು ಕೊನೆಯ ಮಾತು

ಈ ಪ್ರಬಂಧದ ಕೊನೆಯ ಅಧ್ಯಾಯದಲ್ಲಿ ಕೆಲವೊಂದು ಸಲಹೆ ಸೂಚನೆ, ಭವಿಷ್ಯದ ಸಂಶೋಧನಾ ಸಾಧ್ಯತೆಗಳ ಬಗ್ಗೆ ತಿಳಿಸಲಾಗಿದೆ.

೧.೧೦ ಉಪಸಂಹಾರ:

ಭಾರತದ ಆರ್ಥಿಕ ಅಭಿವೃದ್ಧಿಯು ಗ್ರಾಮೀಣ ಅಭಿವೃದ್ಧಿಯನ್ನು ಅವಲಂಬಿಸಿದೆ. ಬೃಹತ್ ಕೈಗಾರಿಕೆಗಳು ಮತ್ತು ಆಧುನಿಕ ಮಾಹಿತಿ ಜಾಲದ ಜೊತೆಗೆ ನಗರಗಳು ವೇಗವಾಗಿ ಬೆಳೆಯುತ್ತಿರುವಾಗ ಹಳ್ಳಿಗಳ ಅಭಿವೃದ್ಧಿಗೂ ಪ್ರಾಮುಖ್ಯತೆಯನ್ನು ನೀಡಬೇಕು. ಈ ನಿಟ್ಟಿನಲ್ಲಿ ಗ್ರಾಮೀಣ ಅಭಿವೃದ್ಧಿಯು ಕೃಷಿಯ ಜೊತೆಗೆ ಅದಕ್ಕೆ ಪೂರಕವಾದ ಇತರ ಚಟುವಟಿಕೆಯಿಂದ ಸಾಧ್ಯ. ಅದರಲ್ಲಿ ಹೈನುಗಾರಿಕೆಯೂ ಒಂದು.

ಅಧ್ಯಾಯ–೨

ಹೈನುಗಾರಿಕಾ ಉದ್ಯಮದ ಕುರಿತು ಮಾಹಿತಿ ಅನುಷಂಗಿಕ ಮೂಲಗಳಿಂದ

ಅಧ್ಯಾಯ – ೨

ಹೈನುಗಾರಿಕಾ ಉದ್ಯಮದ ಕುರಿತು ಮಾಹಿತಿ ಅನುಷಂಗಿಕ ಮೂಲಗಳಿಂದ

೨.೧ ಪೀಠಿಕೆ

ಪ್ರಸ್ತುತ ಭಾರತ ದೇಶದ ಆರ್ಥಿಕತೆಯಲ್ಲಿ ಹೈನು ಉದ್ದಿಮೆಯು ಅತ್ಯಂತ ಪ್ರಮುಖ ಪಾತ್ರವನ್ನು ವಹಿಸಿದೆ. ಕೃಷಿ ಪ್ರಧಾನವಾದ ನಮ್ಮ ದೇಶದಲ್ಲಿ ಹೈನುಗಾರಿಕೆಯು ಪ್ರಧಾನವಾಗಿ ಕೃಷಿಗೆ ಉಪಕಸುಬಾಗಿ ಮೂಡಿ ಬರುತ್ತಿದೆ. ಭಾರತವು ಪ್ರಪಂಚದಲ್ಲೇ ಅತೀ ಹೆಚ್ಚು ಹೈನು ಉತ್ಪಾದನಾ ರಾಷ್ಟ್ರವಾಗಿದ್ದು ಇಲ್ಲಿರುವ ಅಪಾರ ಉತ್ತಮ ತಳಿಯ ಜಾನುವಾರುಗಳು ಮಧ್ಯಮ ಹಾಗೂ ಬಡವರ್ಗದ ಜನರ ಬಳಿಯಿದ್ದು ಹೈನುಗಾರಿಕೆ ನಿರ್ವಹಿಸುತ್ತಿದ್ದಾರೆ. ಕೇವಲ ಹಾಲು ಮಾತ್ರವಲ್ಲದೆ ಹಾಲಿನ ಉಪಉತ್ಪನ್ನಗಳ ಉತ್ಪಾದನೆಯಲ್ಲಿ ಕೂಡ ಅಷ್ಟೇ ಮುಂಚೂಣಿಯಲ್ಲಿದೆ. ಅನಾದಿಕಾಲದಿಂದಲೂ ದನಕರುಗಳ ಸಾಕಣೆಯು ರೈತರ ಒಂದು ಅವಿಭಾಜ್ಯ ಅಂಗವಾಗಿದೆ. ಪಶು ಸಂಗೋಪನೆಯಿಲ್ಲದೆ ವ್ಯವಸಾಯವೇ ಇಲ್ಲ ಎಂಬಂತಹ ಮಾತು ಇಂದು ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡಿದ್ದು, ಇಂದು ಟ್ರಾಕ್ಟರ್, ರಸಗೊಬ್ಬರಗಳು ಹಾಸುಹೊಕ್ಕಿವೆ. ಈಚೀಚೆಗೆ ಮಾನವನ ಉಪಟಳಕ್ಕೆ ಒಳಗಾಗಿ ಪ್ರಕೃತಿಯು ವಿನಾಶದ ಹಂತಕ್ಕೆ ತಲುಪುತ್ತಿದೆ. ಮಾನವ ತನ್ನ ಆಗುಹೋಗುಗಳನ್ನು ಪೂರೈಸಿಕೊಳ್ಳಲು ಪ್ರಕೃತಿಯ ಹೇರಳ ಸಂಪತ್ತನ್ನು ಅನಾವಶ್ಯಕವಾಗಿ ಹಾಳು ಮಾಡಿಕೊಳ್ಳುತ್ತಿದ್ದಾನೆ.

ಈಗಿನ ದಿನಗಳಲ್ಲಿ ರೈತರ ವ್ಯವಸಾಯ ಮಳೆರಾಯನೊಂದಿಗೆ ಕಾದಾಡಿದಂತೆಯೇ ಸರಿ. ಇದಕ್ಕೆ ಕಾರಣ ಸಕಾಲದಲ್ಲಿ ಮಳೆಯಾಗದೆ ರೈತರ ಬೆಳೆಗೆ ಹಾನಿಯಾಗಿ ಅದರಿಂದ ನಿರೀಕ್ಷಿತ ಫಲ ದೊರಕದಿರಬಹುದು ಅಥವಾ ಬೆಳೆ ಕೈಗೂಡದೆ ಸಂಪೂರ್ಣ ಹಾನಿಯಲ್ಲೇ ಅನುಭವಿಸಬೇಕಾಗಬಹುದು. ಇಂತಹ ಸನ್ನಿವೇಶಗಳಲ್ಲಿ ಕೃಷಿಯಾಧಾರಿತ ಆದಾಯ ನಿಂತುಹೋಗುವ ಸಂಭವವೇ ಹೆಚ್ಚು. ಒಂದು ವೇಳೆ ಇಂತಹ ಸಮಯದಲ್ಲಿ ಹೈನುಗಾರಿಕೆಯನ್ನು ಅವರು ಅವಲಂಭಿಸಿದ್ದೇ ಆದರೆ ಅದರಿಂದ ವರ್ಷಪೂರ್ತಿ ನಿಗದಿತ ಆದಾಯವನ್ನು ಪಡೆಯಬಹುದಾಗಿದೆ. ಏರುಪೇರಾಗುತ್ತಿರುವ ಕೃಷಿ ಉತ್ಪನ್ನಗಳ ಬೆಲೆಗೆ ಹೋಲಿಸಿದರೆ, ಹೈನು ಉದ್ಯಮದಿಂದ ವರ್ಷವಿಡೀ ಹೆಚ್ಚು ಕಡಿಮೆ ಸ್ಥಿರ ಆದಾಯವನ್ನು ಪಡೆಯಬಹುದು.

ಹೈನುಗಾರಿಕೆಯಿಂದ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಲೂ ಸಾಧ್ಯ. ಯಾಕೆಂದರೆ ಆಹಾರ ತಜ್ಞರ ಪ್ರಕಾರ ಹಾಲು ಒಂದು ಸರ್ವೋತ್ತಮ ಆಹಾರ. ಇದರಲ್ಲಿ ಮಾನವನ

ಬೆಳವಣಿಗೆಗೆ ಬೇಕಾದ ಎಲ್ಲಾ ಪೋಷಕಾಂಶಗಳು ಅಡಕವಾಗಿವೆ. ಅಲ್ಲದೆ ಕೃಷಿಯಿಂದ ದೊರಕುವ ಮಾನವನ ಸೇವನೆಗೆ ಅನರ್ಹವಾದ ಉಪವಸ್ತುಗಳಾದ ಹುಲ್ಲು, ಕಳೆಗಿಡಗಳು ಹಾಗೂ ಇತರ ಬೆಳೆಗಳನ್ನು ಜಾನುವಾರುಗಳ ಆಹಾರವಾಗಿ ಬಳಸಿ ಅದರಿಂದ ಉತ್ತಮ ಮಟ್ಟದ ಮಾನವನ ಆಹಾರಗಳನ್ನು ರಾಸುಗಳಿಂದ ಪಡೆಯಬಹುದಾಗಿದೆ. ಅಲ್ಲದೆ ಜಾನುವಾರುಗಳ ಗೊಬ್ಬರ, ಅವುಗಳಿಂದ ಉಳುಮೆ ಇವೆಲ್ಲವೂ ರೈತನಿಗೆ, ಪರಿಸರಕ್ಕೆ, ಆರೋಗ್ಯಕ್ಕೆ ಹಾಗೂ ದೇಶಕ್ಕೂ ಒಳಿತು ಎಂದು ಹೇಳಿದರೂ ಅತಿಶಯೋಕ್ತಿಯಾಗಲಾರದು.

೨.೨ ಮಂಗಳೂರು ತಾಲೂಕಿನಲ್ಲಿ ಹೈನುಗಾರಿಕೆಯಿಂದಾದ ಬದಲಾವಣೆಗಳು

ಬದುಕು ನಿಂತ ನೀರಲ್ಲ. ಬದಲಾವಣೆ ಬದುಕಿನ ಮೂಲಭೂತ ತತ್ವ. ಜಾಣರಾದವರು ಈ ಬದಲಾವಣೆಯೊಂದಿಗೆ ಅಗತ್ಯಕ್ಕೆ ತಕ್ಕಂತೆ ಹೊಂದಿಕೊಂಡು ಅಭಿವೃದ್ಧಿಯಾಗುತ್ತಾರೆ. ಎಲ್ಲಾ ಕ್ಷೇತ್ರಗಳಂತೆ ಹೈನುಗಾರಿಕಾ ಕ್ಷೇತ್ರದಲ್ಲೂ ಹಲವಾರು ರೀತಿಯ ಬದಲಾವಣೆಗಳು ಉಂಟಾಗಿವೆ. ಇತ್ತೀಚಿನ ದಿನಗಳಲ್ಲಿ ಹೈನುಗಾರಿಕೆಯಲ್ಲಿ ಮಂಗಳೂರು ತಾಲೂಕಿನ ಜನರು ಹಲವು ರೀತಿಯ ಬದಲಾವಣೆಯ ಹಾದಿಯಲ್ಲಿ ತೊಡಗಿಕೊಂಡಿದ್ದಾರೆ. ಅವುಗಳಲ್ಲಿ ಪ್ರಮುಖವಾದವುಗಳು ಇಲ್ಲಿ ಗುರುತಿಸಿಕೊಳ್ಳಲಾಗಿದೆ.

ಅ. ಗ್ರಾಮೀಣ ಉದ್ಯೋಗ:

ಬಹಳಷ್ಟು ಜನರ ಅಭಿಪ್ರಾಯದಂತೆ ಹೈನುಗಾರಿಕೆಯು ಗ್ರಾಮೀಣ ಜನತೆಗೆ ಉದ್ಯೋಗ ಅವಕಾಶವನ್ನು ಕಲ್ಪಿಸಿದೆ. ಇಲ್ಲಿನ ಜನತೆ ಹೈನುಗಾರಿಕೆಯನ್ನು ತಮ್ಮ ಉಪಕಸುಬಾಗಿ ಮಾಡಿಕೊಂಡಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಇರುವ ಹಾಲು ಉತ್ಪಾದಕರ ಸಹಕಾರ ಸಂಘಗಳು ಅಲ್ಪ ಪ್ರಮಾಣದ ವೇತನ ನೀಡುವುದರೊಂದಿಗೆ ಕೆಲವರಿಗೆ ಉದ್ಯೋಗ ನೀಡಿತು. ಹಾಲು ಸಾಗಿಸುವ ವಾಹನಕ್ಕೆ ಕೆಲಸಗಾರರು, ಅಲ್ಲದೆ ಹಾಲು ಶೇಖರಣಾ ವಾಹನಗಳು ಹಳ್ಳಿಗಳಿಂದಲೇ ಗುತ್ತಿಗೆಗೆ ಪಡೆಯುವಂತಾಯಿತು. ಸಂಘ ಇರುವ ಪ್ರದೇಶದಲ್ಲಿ ಅಂಗಡಿಗಳು ಹುಟ್ಟಿಕೊಂಡವು. ಇದರಿಂದಾಗಿ ವಾರದ ಹಾಲು ಮಾರಾಟದಿಂದ ಬರುವ ಹಣದಿಂದ ವ್ಯಾಪಾರವು ಕೂಡ ಉತ್ತಮವಾಗಿ ನಡೆಯುವುದನ್ನು ಕಾಣಬಹುದು.

ಆ. ಹಣದ ಲಭ್ಯತೆ:

ಅದೊಂದು ಕಾಲದಲ್ಲಿ ಹಾಲನ್ನು ಹೋಟೇಲ್ ಅಥವಾ ಮನೆ-ಮನೆಗೆ ಮಾರಾಟ ಮಾಡಿದರೆ ತಮ್ಮ ಪ್ರತಿಷ್ಠೆ, ಗೌರವಗಳು ಕಡಿಮೆ ಆಗುತ್ತದೆ ಎಂಬ ಮನೋಭಾವನೆ ಜನರಲ್ಲಿತ್ತು. ಆದರೆ ದಕ್ಷಿಣ ಕನ್ನಡ ಹಾಲು ಒಕ್ಕೂಟವು ಗ್ರಾಮೀಣ ಸಂಘಗಳನ್ನು ಸ್ಥಾಪಿಸುವುದರ ಮೂಲಕ

ಗ್ರಾಮೀಣ ಜನರನ್ನು ಆಕರ್ಷಿಸಿ ಹಾಲು ಮಾರಾಟದಿಂದ ಹಣಕಾಸಿನ ಲಭ್ಯತೆಯನ್ನು ಗ್ರಾಮೀಣ ಜನರಿಗೆ ಮನವರಿಕೆ ಮಾಡಿ ಜನರಿಗೆ ಆದಾಯ ಬರುವಂತೆ ಮಾಡಿತು.

ಇ. ಹಾಲು ಉತ್ಪಾದಕರ ಸಹಕಾರ ಸಂಘ:

ಗ್ರಾಮೀಣ ಪ್ರದೇಶದಲ್ಲಿ ಸ್ಥಾಪಿತವಾದ ಹಾ.ಉ.ಸ. ಸಂಘಗಳ ಚಟುವಟಿಕೆಯನ್ನು ಅರಿತ ಇಲ್ಲಿನ ಜನರು ನಿಧಾನವಾಗಿ ತಮ್ಮ ಹೆಚ್ಚಿನ ಕಾರ್ಯಗಳನ್ನು ಈ ಸಂಘಗಳ ಮೂಲಕ ಸಾಧಿಸಲಾರಂಭಿಸಿದರು. ರೈತರು ಒಬ್ಬರನ್ನೊಬ್ಬರು ದಿನಕ್ಕೆ ಎರಡು ಬಾರಿ ಸಂಪರ್ಕಿಸುವ ವೇದಿಕೆಯಾಯಿತು. ಸರದಿ ಸಾಲಲ್ಲಿ ಹಾಲು ಹಾಕುವ ಅನುಭವದಿಂದ ಶಿಸ್ತಿನ ಬಗ್ಗೆ ತಕ್ಕಮಟ್ಟಿನ ಜ್ಞಾನವನ್ನ ಪಡೆದರು. ಅಲ್ಲದೆ ಊರಿಗೆ ಪಶು ಆಹಾರ ಬರುವಂತಾಯಿತು. ಸಂಘದ ಚಟುವಟಿಕೆಗಳಲ್ಲಿ ಭಾಗಿಯಾಗಿ ಸಹಕಾರಿ ತತ್ವದ ಬಗ್ಗೆ ಜನರಲ್ಲಿ ಪರಿಜ್ಞಾನ ಬೆಳೆಯಿತು.

ಈ. ಮಹಿಳೆಯರ ಆರ್ಥಿಕ ಸ್ಥಿತಿ:

ಕೇಂದ್ರ ಸರಕಾರದ ಸ್ಟೆಪ್ ಯೋಜನೆಯಡಿ ದ.ಕ. ಹಾಲು ಒಕ್ಕೂಟವು ಹಾಲು ಉತ್ಪಾದಕರ ಮಹಿಳಾ ಸಹಕಾರಿ ಸಂಘಕ್ಕೆ ಎಲ್ಲಾ ಸ್ತರಗಳಲ್ಲಿ ಮಹಿಳೆಯರನ್ನು ನಿಯಮ ಪ್ರಕಾರ ನೇಮಕ ಮಾಡಿಕೊಳ್ಳಲಾಯಿತು. ಇದರಂತೆ ಗ್ರಾಮೀಣ ಭಾಗದಲ್ಲಿ ಮನೆ ಚಟುವಟಿಕೆಯೊಂದಿಗೆ ಸಂಘದ ವ್ಯವಹಾರದಲ್ಲಿ ಸಂಪೂರ್ಣ ತೊಡಗಿಸುವಂತೆ ಮಾಡಿ ಅವರಲ್ಲಿ ಸ್ವಾವಲಂಬಿ ಬದುಕನ್ನು ರಚಿಸಿತು. ತನ್ನ ಕುಟುಂಬದ ಆರ್ಥಿಕತೆಯನ್ನು ಪೂರೈಸುವಲ್ಲಿ ಕೈ ಜೋಡಿಸಿರುವುದು ಮಾತ್ರವಲ್ಲದೆ, ಸಭೆ ಸಮಾರಂಭಗಳಲ್ಲಿ ವಾಕ್‌ಚಾತುರ್ಯ ಸಮಯ ಪ್ರಜ್ಞೆ ಬೆಳೆಸಿಕೊಂಡಿದ್ದಾರೆ. ಒಟ್ಟಿನಲ್ಲಿ ಮಹಿಳೆಯೊಬ್ಬಳು ಮನೆಯಿಂದ ಸಮಾಜದ ಮುಖ್ಯ ವಾಹಿನಿಗೆ ಬರಲು ಹೈನುಗಾರಿಕೆಯು ಕೂಡ ಸಹಕಾರಿಯಾಗಿದೆ ಎಂದರೆ ತಪ್ಪಾಗಲಾರದು.

ಉ. ಗ್ರಾಮೀಣ ಪ್ರದೇಶದಲ್ಲಿ ಮಾಹಿತಿ, ಮಾರ್ಗದರ್ಶನ:

ದ.ಕ. ಹಾ. ಒಕ್ಕೂಟದ ಅಧಿಕಾರಿಗಳು ಹಳ್ಳಿಗಳಿಗೆ ತೆರಳಿ ಅಲ್ಲಿನ ಜನರಿಗೆ ಮಾರ್ಗದರ್ಶನ, ಮಾಹಿತಿ ಪಡೆಯುತ್ತಾ ಬಂದಿದೆ. ರೈತರ ಮನೆಗೆ ತೆರಳಿ ಅವರೊಂದಿಗೆ ಚರ್ಚಿಸಿ ವಿಷಯ ಅರಿತು ಮಾರ್ಗೋಪಾಯ ಕಂಡುಕೊಳ್ಳಲು ಸಹಕಾರಿ ಆಗಿದೆ. ಸಂಘಗಳಲ್ಲಿಯೇ ಸಭೆ, ಮಾಹಿತಿ ಶಿಬಿರ, ವಿಚಾರ ಸಂಕಿರಣ ಹಾಗೂ ಜಾನುವಾರು ಮೇಳ ನಡೆಸಿದೆ. ವಿವಿಧ ಇಲಾಖೆಯ ಅಧಿಕಾರಿಗಳನ್ನು ಪರಿಚಯಿಸಿದೆ. ಸರಕಾರದ ಬೆಂಬಲ ಬೆಲೆಯಿಂದಾಗಿ ಮಹಿಳೆಯರು ಅತೀ ಹೆಚ್ಚು ಉಳಿತಾಯ ಖಾತೆ ತೆರೆಯುವಂತಾಗಿದೆ. ಬ್ಯಾಂಕ್ ಅಧಿಕಾರಿಗಳು ಸಂಘಕ್ಕೆ ಬಂದು ಉಳಿತಾಯ ಖಾತೆ ತೆರೆಯಲು ಸಹಕರಿಸಿದ ನಿದರ್ಶನಗಳನ್ನು ಕೂಡ ನಾವು ಕೆಲವೆಡೆಗಳಲ್ಲಿ ಕಾಣಬಹುದು.

ಊ. ಹಣಕಾಸಿನ ಪೂರೈಕೆ:

ಗ್ರಾಮೀಣ ಪ್ರದೇಶದ ಜನರಿಂದ ಪಡೆದ ಹಾಲನ್ನು ಮಾರಾಟ ಮಾಡಿ ಒಕ್ಕೂಟವು ದಿನವಹಿ ಸರಾಸರಿ ದಿನಕ್ಕೆ ೩೮ ಲಕ್ಷ ರೂಪಾಯಿಯನ್ನು ಹಳ್ಳಿಗಳಿಗೆ ಕಳುಹಿಸಿ ಕೊಡುತ್ತಿದೆ. ಸರಕಾರದ ಬೆಂಬಲ ಬೆಲೆ ರೂಪದಲ್ಲಿ ಹಳ್ಳಿಗಳಿಗೆ ಹಣದ ಪೂರೈಕೆ ಆಗುತ್ತಿದೆ. ಹಾಲು ಉತ್ಪಾದಕರಿಗೆ ಬೋನಸ್ ಲಭಿಸಿದೆ. ಇವೆಲ್ಲವು ಗ್ರಾಮೀಣ ಪ್ರದೇಶದಲ್ಲಿನ ಹಣಕಾಸಿನ ಪೂರೈಕೆಯನ್ನು ಅಭಿವೃದ್ಧಿಪಡಿಸುತ್ತದೆ.

ಋ. ಸಮಾಜಕ್ಕೆ ನಾಯಕರುಗಳ ನೀಡಿಕೆ:

ಹಾ.ಉ.ಸ. ಸಂಘದಲ್ಲಿ ವ್ಯವಸ್ಥಿತ ಚುನಾವಣೆ ನಡೆಯುವುದರಿಂದ ಅಧ್ಯಕ್ಷರು, ನಿರ್ದೇಶಕರು, ಕಾರ್ಯದರ್ಶಿಗಳನ್ನು ಆಯ್ಕೆ ಮಾಡಲಾಗುತ್ತದೆ. ಇದರಿಂದ ಗ್ರಾಮೀಣ ಪ್ರದೇಶದಲ್ಲಿ ನೂತನ ಯುವ ನಾಯಕರು ಬೆಳೆದು ಬರುತ್ತಾರೆ.

ಎ. ಹಳ್ಳಿಗಳಲ್ಲಿ ಮಾಹಿತಿ ತಂತ್ರಜ್ಞಾನ:

ಕೇವಲ ನಗರ ಪ್ರದೇಶಗಳಿಗೆ ಸೀಮಿತವಾಗಿದ್ದ ಮಾಹಿತಿ ತಂತ್ರಜ್ಞಾನ ಹಾಲು ಉತ್ಪಾದಕರ ಸಹಕಾರ ಸಂಘಗಳ ಮೂಲಕ ಹಳ್ಳಿಗಳಿಗೆ ಪಾದಾರ್ಪಣೆ ಮಾಡುವಂತಾಯಿತು. ಹಾಲಿನಲ್ಲಿರುವ Fat ನೋಡಲು ಸ್ವಯಂಚಾಲಿತ ತೂಕದ ಯಂತ್ರ (Automatic Electronic Weighing Machine) ಜೊತೆಗೆ ಹಾಲಿನ ಗುಣಮಟ್ಟವನ್ನು ಹೆಚ್ಚಿಸಲು ಬಲ್ಕ್ ಮಿಲ್ಕ್ ಕೂಲರ್‌ಗಳು, ಹುಲ್ಲು ಕತ್ತರಿಸುವ ಯಂತ್ರ, ಹಾಲು ಕರೆಯುವ ಯಂತ್ರ, ಹಟ್ಟಿ ತೊಳೆಯುವ ಯಂತ್ರಗಳು ಮುಂತಾದ ಸೌಲಭ್ಯಗಳು ಗ್ರಾಮೀಣ ಜನರಿಗೆ ಲಭ್ಯವಾಗಿದೆ.

ಏ. ತರಬೇತಿ ಕಾರ್ಯಕ್ರಮಗಳು:

ಆಧುನಿಕ ಯುಗದಲ್ಲಿ ತಂತ್ರಜ್ಞಾನವು ಪ್ರತಿಯೊಂದು ಕ್ಷೇತ್ರದಲ್ಲಿ ಪ್ರಮುಖ ಸ್ಥಾನ ವಹಿಸುತ್ತದೆ. ಈ ತಂತ್ರಜ್ಞಾನವನ್ನು ದಕ್ಷವಾಗಿ ಬಳಸಿಕೊಳ್ಳಬೇಕಾದರೆ ತರಬೇತಿ ಅತೀ ಅಗತ್ಯ. ದ.ಕ. ಹಾಲು ಒಕ್ಕೂಟವು ಸಹಕಾರಿ ತರಬೇತಿ, ಮಹಿಳೆಯರ ಸಬಲೀಕರಣಕ್ಕೆ ಅವಶ್ಯಕವಾದ ಹಲವಾರು ಮಾಹಿತಿ ಶಿಬಿರಗಳು, ಅಧ್ಯಕ್ಷರುಗಳ ತರಬೇತಿ, ಕಾರ್ಯದರ್ಶಿ ತರಬೇತಿ, ಕೃತಕ ಗರ್ಭಧಾರಣಾ ತರಬೇತಿ, ಸಿಬ್ಬಂದಿ ತರಬೇತಿಗಳು ಮಂಗಳೂರು ಪ್ರದೇಶದಲ್ಲೂ ನಡೆಸುವುದರಿಂದ ಇಲ್ಲಿನ ಜನರಿಗೆ, ಅಲ್ಲದೆ ರೈತರಿಗೆ ಉಪಯುಕ್ತವಾಗಿದೆ.

ಮೇಲಿನ ಈ ಎಲ್ಲಾ ಅಂಶಗಳು ಮಂಗಳೂರು ತಾಲೂಕಿನಲ್ಲಿ ಹೈನುಗಾರಿಕೆಯಿಂದಾಗಿ ಈ ಎಲ್ಲಾ ಪರಿವರ್ತನೆಗಳನ್ನು ನಾವು ಕಾಣಬಹುದಾಗಿದೆ.

೨.೩ ಮಂಗಳೂರು ತಾಲೂಕಿನಲ್ಲಿ ಹೈನು ಉದ್ಯಮವು ನಡೆದು ಬಂದ ರೀತಿ:

ಹೈನು ಉದ್ಯಮವು ನಮ್ಮ ದೇಶದಲ್ಲಿ ಅನಾದಿಕಾಲದಿಂದಲೂ ಆಚರಣೆಯಲ್ಲಿರುವ ರೈತರ ಕಸುಬು. ಈ ತಾಲೂಕಿನ ರೈತರು ಗೊಲ್ಲರಲ್ಲದಿದ್ದರೂ ಜಾನುವಾರು ಸಾಕಾಣಿಕೆಯನ್ನು ಹಲವಾರು ವರ್ಷಗಳಿಂದ ಮಾಡುತ್ತಾ ಬಂದಿದ್ದಾರೆ. ಹೈನುಗಾರಿಕೆಯು ಅವರ ದೈನಂದಿನ ಅಂಗವಾದರೂ, ಅದನ್ನವರು ಗಂಭೀರವಾಗಿ ಪರಿಗಣಿಸಿರಲಿಲ್ಲ. ಸದಾ ತಮ್ಮ ತಮ್ಮ ಕೆಲಸ ಕಾರ್ಯಗಳಲ್ಲಿ ಮಗ್ನರಾಗಿರುವ ಹಾಗೂ ವಿವಿಧ ಸಹ ವೃತ್ತಿಗಳಲ್ಲಿ ತೊಡಗಿರುವ ಇಲ್ಲಿನ ರೈತಾಪಿ ಜನರು ವೈಜ್ಞಾನಿಕ ರೀತಿಯ ಹೈನು ಉದ್ಯಮವನ್ನು ಇನ್ನೂ ಕೂಡ ಯಶಸ್ವಿಯಾಗಿ ಅಳವಡಿಸಿಕೊಂಡಿಲ್ಲ. ಹೈನುಗಾರಿಕೆಯಲ್ಲಿರುವ ಲೋಪದೋಷಗಳನ್ನು ಕಡಿಮೆಗೊಳಿಸಲು ಸರಕಾರವು ಚಿಂತನೆಯನ್ನು ನಡೆಸಿ ಹಲವಾರು ಯೋಜನೆ ಹಾಗೂ ಕಾರ್ಯಕ್ರಮಗಳನ್ನು ಜಾರಿಗೊಳಿಸಿತ್ತು. ಇದರ ಮೂಲಕ ರೈತರ ಬದುಕನ್ನು ಹಸನು ಮಾಡಲು ಹೈನುಗಾರಿಕೆಗೆ ಯೋಗ್ಯ ಸೌಲಭ್ಯಗಳನ್ನು ಕಲ್ಪಿಸಿ ಕೊಡಲು ನಿರ್ಧರಿಸಿತು. ಅಂತೆಯೇ ಅಂದಿನ ಕರ್ನಾಟಕ ಸರಕಾರವು ೧೯೭೧ ರಲ್ಲಿ ಮಂಗಳೂರಿನಲ್ಲಿ ೧೦,೦೦೦ ಲೀಟರ್ ಸಾಮರ್ಥ್ಯದ ಹಾಲನ್ನು ಸಂಸ್ಕರಿಸುವ ಡೈರಿಯನ್ನು ನಿರ್ಮಿಸುವುದರೊಂದಿಗೆ ವ್ಯವಸ್ಥಿತವಾದ ಹಾಲಿನ ಸಂಗ್ರಹಣೆ ಹಾಗೂ ವಿತರಣಾ ವ್ಯವಸ್ಥೆಯು ಇಲ್ಲಿ ಪ್ರಾರಂಭಗೊಂಡಿತು. ಪ್ರಾರಂಭದ ಹಂತದಲ್ಲಿ ಹಾಲಿನ ಸಂಗ್ರಹಣೆಯು ದಿನದಲ್ಲಿ ಕೇವಲ ೩,೦೦೦ ಲೀಟರ್ ಇದ್ದಿತು. ಅಂದಿನ ದಿನಗಳಲ್ಲಿ ಮಂಗಳೂರಿನ ಅಕ್ಕಪಕ್ಕದ ಗ್ರಾಮಗಳಲ್ಲಿ ಹಾಲಿನ ಸರಬರಾಜು ದೃಷ್ಟಿಯಿಂದ ಮಾತ್ರ ಸಂಘಗಳನ್ನು ರಚಿಸಿಕೊಂಡಿದ್ದ ಕಾರಣ ವ್ಯವಸ್ಥಿತ ತಾಂತ್ರಿಕ ಸೌಲಭ್ಯಗಳನ್ನು ನಿರೀಕ್ಷಿತ ಮಟ್ಟದಲ್ಲಿ ಒದಗಿಸಲು ಸಾಧ್ಯವಾಗದೇ ಇದ್ದರಿಂದ ಹೆಚ್ಚಿನ ಯಶಸ್ಸನ್ನು ಹೊಂದಲು ಸಾಧ್ಯವಾಗಲಿಲ್ಲ.

ಈ ತಾಲೂಕಿನಲ್ಲಿಯೂ ನಿರುದ್ಯೋಗ, ಬಡತನ ಲಾಭ ತರದ ಭೂಹಿಡುವಳಿ, ಕುಡಿತ ಇಂತಹ ಇನ್ನೂ ಹಲವಾರು ಸಮಸ್ಯೆಗಳಿಂದ ಹಳ್ಳಿಯ ಆರ್ಥಿಕ ಸ್ಥಿತಿಗಳು ಹಾಳಾಗಿವೆ. ಇಂತಹ ಸನ್ನಿವೇಶದಲ್ಲಿ ಹೈನುಗಾರಿಕೆಯ ಮೂಲಕ ಜನರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಸಾಧ್ಯ ಎಂದು ತಿಳಿದುಕೊಂಡು, ಅಷ್ಟೇ ಅಲ್ಲದೆ ನಮ್ಮ ಈ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಾಲಿಗೆ ತೀವ್ರವಾದ ಬೇಡಿಕೆ ಇರುವುದನ್ನು ಮನಗಂಡು ಹೈನುಗಾರಿಕೆಯನ್ನು ಪ್ರೋತ್ಸಾಹಿಸಿ, ಸ್ಥಳೀಯವಾಗಿಯೇ ಹಾಲಿನ ಸಂಗ್ರಹಣೆಯನ್ನು ಹೆಚ್ಚಿಸುವುದು ಸಾಧ್ಯ ಹಾಗೂ ಅಗತ್ಯವೆಂದು ಭಾವಿಸಿ ಕರ್ನಾಟಕ ಹಾಲು ಮಹಾಮಂಡಳಿಯವರು ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯವರ ಕ್ಷೀರಧಾರೆ-೨ ಯೋಜನೆಯನ್ನು ೧೯೮೫ ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ವಿಸ್ತರಿಸಿ ಕಾರ್ಯಾಚರಣೆಯನ್ನು ಆರಂಬಿಸಲಾಗಿದೆ.

ಪ್ರಾರಂಭಿಕ ಹಂತದಲ್ಲಿ ಜಿಲ್ಲೆಯ ದಕ್ಷಿಣ ಭಾಗದ ತಾಲೂಕುಗಳಾದ ಪುತ್ತೂರು, ಸುಳ್ಯ, ಬಂಟ್ವಾಳದಲ್ಲಿ 'ಅಮೂಲ್' ಮಾದರಿ ಸಹಕಾರ ಸಂಘಗಳನ್ನು ಕರ್ನಾಟಕ ಹಾಲು ಮಹಾ ಮಂಡಳಿಯ ಮುಂಚೂಣಿ ತಂಡದ ಮೂಲಕ ರಚಿಸಿ ೧೯೮೫ ರ ಕೊನೆಯ ಭಾಗದಲ್ಲಿ ಪ್ರತೀ ನಿತ್ಯ ೫,೦೦೦ ಲೀಟರ್ ಹಾಲು ಸಂಗ್ರಹಿಸುವಲ್ಲಿ ಯಶಸ್ವಿಯಾಯಿತು. ಜಿಲ್ಲೆಯ ಹೈನುಗಾರಿಕೆಯ ಪ್ರಗತಿಯನ್ನು ಮನಗಂಡ ಕರ್ನಾಟಕ ಸರಕಾರವು ಮಂಗಳೂರು ಡೈರಿಯನ್ನು ೧೯೮೫ರ ಫೆಬ್ರವರಿ ೧೫ ರಂದು ಕರ್ನಾಟಕ ಹಾಲು ಮಹಾ ಮಂಡಳಿಯ ಆಡಳಿತಕ್ಕೆ ಹಸ್ತಾಂತರಿಸಿತು. ೧೯೮೬ ಮೇ ೮ ರಿಂದ ಕೆನರಾ ಹಾಲು ಒಕ್ಕೂಟದ ಉಪನಿಯಮದ ಅಮೂಲಾಗ್ರ ತಿದ್ದುಪಡಿಯೊಂದಿಗೆ ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟವು ಅಸ್ತಿತ್ವಕ್ಕೆ ಬಂದಿತು. ನಂತರ ದಿನಾಂಕ ೧-೯-೧೯೮೮ ರಂದು ಕರ್ನಾಟಕ ಮಹಾಮಂಡಳಿಯು ಮಂಗಳೂರು ಡೈರಿಯನ್ನು ದಕ್ಷಿಣ ಕನ್ನಡ ಜಿಲ್ಲಾ ಹಾಲು ಉತ್ಪಾದಕರ ಒಕ್ಕೂಟಕ್ಕೆ ಹಸ್ತಾಂತರಿಸಲಾಯಿತು.

೨.೪ ಆರ್ಥಿಕ ವ್ಯವಸ್ಥೆಯಲ್ಲಿ ಹೈನುಗಾರಿಕೆಯ ಪಾತ್ರ

'ಭಾರತ ಹಳ್ಳಿಗಳಲ್ಲಿ ವಾಸಿಸುತ್ತದೆ' ಎಂಬ ಮಹಾತ್ಮ ಗಾಂಧೀಜಿಯವರ ನುಡಿಯಂತೆ ಇಂದಿಗೂ ಶೇ. ೭೦ ರಷ್ಟು ಜನರು ಹಳ್ಳಿಗಳಲ್ಲೇ ವಾಸಿಸುತ್ತಿದ್ದಾರೆ. ಭಾರತದ ಅರ್ಥವ್ಯವಸ್ಥೆ ಕೃಷಿಯನ್ನು ಅವಲಂಭಿಸಿದೆ. ಪ್ರಾಚೀನ ಕಾಲದಲ್ಲಿ ಯಾರ ಬಳಿ ಎಷ್ಟು ಗೋವಂಶವಿರುತ್ತಿತ್ತೊ ಅವರನ್ನು ಅಷ್ಟು ಶ್ರೀಮಂತರು ಎನ್ನಲಾಗುತ್ತಿತ್ತು. ಹೀಗಾಗಿ ಪ್ರಾಚೀನ ಭಾರತ ಗೋವಂಶದ ಮೇಲೆ ನಿರ್ಧರಿತವಾದಂತಹ ಅರ್ಥವ್ಯವಸ್ಥೆಯನ್ನು ಹೊಂದಿತ್ತು. ಆದ್ದರಿಂದ ಪ್ರಪಂಚದಲ್ಲಿ ಭಾರತವು "ಚಿನ್ನದ ಹಕ್ಕಿ" ಎಂದು ಕರೆಯಲ್ಪಡುತ್ತಿತ್ತು. (ಕಾಮಧೇನು – ೩, ಶೈಲೇಶ್ ಹೊಳ್ಳ ಕೆ.ಎನ್. ೨೦೧೨) ದುಃಖದ ವಿಷಯವೆಂದರೆ ನಿರಂತರವಾಗಿ ನಡೆಯುತ್ತಿರುವ ಗೋಹತ್ಯೆಯಿಂದ ದೇಶದ ಅರ್ಥವ್ಯವಸ್ಥೆ ದುರ್ಬಲವಾಗುತ್ತಿದೆ. ೧೯೨೮ ರಲ್ಲಿ "ಭಾರತೀಯ ಕೃಷಿ ರಾಯಲ್ ಕಮೀಷನ್" ಬರೆದಿರುವಂತೆ ಭಾರತದ ಹಸು ಎತ್ತುಗಳು ದೇಶದ ಅರ್ಥವ್ಯವಸ್ಥೆಯ ಭಾರವನ್ನು ಹೊತ್ತಿವೆ.

ದೇಶದ ಆರ್ಥಿಕತೆಯಲ್ಲಿ ಪ್ರಾಣಿ ಉತ್ಪನಗಳಾದ ಹಾಲು, ಮಾಂಸ, ಚರ್ಮ ಹಾಗೂ ಗೊಬ್ಬರ ಮುಖ್ಯವಾಗಿವೆ ಎಂಬುವುದು ಸಾಮಾನ್ಯ ಪರಿಕಲ್ಪನೆ. ಗೋಮೂತ್ರ ಹಲವು ರೋಗಗಳಿಗೆ ಔಷಧಿಯಾಗಿ, ಕೀಟನಾಶಕವಾಗಿ ಉಪಯೋಗವಾಗುತ್ತದೆ ಎಂಬುದು ಸಾಬೀತಾಗಿದೆ.

ದೇಶದ ಆಂತರಿಕ ಉತ್ಪನ್ನಕ್ಕೆ ಕೃಷಿ ಹಾಗೂ ಸಂಬಂಧಿತ ಕ್ಷೇತ್ರಗಳ ಕೊಡುಗೆ ೧೯೫೦-೫೧ ರಲ್ಲಿ ೫೦% ಕ್ಕಿಂತ ಅಧಿಕವಾಗಿತ್ತು. ೧೯೮೦-೮೧ ರಲ್ಲಿ ಇದು ಶೇ. ೩೩ ಕ್ಕೆ ಇಳಿಯಿತು. ಇದಕ್ಕೆ ವ್ಯತಿರಿಕ್ತವಾಗಿ ಕೃಷಿ ಸಂಬಂಧಿತ ಕ್ಷೇತ್ರದಲ್ಲಿ ಪಶುಸಂಗೋಪನೆಯ ಕೊಡುಗೆ ೧೯೮೦-೮೧ ರಲ್ಲಿ ೧೮% ದಷ್ಟಿತ್ತು. ಪ್ರಸ್ತುತ ೨೦% ಕ್ಕಿಂತಲೂ ಹೆಚ್ಚಳವಾದದ್ದು ಗಮನಾರ್ಹವಾಗಿದೆ.

(http://www.irma.ac.in/.../1135_92876.)

ಆರ್ಥಿಕ ವ್ಯವಸ್ಥೆಯಲ್ಲಿ ಹೈನುಗಾರಿಕೆಯ ಪಾತ್ರವನ್ನು ಈ ರೀತಿ ಪಟ್ಟಿಮಾಡಬಹುದು. ಅವುಗಳಲ್ಲಿ ಪ್ರಮುಖವಾದವುಗಳು –

ಅ. ಹಾಲಿನ ಉತ್ಪಾದನೆ:

ದೇಶವು ಕಳೆದ ೨೦೦೦ನೇ ಸಾಲಿನಿಂದ ಪ್ರಪಂಚದಲ್ಲಿಯೇ ಅತಿ ಹೆಚ್ಚು ಹಾಲು ಉತ್ಪಾದಿಸುವ ರಾಷ್ಟ್ರವೆಂದು ಹೆಸರು ಪಡೆದಿದೆ. ೨೦೦೭-೦೮ನೇ ಸಾಲಿನಲ್ಲಿ ೧೦,೩೦೦ ಕೋಟಿ ಲೀಟರ್ ಹಾಲು ಉತ್ಪಾದನೆಯಾಗಿದ್ದು, ಜನರು ಹಾಲಿನ ಉತ್ಪಾದನೆಯ ಮೂಲಕ ತಮ್ಮ ಅರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಬಹುದಾಗಿದೆ. ರಾಷ್ಟ್ರಕ್ಕೆ ಡೈರಿ ಉತ್ಪನ್ನದಿಂದ ೫,೨೨೩.೬೦ ಕೋಟಿ ರೂ. ಆದಾಯ ಬರುತ್ತಿದೆ.

ಆ. ಸೆಗಣಿ (ಗೋಮಯ):

ಹೈನುಗಾರಿಕೆಯು ಸಗಣಿ ಉತ್ಪಾದನೆಯ ಹೆಚ್ಚಳಕ್ಕೆ ಸಹಕಾರಿಯಾಗಿದೆ. ಸಗಣಿ ಉತ್ಪಾದನೆಯಿಂದ ಅದೆಷ್ಟು ಸಾವಿರ ಕೋಟಿ ರೂಪಾಯಿಗಳಷ್ಟು ರಸಗೊಬ್ಬರ ಬಳಕೆಯನ್ನು ಕಡಿಮೆ ಮಾಡಿಕೊಳ್ಳಬಹುದು. ಗ್ರಾಮೀಣ ಅರ್ಥವ್ಯವಸ್ಥೆಯಲ್ಲಿ ಸಗಣಿಯನ್ನು ಅಡುಗೆ ಅನಿಲ ಉತ್ಪಾದನೆಗೂ ಬಳಸಿಕೊಳ್ಳಬಹುದು. ಮಾತ್ರವಲ್ಲದೆ, ಅನಿಲ ಬಳಕೆಯ ನಂತರ ಉಳಿಯುವ ತ್ಯಾಜ್ಯವನ್ನು ಉತ್ತಮ ಸಾವಯವ ಗೊಬ್ಬರವಾಗಿ ಕೂಡ ಬಳಸಿಕೊಳ್ಳಬಹುದು. ಇದರ ಮುಖಾಂತರ ಪೆಟ್ರೋಲ್ ಡೀಸೆಲ್‌ಗೆ ನೀಡಬೇಕಾದಂತಹ ವೆಚ್ಚವನ್ನು ಕಡಿಮೆಗೊಳಿಸಬಹುದು.

ಇ. ಗೋಮೂತ್ರ:

ಗೋಮೂತ್ರದಲ್ಲಿ ಶೇ. ೯೫ ರಷ್ಟು ನೀರು, ೨.೫% ಯೂರಿಯಾ ಹಾಗೂ ೨.೫% ದಷ್ಟು ಇತರ ರಾಸಾಯನಿಕಗಳಿಗೆ (http://www.agricultureinformation.com/.../169...) ಗೋಮೂತ್ರವು ಆರ್ಥಿಕ ವ್ಯವಸ್ಥೆಯಲ್ಲಿ ತನ್ನದೇ ಆದಂತಹ ಪಾತ್ರವನ್ನು ವಹಿಸುತ್ತದೆ.

ಗೋಮೂತ್ರದಿಂದ ಕೀಟನಾಶಕವನ್ನು ತಯಾರಿಸಿದ್ದೇ ಆದಲ್ಲಿ ರಾಸಾಯನಿಕ ಕೀಟನಾಶಕದ ಆಮದಿನಿಂದ ಖರ್ಚಾಗುವ ದೊಡ್ಡ ಮೊತ್ತವನ್ನು ಉಳಿಸಬಹುದು.

ಗೋಮೂತ್ರವನ್ನು ಹಲವು ಮಾನವ ಸಂಬಂಧಿ ಕಾಯಿಲೆಗಳಿಗೆ ಔಷಧಿಯಾಗಿ ಮತ್ತು ಹಲವು ಔಷಧಿಗಳ ತಯಾರಿಕೆಯಲ್ಲಿ ಬಳಸಬಹುದೆಂದು ವೈಜ್ಞಾನಿಕವಾಗಿ ಸಾಬೀತಾಗಿದೆ.

ಇ. ಮಾಂಸದ ಉತ್ಪಾದನೆ:

ದೇಶದ ಮಾಂಸದ ಉತ್ಪಾದನೆಯಲ್ಲಿ ಹೈನುಗಾರಿಕೆಯ ಕೊಡುಗೆಯು ಇದೆ. ನಮ್ಮಲ್ಲಿ ಗೋಮಾಂಸ ಸೇವಿಸುವವರ ಪ್ರಮಾಣ ಸೀಮಿತವಾಗಿದೆ. ಆದರೂ ಗೋವಿನ ರಕ್ಷಣೆಗಾಗಿ ಅನುಪಯುಕ್ತ ಹಾಗೂ ೧೨ ವರ್ಷಕ್ಕೂ ಮೇಲ್ಪಟ್ಟ ಅಶಕ್ತ ಜಾನುವಾರುಗಳನ್ನು ಮಾತ್ರ ಆಹಾರಕ್ಕಾಗಿ ಬಳಸಬೇಕೆಂಬ ನಿಯಮವಿದೆ.

ಉ. ಹೈನುಗಾರಿಕೆಯಿಂದ ಉದ್ಯೋಗ ಸೃಷ್ಟಿ:

ಹೈನುಗಾರಿಕೆಯಿಂದ ಶಿಕ್ಷಿತ ನಿರುದ್ಯೋಗಿಗಳಿಗೆ ಆದಾಯವನ್ನು ತಂದುಕೊಡಬಲ್ಲ ಉದ್ಯೋಗದ ಸೃಷ್ಟಿ ಆಗುತ್ತದೆ. ಹಾಲು, ಮೊಸರು, ಬೆಣ್ಣೆ, ತುಪ್ಪ, ಗೋಮೂತ್ರ, ಗೊಬ್ಬರ ಮುಂತಾದವುಗಳಿಂದ ಇಂದು ದೊಡ್ಡ ಮಾರಾಟ ವ್ಯವಸ್ಥೆಯ ಒಂದು ಭಾಗವಾಗಿ ಕಾರ್ಯನಿರ್ವಹಿಸುತ್ತದೆ. ಯುವಕರಿಗೆ ಸ್ವಯಂ ಉದ್ಯೋಗ ಸಿಗುತ್ತದೆ. ಹಳ್ಳಿಯ ಸಂಪಾದನೆ ಅಧಿಕವಾಗುತ್ತದೆ ಮತ್ತು ಹಳ್ಳಿಯ ಹಣದಿಂದ ಹಳ್ಳಿಗಳ ವಿಕಾಸವನ್ನು ಸ್ವಾವಲಂಬನೆಯಿಂದ ಮಾಡಬಹುದು.

ಒಟ್ಟಿನಲ್ಲಿ ಹೈನುಗಾರಿಕೆಯು ಒಂದು ಅರ್ಥವ್ಯವಸ್ಥೆಯ ಅಭಿವೃದ್ಧಿಗೆ ಪೂರಕವಾಗಿದೆ. ನಾವುಗಳು ಸರಿಯಾಗಿ ಹೈನುರಾಸುಗಳನ್ನು ಬಳಸಿಕೊಂಡರೆ ಅದರಿಂದ ಬಹಳಷ್ಟು ಆರ್ಥಿಕ ಲಾಭವಿದೆ. ಸುಮಾರು ೧,೫೦,೦೦೦ ರೂಪಾಯಿಗಳಷ್ಟು ಪ್ರತೀ ವರ್ಷ ಒಂದು ಹಸುವಿನಿಂದ ಒಂದು ಬಂಜೆ ಹಸುವಿನಿಂದ ಕೂಡ ಸುಮಾರು ೭೦,೦೦೦ ರೂಪಾಯಿಗಳಷ್ಟು ಲಾಭವಿದೆ.

ಭಾರತ ಸರಕಾರದ 'ಜೀವ ಜಯ ಕಲ್ಯಾಣ' ಬೋರ್ಡಿನ ಪ್ರಕಾರ ಒಂದು ಮುದಿ ಗೋವು ವರ್ಷಕ್ಕೆ ೪,೫೦೦ ಲೀ. ಬಯೋಗ್ಯಾಸ್, ೮೦ ಟನ್ ಗೊಬ್ಬರ, ೨೦೦ ಲೀಟರ್ ಸೆಂದ್ರಿಯ ಕೀಟನಾಶಕ ನೀಡುತ್ತದೆ. (ಕಾಮದೇನು, ಶೈಲೇಶ್ ಹೊಳ್ಳ ಕೆ.ಎನ್. ೨೦೧೦).

೨.೫ ಅಮೂಲ್ ಮಾದರಿಯಲ್ಲಿ ಸಹಕಾರಿ ಹೈನುಗಾರಿಕೆ:

ಅಮೂಲ್ ಮಾದರಿಯ ಸಹಕಾರಿ ಹೈನುಗಾರಿಕೆ ಪದ್ಧತಿ ಸಹಕಾರಿ ವ್ಯವಸ್ಥೆಯಲ್ಲಿ ಭಿನ್ನವಾದ ವಿಶಿಷ್ಟವಾದ ಸ್ಥಾನ ಪಡೆದುಕೊಂಡಿದೆ. 'ಅಮೂಲ್' ಹೆಸರು ಇಂದು ವಿಶ್ವದಲ್ಲಿ ಮನೆಮಾತಾಗಿದೆ. 'ದಿ ಟೇಸ್ಟ್ ಆಫ್ ಇಂಡಿಯಾ' ಎಂಬ 'ಅಮೂಲ್' ಜಾಹಿರಾತು ಭಾರತದ ಹಿರಿಮೆಯನ್ನು ವಿಶ್ವದಲ್ಲಿ ಹರಡಿಸಿದೆ. ಸಹಕಾರಿ ವ್ಯವಸ್ಥೆಯಡಿ ಹೈನುಗಾರಿಕೆ ಅಭಿವೃದ್ಧಿ ಪಡಿಸಿ

ಬಹುರಾಷ್ಟ್ರೀಯ ಕಂಪೆನಿಗಳಿಗೆ ಸ್ಪರ್ದೆ ನೀಡಿ ವಿಶ್ವ ಮಾರುಕಟ್ಟೆ ಪ್ರವೇಶಿಸಿದ ಕೀರ್ತಿ ಅಮೂಲ್ ಸಂಸ್ಥೆಗಿದೆ.

ಅಮೂಲ್ ಮಾದರಿ ಸಹಕಾರಿ ಹೈನುಗಾರಿಕಾ ಪದ್ಧತಿಯಲ್ಲಿ ಅಸಂಘಟಿತ ಹಾಲು ಉತ್ಪಾದಕರು ಸಹಕಾರ ಸಂಸ್ಥೆ ರಚಿಸಿಕೊಂಡು ತನ್ಮೂಲಕ ತಮ್ಮ ಅಭಿವೃದ್ಧಿಯಲ್ಲಿ ತಾವು ಪಾಲುದಾರರಾಗಿದ್ದಾರೆ. ಉತ್ಪಾದಕರು ಉತ್ಪಾದಕರಿಗಾಗಿ, ಉತ್ಪಾದಕರ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ.

ಅಮೂಲ್ ಮಾದರಿಯ ಸಹಕಾರಿ ಹೈನುಗಾರಿಕಾ ಪದ್ಧತಿಯಲ್ಲಿ ಕೆಲವೊಂದು ವಿಶೇಷತೆಗಳನ್ನು ಗುರುತಿಸಬಹುದು. ಅವುಗಳೆಂದರೆ:

- ಮಧ್ಯವರ್ತಿಗಳ ಪ್ರವೇಶವಿಲ್ಲದೆ, ಹಾಲು ಉತ್ಪಾದಕರೇ ಸ್ವತಃ ಮಾಲಿಕರಾಗಿ ವೃತ್ತಿಪರರನ್ನು ನೇಮಿಸಿಕೊಂಡು ನಿರ್ವಹಿಸುವಂತಹ ಸಂಸ್ಥೆಗಳನ್ನು ಹುಟ್ಟುಹಾಕುವುದು.
- ಉತ್ಪಾದಕರಿಗೆ ಗರಿಷ್ಠ ಪ್ರತಿಫಲ ನೀಡಲು, ಉತ್ಪಾದನಾ ವೆಚ್ಚ ಕಡಿಮೆ ಮಾಡಲು ಮಾಹಿತಿ ನೀಡುವುದು.
- ಗ್ರಾಹಕರಿಗೆ ನಿರಂತರ ಉತ್ತಮ ಗುಣಮಟ್ಟದ ಹಾಲು ಮತ್ತು ಹಾಲಿನ ಉಪಉತ್ಪನ್ನಗಳನ್ನು ಮಾರಾಟ ಮಾಡಿ ಗ್ರಾಹಕರು ನೀಡುವ ದರದಲ್ಲಿ ಗರಿಷ್ಠ ಪಾಲನ್ನು ಉತ್ಪಾದಕರಿಗೆ ನೀಡುವುದು.
- ಅಮೂಲ್ ಮಾದರಿಯ ಸಹಕಾರಿ ಹೈನುಗಾರಿಕೆ ಮೂರು ಹಂತಗಳಲ್ಲಿ ಕಾರ್ಯನಿರ್ವಹಿಸುತ್ತದೆ. ಈ ಮೂರು ಹಂತಗಳ ಲಾಭ ಉತ್ಪಾದಕರಿಗೆ ವಿತರಿಸಲ್ಪಡುತ್ತದೆ.

ಕರ್ನಾಟಕದಲ್ಲಿ ಅಮೂಲ್ ಮಾದರಿ ಸಹಕಾರಿ ಹೈನುಗಾರಿಕೆ ಪದ್ಧತಿ ಅಳವಡಿಸಿಕೊಂಡು ಹಾಲು ಉತ್ಪಾದನೆ ಹೆಚ್ಚಸಲು ಸಹಕಾರಿ ಸಂಸ್ಥೆಗಳು ಶ್ರಮಿಸುತ್ತಿವೆ. ಕರ್ನಾಟಕ ಹಾಲು ಮಹಾಮಂಡಳಿಯ ಕಾರ್ಯವ್ಯಾಪ್ತಿಯಲ್ಲಿ ೧೩ ಜಿಲ್ಲಾ ಹಾಲು ಒಕ್ಕೂಟಗಳ ಕಾರ್ಯ ವ್ಯಾಪ್ತಿಯಲ್ಲಿ ೧೦,೫೦೦ಕ್ಕೂ ಅಧಿಕ ಸಹಕಾರಿ ಸಂಘಗಳು ಸ್ಥಾಪನೆಯಾಗಿ ಕಾರ್ಯನಿರ್ವಹಿಸುತ್ತಿವೆ.

ತ್ರಿಸ್ತರ ವ್ಯವಸ್ಥೆಯಡಿ ಸಂಸ್ಥೆಯ ಉದ್ದೇಶಗಳು ಭಿನ್ನವಾಗಿದ್ದರೂ, ಒಂದಕ್ಕೊಂದು ಪೂರಕವಾಗಿವೆ.

ತ್ರಿಸ್ತರ ವ್ಯವಸ್ಥೆಯಲ್ಲಿರುವ ಸಂಸ್ಥೆಗಳ ಮುಖ್ಯ ಉದ್ದೇಶಗಳು:

೧. ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘ

- ಹಾಲು ಉತ್ಪಾದನೆ ಹೆಚ್ಚಿಸಲು ತಳಿ ಅಭಿವೃದ್ಧಿಪಡಿಸುವುದು.
- ಸದಸ್ಯರ ಹಾಲಿಗೆ ವರ್ಷಪೂರ್ತಿ ಮಾರುಕಟ್ಟೆ.
- ಸದಸ್ಯರಿಂದ ಉತ್ತಮ ಗುಣಪಟ್ಟದ ಶುದ್ಧ ಹಾಲು ಸಂಗ್ರಹಿಸಿ ಗುಣಮಟ್ಟಕ್ಕೆ ತಕ್ಕ ದರ ಪಾವತಿಸುವುದು.
- ಉತ್ಪಾದನಾ ವೆಚ್ಚ ನಿಯಂತ್ರಿಸಲು ಹಸಿರು ಮೇವು ಅಭಿವೃದ್ಧಿಪಡಿಸುವುದು.
- ಸದಸ್ಯರಲ್ಲಿ ಉಳಿತಾಯ ಮನೋಭಾವನೆ ಹೆಚ್ಚಿಸುವುದು.

೨. ಜಿಲ್ಲಾ ಹಾಲು ಒಕ್ಕೂಟ:

- ಪ್ರಾಥಮಿಕ ಸಹಕಾರ ಸಂಘಗಳ ಸ್ಥಾಪನೆಗೆ ಪ್ರೋತ್ಸಾಹಿಸುವುದು.
- ಒಕ್ಕೂಟ ಮತ್ತು ಸಂಘಗಳ ನಡುವೆ ಸಮನ್ವಯತೆ ಸಾಧಿಸಲು ಸಂಘಗಳ ಮೇಲ್ವಿಚಾರಣೆ ಮಾಡುವುದು.
- ಹಾಲು ಸಂಗ್ರಹಿಸಿ, ಸಂಸ್ಕರಿಸಿ, ಹಾಲು ಮತ್ತು ಹಾಲಿನ ಉಪಉತ್ಪನ್ನಗಳನ್ನು ತಯಾರಿಸಿ ವಿತರಿಸುವುದು.
- ಹಾಲು ಉತ್ಪಾದನೆ ಹೆಚ್ಚಿಸಲು ತಾಂತ್ರಿಕ ಸವಲತ್ತು ಒದಗಿಸುವುದು.
- ರಾಜ್ಯ ಮಹಾಮಂಡಳದ ಯೋಜನೆಗಳನ್ನು ಕಾರ್ಯಗತ ಮಾಡುವುದು.

ಕರ್ನಾಟಕ ಹಾಲು ಮಹಾಮಂಡಳಿ:

ಕರ್ನಾಟಕ ಹಾಲು ಮಹಾಮಂಡಳಿಯ ಆಡಳಿತ ನಿರ್ವಹಣೆಯನ್ನು ೧೩ ಜಿಲ್ಲಾ ಹಾಲು ಒಕ್ಕೂಟಗಳ ಪ್ರತಿನಿಧಿಗಳು ನಿರ್ವಹಿಸುತ್ತಾರೆ.

* ಜಿಲ್ಲಾ ಒಕ್ಕೂಟಗಳಲ್ಲಿ ಮಾರಾಟವಾಗದೆ ಉಳಿಯುವ ಹೆಚ್ಚುವರಿ ಹಾಲನ್ನು ಬೇಡಿಕೆ ಇರುವ ರಾಜ್ಯಗಳಿಗೆ ಮಾರಾಟ ಮಾಡಲು ವ್ಯವಸ್ಥೆ ಮಾಡುವುದು.
* ಒಕ್ಕೂಟಗಳಲ್ಲಿ ಮಾರಾಟವಾಗದೆ ಉಳಿಯುವ ಹಾಲನ್ನು ಪರಿವರ್ತನೆಗೆ ವ್ಯವಸ್ಥೆಗೆ ಮಾಡುವುದು.

* ಪಶು ಆಹಾರ ಉತ್ಪಾದಿಸಿ ಒಕ್ಕೂಟಗಳಿಗೆ ವಿತರಿಸುವುದು.
* ತಳಿ ಅಭಿವೃದ್ಧಿಗೆ ವೀರ್ಯನಳಿಕೆ ಉತ್ಪಾದಿಸಿ ವಿತರಿಸುವುದು.
* ತರಭೇತಿ ಕಾರ್ಯಕ್ರಮಗಳ ಮೂಲಕ ವೃತ್ತಿ ಕೌಶಲ್ಯತೆ ಮತ್ತು ಸಹಕಾರಿ ಶಿಕ್ಷಣ ಕಾರ್ಯಕ್ರಮ ಜರಗಿಸುವುದು.
* ಸಂಶೋಧನೆ ಮತ್ತು ಅಭಿವೃದ್ಧಿ ಯೋಜನೆ ಹಮ್ಮಿಕೊಳ್ಳುವುದು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೯೮೫ ರಲ್ಲಿ ಅಮೂಲ್ ಮಾದರಿ ಸಹಕಾರಿ ಹೈನುಗಾರಿಕಾ ಅಭಿವೃದ್ಧಿ ಕಾರ್ಯಕ್ರಮ ಜಾರಿಗೊಳಿಸಲಾಯಿತು. ಯೋಜನೆಯ ಗುರಿಯಂತೆ ಎಲ್ಲಾ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಿದ ಕೀರ್ತಿ ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟಕ್ಕಿದೆ. ಈ ಮಂಡಳಿಯಲ್ಲಿ ಕಳೆದ ೨೯ ವರ್ಷಗಳಿಂದ ಪಕ್ಷಾತೀತವಾಗಿ ಚುನಾವಣೆ ನಡೆದಿರುವುದರಿಂದ ಉತ್ತಮ ಮಂಡಳಿ ರಚನೆಯಾಗಿದೆ. ಆಡಳಿತ ಮಂಡಳಿಯು ಸಿಬ್ಬಂದಿಗಳ ದಕ್ಷತೆ ಮೇಲೆ ವಿಶ್ವಾಸವಿಟ್ಟು ನಿರಂತರವಾಗಿ ಜಾರಿಗೆ ತಂದ ಎಲ್ಲಾ ಯೋಜನೆಗಳು ಫಲ ನೀಡಿವೆ. ಆಡಳಿತ ಮಂಡಳಿ ಹಾಗೂ ನೌಕರರ ನಡುವೆ ಉತ್ತಮ ಬಾಂಧವ್ಯವನ್ನು ನಾವು ಕಾಣಬಹುದು. ಒಟ್ಟಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಮೂಲ್ ಮಾದರಿ ಸಹಕಾರಿ ಹೈನುಗಾರಿಕೆ ಯಶಸ್ವಿಯಾಗಿದೆ.

೨.೬ ಉಪಸಂಹಾರ

ಹೈನುಗಾರಿಕೆಯು ಆರ್ಥಿಕ ವ್ಯವಸ್ಥೆಯಲ್ಲಿ ಅವರದ್ದೇ ಆದಂತಹ ಪಾತ್ರವನ್ನು ವಹಿಸುತ್ತಿದ್ದು, ಮಳೆರಾಯನೊಂದಿಗೆ ಜೂಜಾಡುವ ಕೃಷಿಯಿಂದ ನಷ್ಟವನ್ನು ಎದುರಿಸಬೇಕಾದ ಸ್ಥಿತಿಯಲ್ಲಿ ಕೃಷಿ ಆಧಾರಿತವಾದಂತಹ ಹೈನುಗಾರಿಕೆಯು ಪ್ರತಿವಾರ ಹೈನು ಉದ್ಯಮಿಗಳಿಗೆ ಆದಾಯ ತಂದುಕೊಡಬಲ್ಲ ಒಂದು ಉಪಕಸುಬಾಗಿದೆ.

ಅಧ್ಯಾಯ–೩

ಅಧ್ಯಯನದ ಪ್ರದೇಶ ಪರಿಚಯ ಮತ್ತು ಇದರ ವ್ಯಾಪ್ತಿಯಲ್ಲಿ ಹೈನುಗಾರಿಕೆಯ ಪರಿಸ್ಥಿತಿ

ಅಧ್ಯಾಯ – ೨

ಅಧ್ಯಯನದ ಪ್ರದೇಶ ಪರಿಚಯ ಮತ್ತು ಇದರ ವ್ಯಾಪ್ತಿಯಲ್ಲಿ ಹೈನುಗಾರಿಕೆಯ ಪರಿಸ್ಥಿತಿ

೨.೧ ಪೀಠಿಕೆ:

'ಗಾವೋವಿಶ್ವಸ್ಯಮಾತರಃ' ಎಂದರೆ ಗೋವುಸಮಸ್ತಲೋಕದಮಾತೆ ಎಂಬಂತೆ ಚಲಿಸುವ ದೇವಾಲಯ, ತೀರ್ಥಾಲಯ ಹಾಗೂ ಔಷಧಾಲಯ ಎನಿಸಿರುವ ಗೋವುಸೃಷ್ಟಿಯಲ್ಲಿ ಪರಮಪವಿತ್ರ ಸ್ಥಾನವನ್ನು ಹೊಂದಿದೆ. ಹಿಂದಿನ ಕಾಲದಲ್ಲಿ ನಮ್ಮ ಪೂರ್ವಜರು ಗೋವನ್ನು ಸಂಪತ್ತಾಗಿ ಪರಿಗಣಿಸಲ್ಪಡುತ್ತಿದ್ದರು. ಆಸ್ತಿ, ಆಭರಣಗಳ ಒಡೆತನದಂತೆ ಗೋವಿನ ಒಡೆತನವು ಪ್ರತಿಷ್ಠೆಯಾಗಿತ್ತು. ಇಂದು ಹೈನುಗಾರಿಕೆಯನ್ನು ಅದೆಷ್ಟೋ ಜನ ಉಪಕಸುಬಾಗಿ ಅವಲಂಬಿಸಿಕೊಂಡಿರುವುದನ್ನು ಕಾಣಬಹುದು.ಅದರಲ್ಲೂ ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೈನುಗಾರಿಕೆಯು ಹೈನುಗಾರಿಕೆಗೆ ಹಾಗೂ ನಿರುದ್ಯೋಗಿಗಳಿಗೆ ಆರ್ಥಿಕ ಸಮಸ್ಯೆಯನ್ನು ಪರಿಹರಿಸುವ ವೃತ್ತಿಯಾಗಿ ಬೆಳೆದು ಗ್ರಾಮೀಣ ಪ್ರದೇಶದ ಆರ್ಥಿಕ ಬೆಳವಣಿಗೆಗೆ ಸಹಕಾರಿಯಾಗಿರುವುದು ಉಲ್ಲೇಖನೀಯ. ಈ ಉದ್ಯಮದ ಮೂಲಕ ರೈತರು ತಮ್ಮ ಜಮೀನಿನ ಫಲವತ್ತತೆಯನ್ನು ಅಧಿಕಗೊಳಿಸುವುದು ಮಾತ್ರವಲ್ಲದೆ ಉತ್ತಮ ಆದಾಯವನ್ನು ಪಡೆದು ತಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳಬಹುದು.

ಮಂಗಳೂರು ತಾಲೂಕಿನಲ್ಲಿ ಬಹಿತೇಕ ಜನರು ಹೈನುಗಾರಿಕೆಯನ್ನು ಅವಲಂಬಿಸಿಕೊಂಡಿರುವುದನ್ನು ನಾವು ಕಾಣಬಹುದು.ಕೃಷಿಯ ಜೊತೆಗೆ ಹೈನುಗಾರಿಕೆಯನ್ನು ನಿರ್ವಹಿಸಿಕೊಂಡು ಹಾಲು ಹಾಗೂ ಕೃಷಿ ಭೂಮಿಯ ಫಲವತ್ತತೆಗಾಗಿ ಗೊಬ್ಬರವನ್ನು ತಯಾರಿಸಿ ಸಾವಯವ ಕೃಷಿಗೆ ಪ್ರಾಶಸ್ತ್ಯ ನೀಡುವುದನ್ನು ಗಮನಿಸಬಹುದಾಗಿದೆ.

೨.೨. ಕ್ಷೇತ್ರ ಪರಿಚಯ:

ಪ್ರಸ್ತುತ ಈ ಅಧ್ಯಯನವು ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿಗೆ ಸೀಮಿತವಾಗಿದೆ. ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಪೂರ್ವದಲ್ಲಿ ಹಾಸನ ಜಿಲ್ಲೆಯನ್ನು, ಆಗ್ನೇಯದಲ್ಲಿ ಕೊಡಗುಜಿಲ್ಲೆ ಹಾಗೂ ಉತ್ತರದಲ್ಲಿ ಉಡುಪಿ ಜಿಲ್ಲೆಯನ್ನು ಮತ್ತು ದಕ್ಷಿಣಕ್ಕೆ ಕೇರಳದ ಕಾಸರಗೋಡು ಜಿಲ್ಲೆಯನ್ನು ಗುರುತಿಸಬಹುದಾಗಿದೆ. ಪಶ್ಚಿಮದಲ್ಲಿ ಅರಬ್ಬೀ ಸಮುದ್ರವನ್ನು ಹೊಂದಿರುವ ದಕ್ಷಿಣ ಕನ್ನಡ ಜಿಲ್ಲೆಯನ್ನು ೫ ತಾಲೂಕುಗಳಾಗಿ ವಿಂಗಡಿಸಲಾಗಿದೆ.

ಅವುಗಳೆಂದರೆ ಮಂಗಳೂರು, ಬಂಟ್ವಾಳ, ಪುತ್ತೂರು, ಸುಳ್ಯ ಹಾಗೂ ಬೆಳ್ತಂಗಡಿ.ಅಂದರೆ ೧೯೯೭ರಲ್ಲಿ ದಕ್ಷಿಣ ಕನ್ನಡ ಜಿಲ್ಲೆ ವಿಭಜನೆಗೊಳ್ಳುವುದಕ್ಕಿಂತ ಮೊದಲು ಉಡುಪಿ, ಕುಂದಾಪುರ ಹಾಗೂ ಕಾರ್ಕಳ ತಾಲೂಕುಗಳನ್ನು ಒಳಗೊಂಡಿತ್ತು.ಪ್ರಾಕೃತಿಕ ಸಂಪತ್ತುಗಳಿಂದ ತುಂಬಿರುವ ದಕ್ಷಿಣ ಕನ್ನಡ ಜಿಲ್ಲೆಯ ಮುಖ್ಯ ಪಟ್ಟಣ ಮಂಗಳೂರಾಗಿದೆ. ದಕ್ಷಿಣ ಕನ್ನಡ, ಉಡುಪಿ ಹಾಗೂ ಕಾಸರಗೋಡಿನ ಪ್ರದೇಶಗಳಲ್ಲಿ ತುಳು ಬಹುಜನರ ಆಡು ಭಾಷಯಾದ ಕಾರಣ ಈಗಲೂ ತುಳುನಾದು ಎಂದು ಕರೆಯುವುದಿದೆ. ೪೮೬೬ ಚ.ಕಿ.ಮೀ ವಿಸ್ತೀರ್ಣವನ್ನು ಹೊಂದಿರುವ ದಕ್ಷಿಣ ಕನ್ನಡ ಪ್ರತೀ ಒಂದು ಚ.ಕಿ.ಮೀ ಪ್ರದೇಶವು ೪೩೦ ಜನರನ್ನು ಒಳಗೊಂಡಿದ್ದು, ಒಟ್ಟು ೩೫೪ ಗ್ರಾಮಗಳನ್ನು ಹೊಂದಿದೆ. (http:/www.mangalore.com) ಮಂಗಳೂರು ತಾಲೂಕು ಒಟ್ಟು ೪೮೪೭೮೫ ಜನಸಂಖ್ಯೆಯನ್ನು ಹೊಂದಿದೆ (೨೦೧೧ ರ ಜನಗಣತಿಯ ಪ್ರಕಾರ) ಮಂಗಳೂರು ತಾಲೂಕಿನ ಜನರ ಮುಖ್ಯ ಕಸುವು ಕೃಷಿ, ಭತ್ತ, ತೆಂಗು, ಅಡಿಕೆ, ಕರಿಮೆಣಸು, ಉದ್ದು ಮೊದಲಾದ ಬೆಳೆಗಳನ್ನು ಬೆಳೆಯುತ್ತಾರೆ ಇದರ ಜೊತೆಗೆ ಕೆಲವರು ಹೈನುಗಾರಿಕೆಯನ್ನು ಕೂಡ ತಮ್ಮ ಉಪಕಸುಬಾಗಿ ನಿರ್ವಹಿಸಿಕೊಳ್ಳುತ್ತಿದ್ದಾರೆ.ಈ ಮೂಲಕ ಮುಖ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ಜನರು ತಮ್ಮ ಆರ್ಥಿಕ ಬೇಕು–ಬೇಡಗಳನ್ನು ಪೂರೈಸಿಕೊಳ್ಳುತ್ತಿದ್ದಾರೆ.ಒಟ್ಟಿನಲ್ಲಿ ಹೈನುಗಾರಿಕೆಯು ಜನರ ಆರ್ಥಿಕ ಪರಿಸ್ಥಿತಿಗೆ ಪೂರಕವಾಗಿ ಸಹಕರಿಸುತ್ತದೆ.

ಈ ಅಧ್ಯಯನದಲ್ಲಿ ಮಂಗಳೂರು ತಾಲೂಕಿನ ಮೂರು ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.ಅಲ್ಲಿನ ಪರಿಸ್ಥಿತಿಯ ಪ್ರಕಾರ ಬಹಳಷ್ಟು ಜನರು ಹೈನುಗಾರಿಕೆಯನ್ನು ವಾಣಿಜ್ಯ ಉದ್ದೇಶಕ್ಕಾಗಿಯೇ ಬಳಸಿಕೊಂಡಿದ್ದು, ಅದರಿಂದ ಆದಾಯವನ್ನು ಪಡಯುತ್ತಿದಾರೆ.ಜನರು ಹೈನುಗಾರಿಕೆಯಲ್ಲಿ ಇಂದು ತಕ್ಕ ಮಟ್ಟಿಗೆ ವೈಜ್ಞಾನಿಕ ವಿಧಾನವನ್ನು ಅಳವಡಿಸಿಕೊಂಡಿದ್ದು, ಪ್ರಸ್ತುತವಾಗಿ ಬಹಳಷ್ಟು ಜನರು ಅಧಿಕ ಪ್ರಮಾಣದಲ್ಲಿ ಹಾಲನ್ನು ಉತ್ಪಾದಿಸುತ್ತಿದ್ದು, ಉತ್ತಮ ಬೆಲೆಯನ್ನು ಪಡೆದುಕೊಳ್ಳುತ್ತಿದ್ದಾರೆ. ಈ ಪ್ರದೇಶದಲ್ಲಿ ಹೈನುಗಾರಿಕೆಯನ್ನು ಬೆಂಬಲಿಸುವಲ್ಲಿ ಅಲ್ಲಿನ ಹಾಲು ಉತ್ಪಾದಕರ ಸಹಕಾರ ಸಂಘಗಳು ಪ್ರಮುಖ ಪಾತ್ರ ವಹಿಸುತ್ತವೆ.

೩.೩. "ಕಡಂದಲೆ ಹಾಲು ಉತ್ಪಾದಕರ ಸಹಕಾರ ಸಂಘ – ಸ್ಥೂಲ ಚಿತ್ರಣ

ಕಡಂದಲೆ ಹಾಲು ಉತ್ಪಾದಕರ ಸಹಕಾರ ಸಂಘವು ದಿನಾಂಕ ೧೬/೦೩/೧೯೭೭ ರಂದು ಸಹಕಾರ ಸಂಘಗಳ ಸಹಾಯಕ ನಿಬಂಧಕರು ಮಂಗಳೂರು ಇವರಿಂದ ನೊಂದಣಿಗೊಂಡು ದಿನಾಂಕ ೨೧/೦೩/೧೯೬೭ ರಿಂದ ಕಾರ್ಯಾರಂಭ ಮಾಡಿ ೪೭ ಸಹಕಾರಿ ವರ್ಷಗಳನ್ನು

ಪೂರೈಸಿದೆ.ಸಂಘದ ಕಾರ್ಯವ್ಯಾಪ್ತಿ ಕಡಂದಲೆ ಗ್ರಾಮಕ್ಕೆ ಸೀಮಿತವಾಗಿದೆ.ಈ ಸಂಘದಲ್ಲಿ ೪೯ ಸದಸ್ಯರಿದ್ದು ರೂ.೨೫,೨೬೦ ಪಾಲು ಬಂಡವಾಳ ಹೊಂದಿದ್ದು.೨೩ ಸದಸ್ಯರನ್ನು ಪುನಃ ಸೇರ್ಪಡೆಗೊಳಿಸಿದ್ದು, ಅಂತಿಮವಾಗಿ ಈ ಸಂಘದಲ್ಲಿ ೫೩೩ ಮಂದಿ ಸದಸ್ಯರಿದ್ದು ರೂ.೪೨೯೧೦ ಪಾಲು ಬಂಡವಾಳ ಹೊಂದಿದೆ.

ಈ ಸಂಘದಲ್ಲಿ ಆಡಳಿತ ಮಂಡಳಿ ಸಂಘದ ಆಡಳಿತವನ್ನು ನಡೆಸುತ್ತಿದ್ದು, ಪ್ರತೀ ತಿಂಗಳು ಸಭೆ ಸೇರಿ ಸಂಘದ ದೈನಂದಿನ ವ್ಯವಹಾರಗಳನ್ನು ಪರಿಶೀಲಿಸಿ ಸೂಕ್ತ ನಿರ್ಧಾರಗಳನ್ನು ಕೈಗೊಳ್ಳುತ್ತದೆ.೫ ಜನ ಸಿಬ್ಬಂದಿಗಳು ಸಂಘದ ದೈನಂದಿನ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ.

ವ್ಯವಹಾರ:

ವರದಿ ಸಾಲಿನಲ್ಲಿ ಒಟ್ಟು ೪,೫೫,೯೧೫ ೧ ಲೀ ಹಾಲನ್ನು ೧,೦೮,೯೭,೪೨೦.೦೦ಕ್ಕೆ ಖರೀದಿಸಿದ್ದು, ಉತ್ಪಾದಕರಿಗೆ ಸರಾಸರಿ ರೂ ೨೨.೯೫ ದರ ನೀಡಲಾಗಿದ್ದು. ಇದರಲ್ಲಿ ೧೧,೬೨೫.೧೮ ಹಾಲನ್ನು ಸ್ಥಳೀಯ ಮಾರಾಟ ಮಾಡಿ ರೂ. ೩,೫೫೫೬೬.೦೦ನ್ನು ಪಡೆದಿರುತ್ತದೆ. ಉಳಿದ ಹಾಲನ್ನು ದ.ಕ.ಸಹಕಾರಿ ಹಾಲು ಉತ್ಪಾದಕರ ಒಕ್ಕೂಟಕ್ಕೆ ಮಾರಾಟ ಮಾಡಿ ರೂ. ೧,೦೯,೮೮,೭೩೧ನ್ನು ಪಡೆದಿದೆ. ಪ್ರಾರಂಭದಲ್ಲಿ ೩೧೧ ಚೀಲ ಪಶು ಆಹಾರ ದಾಸ್ತಾನು ಇದ್ದಿದ್ದು.ಈ ಸಂಘವು ಪ್ರಸ್ತುತ ವರ್ಷದಲ್ಲಿ ರೂ. ೫೦,೨೪೫೮೭.೫೦ ಬೆಲೆಯ ೭,೧೮೧ ಚೀಲ ನಂದಿನಿ ಪಶು ಆಹಾರ ಖರೀದಿಸಿದ್ದು, ಇದರಲ್ಲಿ ೭೩೩೦ ಚೀಲ ಪಶು ಆಹಾರವನ್ನು ರೂ. ೪೯,೧೧,೩೮೫.೦೦ಕ್ಕೆ ಮಾರಾಟ ಮಾಡಲಾಗಿದೆ. ಇದಲ್ಲದೆ ವರ್ಷದಲ್ಲಿ ೫೫೮೨೦ ಬೆಲೆಯ ಖನಿಜ ಲವಣ ಮಿಶ್ರಣ ಮತ್ತಿತರ ವಸ್ತುಗಳನ್ನು ಖರೀದಿಸದೆ ರೂ.೫೬೯೩೦ ಮೌಲ್ಯದ ವಸ್ತುಗಳನ್ನು ಮಾರಾಟ ಮಾಡಲಾಗಿದೆ.ವ್ಯಾಪಾರ ಖರ್ಚುಗಳಿಗಾಗಿ ರೂ. ೮೯೭,೮೬೩.೪೮ ಖರ್ಚು ಮಾಡಿದ್ದು ರೂ. ೭,೨೯,೧೩೧.೯೧ ವ್ಯಾಪಾರ ಲಾಭ ಗಳಿಸಿರುತ್ತದೆ. ಇದು ಮಾರಾಟದ ಶೇಕಡಾ ೬.೪೪ ಆಗಿದೆ.(ವಾರ್ಷಿಕ ವರದಿ, ಕ.ಹಾ. ಉ. ಸ. ಸಂಘ).

ಲಾಭ–ನಷ್ಟ:

ಈ ಸಂಘವು ಹಾಲು ಮತ್ತು ಪಶು ಆಹಾರ ವ್ಯಾಪಾರ ಲಾಭಗಳಲ್ಲದೆ ಇತರ ಮೂಲಗಳಿಂದ ರೂ. ೧,೦೮೮೯೮.೮೧ ಆದಾಯ ಪಡೆದಿದ್ದು, ಒಟ್ಟು ರೂ.೧೦,೧೮೨೫೯೨ ಆದಾಯದಲ್ಲಿ ಸಿಬ್ಬಂದಿ ವೇತನಕ್ಕೆ ರೂ. ೧,೮೬,೫೦೦ ಸಾದಿಸ್ವಾರು ಖರ್ಚುಗಳಿಗೆ ರೂ.೨,೭೯,೫೭೬.೫೦ ಖರ್ಚು ಮಾಡಿದ್ದು, ಸವಕಳಿಗೆ ರೂ. ೭೪,೮೪೯ ಲೆಕ್ಕ ಪರಿಶೋಧನಾ

ಶುಲ್ಕಕ್ಕೆ ರೂ.೩೨,೭೮೮, ಸಿಬ್ಬಂದಿ ನಿಧಿಗೆ ರೂ.೧೫೪೨ ತೆಗೆದಿರಿಸಿ ರೂ. ೨,೨೨,೮೬೦.೧೬ ನಿವ್ವಳ ಲಾಭ ಗಳಿಸಿರುತ್ತದೆ. ಪ್ರತಿ ಲೀಟರ್ ಹಾಲಿಗೆ ರೂ. ೨.೦೦ ರಂತೆ ಸರಕಾರದಿಂದ ಪ್ರೋತ್ಸಾಹಧನ ಮಂಜೂರಾಗಿದ್ದು ವರದಿ ವರ್ಷದಲ್ಲಿ ರೂ.೬,೩೫೦,೯೮ ಪ್ರೋತ್ಸಾಹಧನ ಉತ್ಪಾದಕರಿಗೆ ಪಾವತಿಸಲಾಗಿದೆ. ಅದಲ್ಲದೆ ವರ್ಷಪೂರ್ತಿ ಒಕ್ಕೂಟದಿಂದ ಖನಿಜ ಲವಣ ಮಿಶ್ರಣ ಹಾಗೂ ಕಾಕಂಬಿ ಜಿಲ್ಲೆ ಇವುಗಳಿಗೆ ಒಕ್ಕೂಟದಿಂದ ೫೦% ಸಹಾಯಧನ ನೀಡಿದ್ದು ಉತ್ಪಾದಕರಿಗೆ ಇದರ ಪ್ರಯೋಜನ ನೀಡಿದೆ.

ಇತರ ಚಟುವಟಿಕೆಗಳು

ಕೃತಕ ಗರ್ಭಧಾರಣೆ: ಹೈನುಗಾರಿಕೆಯಲ್ಲಿ ಹೆಚ್ಚು ಲಾಭ ಪಡೆಯಲು ಉತ್ಪಾದಕರು ತಳಿ ಅಭಿವೃದ್ಧಿ ಪಡಿಸಬೇಕಾಗಿದ್ದು, ಇದಕ್ಕಾಗಿ ಕೃತಕ ಗರ್ಭಧಾರಣೆ ವ್ಯವಸ್ಥೆಯನ್ನು ಈ ಸಂಘವು ಮಾಡುತ್ತಿದೆ. ಪ್ರಸ್ತುತ ಈ ವರ್ಷದಲ್ಲಿ ೧,೫೬೦ ಕೃತಕ ಗರ್ಭಧಾರಣೆಯನ್ನು ಉತ್ಪಾದಕರ ಜಾನುವಾರುಗಳಿಗೆ ಮಾಡಲಾಗಿದೆ.ಉತ್ಪಾದಕರ ರಾಸುಗಳ ಆರೋಗ್ಯ ಕಾಪಾಡಲು ಒಕ್ಕೂಟದ ಪಶು ವೈದ್ಯರು ತುರ್ತು ಚಿಕಿತ್ಸಾ ಸೌಲಭ್ಯ ನೀಡುತ್ತಿದ್ದು ಹೆಚ್ಚಿನ ಉತ್ಪಾದಕರು ಇದರ ಪ್ರಯೋಜನ ಪಡೆಯುತ್ತಿದ್ದಾರೆ.ಪ್ರತಿ ಮೂರು ತಿಂಗಳಿಗೊಮ್ಮೆ ಬಂಜೆತನ ನಿವಾರಣಾ ಶಿಬಿರವನ್ನು ಒಕ್ಕೂಟದಿಂದ ಉಚಿತವಾಗಿ ನಡೆಸುತ್ತದೆ.

ಹಸಿರು ಮೇವಿನ ಅಭಿವೃದ್ಧಿ:

ಹೈನುಗಾರಿಕೆಯನ್ನು ಲಾಭದಾಯಕವಾಗಿ ನಡೆಸಲು ಹಸಿರು ಮೇವು ಅತ್ಯಾವಶ್ಯಕ.ಇದಕ್ಕಾಗಿ ಒಕ್ಕೂಟದಿಂದ ಸಂಘದ ಮುಖಾಂತರ ಹೈಬ್ರಿಡ್ ತಳಿಯ ಹುಲ್ಲಿನ ಕಾಂಡ ಮತ್ತು ಹೈಬ್ರಿಡ್ ಜೋಳದ ಬೀಜಗಳನ್ನು ಉತ್ಪಾದಕರಿಗೆ ನೀಡಲಾಗುತ್ತದೆ.ಪ್ರಸ್ತುತ ಈ ವರ್ಷದಲ್ಲಿ ೩೫ ಜನರಿಗೆ ಹುಲ್ಲಿನ ಕಾಂಡ ಹಾಗೂ ಜೋಳದ ಬೀಜಗಳನ್ನು ಈ ಸಂಘ ವಿತರಿಸಿದೆ.

ಯಶಸ್ವಿನಿ ಯೋಜನೆ:

ಪ್ರಸ್ತುತ ಸಾಲಿನಲ್ಲಿ ೩೪೮ ಜನರನ್ನು ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ಸಂರಕ್ಷಣಾ ಯೋಜನೆಯಲ್ಲಿ ಈ ಸಂಘವು ನೋಂದಾಯಿಸಿಕೊಂಡಿದ್ದು, ಫಲಾನುಭವಿಗಳು ಪಾವತಿಸಬೇಕಾದ ವಂತಿಗೆ ಹಣದಲ್ಲಿ ತಲಾ ರೂ.೧೦೦ ನ್ನು ಸಂಘದಿಂದ ನೀಡಲಾಗಿದ್ದು, ಒಟ್ಟು ರೂ.೩೪,೮೦೦.೦೦ ನ್ನು ಸಂಘದಿಂದ ಪಾವತಿಸಲಾಗಿದೆ.ಈ ಯೋಜನೆಯನ್ನು ಸರಕಾರವು ಬಡ

ರೈತರ ಅನುಕೂಲಕ್ಕಾಗಿ ರೂಪಿಸಿದ್ದು, ರೈತರು ಇದರ ಪ್ರಯೋಜನ ಪಡೆಯುತ್ತಿದ್ದಾರೆ.ಪ್ರಸ್ತುತ ಸಾಲಿನಲ್ಲಿ ಈ ಸಂಘದ ಮೂರು ಜನ ಸದಸ್ಯರಿಗೆ ಈ ಯೋಜನೆಯಿಂದ ರೂ.೧೩೪೮೦೦.೦೦ ಶಸ್ತ್ರ ಚಿಕಿತ್ಸೆಗೆ ಲಭಿಸಿರುತ್ತದೆ.ಅಲ್ಲದೇ ಜನಶ್ರೀ ವಿಮಾ ಯೋಜನೆಯಲ್ಲಿ ಸಂಘಕ್ಕೆ ಹಾಲು ನೀಡುತ್ತಿರುವ ಉತ್ಪಾದಕರನ್ನು ಒಳಪಡಿಸಲಾಗಿದ್ದು ಒಕ್ಕೂಟವು ಪ್ರೀಮೊಯಂ ಹಣವನ್ನು ಪಾವತಿಸಿದೆ.ವರದಿ ವರ್ಷದಲ್ಲಿ ೫೧ ವಿದ್ಯಾರ್ಥಿಗಳಿಗೆ ರೂ.೩೦,೬೦೦.೦೦ ವಿದ್ಯಾರ್ಥಿ ವೇತನ ಮಂಜೂರಾಗಿದ್ದು ಅದನ್ನು ಆಯಾಯ ವಿದ್ಯಾರ್ಥಿಗಳಿಗೆ ಪಾವತಿಸಿದೆ.

ಒಟ್ಟಿನಲ್ಲಿ ಈ ಸಂಘವು ಇಷ್ಟೊಂದು ಮಟ್ಟದಲ್ಲಿ ಬೆಳೆಯಲು ಮುಖ್ಯವಾಗಿ ಅಲ್ಲಿನ ಹಾಲು ಉತ್ಪಾದಕರು ಕಾರಣ. ಮಾತ್ರವಲ್ಲದೆ ಹಾಲು ಉತ್ಪಾದಕರಿಗೆ ಯೋಗ್ಯ. ಬೆಲೆ ನೀಡಿ ನಿರಂತರ ಮಾರುಕಟ್ಟೆ ಒದಗಿಸುತ್ತಿರುವ ದ.ಕ.ಸಹಕಾರಿ ಹಾಲು ಉತ್ಪಾದಕರ ಒಕ್ಕೂಟದ ಆಡಳಿತ ಮಂಡಳಿಯೂ ಕೊಡುಗೆ ನೀಡುತ್ತಿದೆ. ಸಹಕಾರ ಇಲಾಖೆ, ಲೆಕ್ಕ ಪರಿಶೋಧನಾ ಇಲಾಖೆ, ದ.ಕ.ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಪಶು ವೈದ್ಯಕೀಯ ಇಲಾಖೆಗಳು ಕೂಡ ಕಡಂದಲೆ ಹಾಲು ಉತ್ಪಾದಕರ ಸಹಕಾರ ಸಂಘದ ಅಭಿವೃದ್ಧಿಗೆ ಸಹಕರಿಸಿವೆ.

೩.೪: ಎಕ್ಕಾರು ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತ – ಸ್ಥೂಲ ಚಿತ್ರಣ:

ಮಂಗಳೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಎಕ್ಕಾರು ಹಾಲು ಉತ್ಪಾದಕರ ಸಹಕಾರ ಸಂಘವನ್ನು ಈ ಅಧ್ಯಯನದಲ್ಲಿ ಒಳಪಡಿಸಲಾಗಿದೆ.ಈ ಸಂಘವನ್ನು ಶ್ರೀ ಭಾಸ್ಕರರಾವ್ ರವರ ನೇತೃತ್ವದಲ್ಲಿ ೩೦/೦೩/೧೯೯೧ ರಲ್ಲಿ ಪ್ರಾರಂಭಿಸಲಾಯಿತು.ಇಂದಿಗೆ ಈ ಸಹಕಾರ ಸಂಘವು ೨೩ ಸಹಕಾರಿ ಸಾಲುಗಳನ್ನು ಪೂರೈಸಿದ್ದು ಎಲ್ಲಾ ಸಾಲುಗಳಲ್ಲಿ ಲಾಭಗಳಿಸಿದೆ.ವರದಿ ಸಾಲಿನ ಅಂತ್ಯಕ್ಕೆ ೧೯೪ ಸದಸ್ಯರನ್ನು ಹೊಂದಿದ್ದು, ರೂ.೪೫೬೫೦ ಪಾಲು ಬಂಡವಾಳ ಹೊಂದಿದೆ.ಈ ಸಂಘದ ಕಾರ್ಯವ್ಯಾಪ್ತಿ ಬಡ ಎಕ್ಕಾರು ಮತ್ತು ರೆಂತ ಎಕ್ಕಾರು ಗ್ರಾಮಗಳಿಗೆ ಸೀಮಿತವಾಗಿದೆ.

ಹಾಲು ಸಂಗ್ರಹಣೆ ಮತ್ತು ಮಾರಾಟ:

೨೦೧೩-೧೪ನೇ ಸಾಲಿನಲ್ಲಿ ೧,೮೮,೨೯೪.೦೦ಲೀ ಹಾಲನ್ನು ೨೪೮೪,೨೫೬.೩೨ಕ್ಕೆ ಖರೀದಿಸಿದೆ. ಇದರಲ್ಲಿ ೨೫೫೨೫.೬ಲೀ ಹಾಲನ್ನು ಸ್ಥಳೀಯವಾಗಿ ರೂ. ೯,೨೦,೭೨೧.೬೦ ಲೀ. ಮಾರಾಟ ಮಾಡಿದೆ. ಉಳಿಕೆ ಹಾಲನ್ನು ೧,೬೬,೭೧೮.೪ ಲೀ ಮಂಗಳೂರು ಡೈರಿಗೆ ಮಾರಾಟ ಮಾಡಲಾಗಿದೆ.

ಪಶು ಆಹಾರ ಖರೀದಿ ಮತ್ತು ಮಾರಾಟ:

ಪ್ರಸಕ್ತ ವರ್ಷದಲ್ಲಿ ೯೬೦ ಚೀಲ ಪಶು ಆಹಾರ ಖರೀದಿಸಿದ್ದು ರೂ.೪,೪೦೦ ಮೌಲ್ಯದ ಲವಣ ಮಿಶ್ರಣ ಮಾರಾಟ ಮಾಡಿದೆ.

ಲಾಭ:

ವರದಿ ಸಾಲಿನಲ್ಲಿ ಹಾಲು ವ್ಯಾಪಾರದಿಂದ ೨,೮೩,೬೬೬.೨೧ ರೂಪಾಯಿ ಹಾರೂ ಪಶು ಆಹಾರದಿಂದ – ರೂ. ೨೦, ೩೩೨.೫೦ ಹಾರೂ ಇತರ ಮೂಲದಿಂದ ರೂ.೭೪,೩೧೫.೦೯ ಸೇರಿ ಒಟ್ಟು ರೂ. ೩,೮೫,೦೩೦.೮೦ ಲಾಭ ಬಂದಿದ್ದು ಎಲ್ಲಾ ಖರ್ಚು ಕಳೆದು ರೂ. ೧,೩೬, ೧೫೪.೪೫ ಪೈಸೆ ಲಾಭ ಪಡೆದಿದೆ.

ವಿಸ್ತರಣಾ ಕೆಲಸ:

ವರ್ಷ ಪೂರ್ತಿ ಹಾಲಿಗೆ ಮಾರುಕಟ್ಟೆ, ಸರಕಾರದ ಬೆಂಬಲ ಬೆಲೆ ವಿತರಣೆ, ಪಶು ಆಹಾರ, ಲವಣ ಮಿಶ್ರಣ, ಜಂತು ಹುಳದ ಔಷಧಿ, ಬಂಜೆತನ ನಿವಾರಣಾ ಶಿಬಿರ, ಕಾಲು ಬಾಯಿ ಜ್ವರಕ್ಕೆ ಲಸಿಕೆ, ಪಶು ವೈದ್ಯಕೀಯ ಸೌಲಭ್ಯ ಹಸಿರು ಹುಲ್ಲು ಬೇರು, ಬೀಜ ವಿತರಣೆ, ಜನಶ್ರೀ ಯೋಜನೆಯಿಂದ ಮಕ್ಕಳಿಗೆ ವಿದ್ಯಾರ್ಥಿ ವೇತನಾ, ಕರ್ನಾಟಕ ಸರಕಾರದ ಯಶಸ್ವಿನಿ ವಿಮಾ ಯೋಜನೆ, ಉತ್ತರಖಂಡ ದುರಂತಕ್ಕೆ ದೇಣಿಗೆ, ಶಾಲಾ ಮಕ್ಕಳ ಹೈನುಗಾರಿಕಾ ಅರಿವು ಮುಂತಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸಂಘದ ಮೂಲಕ ಕೃತಕ ಗರ್ಭಧಾರಣೆಯ ಸೌಲಭ್ಯ ಹಾಗೂ ಪ್ರಥಮ ಚಿಕಿತ್ಸೆ ನೀಡುವ ಕಾರ್ಯಕ್ರಮವನ್ನು ಈ ಸಂಘ ಹಮ್ಮಿಕೊಳ್ಳುತ್ತದೆ. ಸರಕಾರದಿಂದ ಸಿಗುವ ಪ್ರೋತ್ಸಾಹಧನವನ್ನು ಸದಸ್ಯರ ಬ್ಯಾಂಕು ಖಾತೆಗಳ ಮೂಲಕ ಪಾವತಿಸುತ್ತದೆ.ಪ್ರಸಕ್ತ ವರ್ಷದಲ್ಲಿ ಸಂಘದ ಲಾಭಾಂಶದ ಪ್ರಮಾಣ ಉತ್ತಮವಾಗಿದೆ.

ಈ ಸಂಘವು ಹಲವಾರು ಉತ್ತಮ ಉದ್ದೇಶವನ್ನು ಹೊಂದಿದ್ದು ಅವುಗಳಲ್ಲಿ ಪ್ರಮುಖವಾದವು.

- ಉತ್ತಮ ಗುಣಮಟ್ಟದ ಶುದ್ಧ ಹಾಲು ಸಂಗ್ರಹಣೆ ಮಾಡುವುದು.
- ಎಲ್ಲಾ ಸದಸ್ಯರನ್ನು ಯಶಸ್ವಿನಿ ವಿಮಾ ಯೋಜನೆಯ ವ್ಯಾಪ್ತಿಗೆ ತರುವುದು.
- ಹೈನುಗಾರಿಕಾ ಶಿಬಿರ / ತರಭೇತಿಗೆ ವ್ಯವಸ್ಥೆ ಮಾಡುವುದು.
- ಸದಸ್ಯರಲ್ಲಿ ಉಳಿತಾಯ ಮನೋಭಾವನೆ ಬೆಳೆಸುವುದು.

ಒಟ್ಟಿನಲ್ಲಿ ಈ ಕ್ಷೇತ್ರದಲ್ಲಿ ಹೆಚ್ಚಿನ ಜನರು ಹೈನುಗಾರಿಕೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದು, ಜನರು ಈ ಉದ್ಯಮದಿಂದ ತಕ್ಕಮಟ್ಟಿನ ಆದಾಯವನ್ನು ಪಡೆಯುತ್ತಿದ್ದಾರೆ.

೩.೫ ಮೆನ್ನಬೆಟ್ಟು ಹಾಲು ಉತ್ಪಾದಕರ ಮಹಿಳಾ ಸಹಕಾರಿ ಸಂಘ ನಿಯಮಿತ

ಮಂಗಳೂರು ತಾಲೂಕಿನ ವ್ಯಾಪ್ತಿಯಲ್ಲಿ ಇರುವ ದಕ್ಷಿಣ ಕನ್ನಡ ಸಹಕಾತಿ ಹಾಲು ಉತ್ಪಾದಕರ ಒಕ್ಕೂಟ, ಮಂಗಳೂರು ಇದರ ಸದಸ್ಯತ್ವವನ್ನು ಹೊಂದಿರುವ ಮೆನ್ನ ಬೆಟ್ಟು ಹಾಲು ಉತ್ಪಾದಕರ ಮಹಿಳಾ ಸಹಕಾರಿ ಸಂಘವನ್ನು ಈ ಅಧ್ಯಯನದಲ್ಲಿ ಸೇರಿಸಲಾಗಿದೆ.ಈ ಸಹಕಾರಿ ಸಂಘವನ್ನು ೦೩/೦೭/೨೦೦೯ರಂದು ಕಿನ್ನಿಗೋಳಿ ಗ್ರಾಮದ ಮೆನ್ನಬೆಟ್ಟು ಎಂಬಲ್ಲಿ ೧೪೬ ಸದಸ್ಯರಿಂದ ಸ್ಥಾಪಿಸಲಾಯಿತು.ಪ್ರಸ್ತುತ ಈ ಸಂಘಕ್ಕೆ ೫೦ ಸದಸ್ಯರು ಹಾಲನ್ನು ಪೂರೈಸುತ್ತಿದ್ದಾರೆ.ಇದರ ಭೌಗೋಳಿಕ ವ್ಯಾಪ್ತಿ ಮೆನ್ನಬೆಟ್ಟು ಗ್ರಾಮಕ್ಕೆ ಮಾತ್ರ ಸೀಮಿತವಾಗಿದೆ.

ಪಶು ಆಹಾರ ಖರೀದಿ ಮತ್ತು ಮಾರಾಟ:

ಹೈನುಗಾರಿಕೆಯಲ್ಲಿ ತೊಡಗಿರುವ ಸದಸ್ಯರಿಗೆ ಪಶು ಆಹಾರವನ್ನು ಪೂರೈಸುವ ಕಾರ್ಯವನ್ನು ನಿರ್ವಹಿಸುತ್ತದೆ.೨೦೧೩-೧೪ನೇ ಸಾಲಿನಲ್ಲಿ ಆರಂಭದ ದಾಸ್ತಾನು ಖರೀದಿ ಸೇರಿ ರೂ. ४,४४,೭೫೭.೫೦ ರಷ್ಟು ಇದ್ದು, ರೂ. ೫,४४,೧೨೦ ರಷ್ಟು ಮಾರಾಟ ಮಾಡಿ ಖೂ. ೧೨,೯೭४.೫೦ ರಷ್ಟು ವ್ಯಾಪಾರದ ಲಾಭ ಗಳಿಸಿದೆ.

ಇತರ ಕಾರ್ಯಗಳು:

ಈ ಸಂಘವು ತನ್ನ ಸದಸ್ಯರಿಗೆ ಹೈನುಗಾರಿಕೆಗೆ ಬೆಂಬಲವನ್ನು ನೀಡಲು ಕೆಲವು ಕಾರ್ಯಗಳನ್ನು ನಿರ್ವಹಿಸುತ್ತದೆ.ಸರಕಾರದ ಬೆಂಬಲ ಬೆಲೆ ವಿತರಣೆ, ಬಂಜೆತನ ನಿವಾರಣಾ ಶಿಬಿರ, ಕೃತಕ ಗರ್ಭಧಾರಣಾ ಸೌಲಭ್ಯ, ಇತರ ಪಶು ವೈದ್ಯಕೀಯ ಸೌಲಭ್ಯ, ಸರಕಾರದಿಂದ ಸಿಗುವ ಪ್ರೋತ್ಸಾಹಧನವನ್ನು ಸದಸ್ಯರ ಬ್ಯಾಂ ಕು ಖಾತೆಗಳ ಮೂಲಕ ಪಾವತಿಸುತ್ತದೆ.ಪ್ರಸಕ್ತ ಸಾಲಿನಲ್ಲಿ ಈ ಸಂಘವು ಲಾಭದಲ್ಲಿದೆ.

ಒಟ್ಟಿನಲ್ಲಿ ಈ ಸಾ. ಉ. ಸ. ಸಂಘವು ಇಲ್ಲಿ ಹೈನುಗಾರಿಕೆಯನ್ನು ಪ್ರೋತ್ಸಾಹಿಸುತ್ತಿದ್ದು ಬಹಳಷ್ಟು ಮಹಿಳೆಯರು ಈ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಹೈನುಗಾರಿಕೆಯಿಂದ ತಕ್ಕಮಟ್ಟಿನ ಆದಾಯವನ್ನು ಪಡೆಯುತ್ತಿದ್ದಾರೆ ಎಂಬುವುದನ್ನು ಅವರ ಅಭಿಪ್ರಾಯದಿಂದ ತಿಳಿದುಬರುತ್ತದೆ.

೩.೬ ದಕ್ಷಿಣ ಕನ್ನಡ ಹಾಲು ಉತ್ಪಾದಕರ ಒಕ್ಕೂಟ ನಿಯಮಿತ, ಮಂಗಳೂರು – ಪಾತ್ರ

ದಕ್ಷಿಣ ಕನ್ನಡ ಜಿಲ್ಲೆಯು ಕೃಷಿ ಪ್ರಧಾನವಾದ ಜಿಲ್ಲೆಯಾಗಿದ್ದು. ಇಲ್ಲಿ ಹೈನುಗಾರಿಕೆಯು ಕೃಷಿಕರ ಉಪಕಸುಬಾಗಿರುತ್ತದೆ.ಸುಮಾರು ೨೫–೩೦ ವರ್ಷಗಳ ಹಿಂದೆ, ಜಿಲ್ಲೆಯಲ್ಲಿ ಸಾಕಷ್ಟು ಹಾಲಿನ ಕೊರತೆ ಇತ್ತು.ರೈತರು ಕೇವಲ ಊರ ದನಗಳನ್ನು ಸಾಕುತ್ತಿದ್ದು. ಆರ್ಥಿಕವಾಗಿ ಹೈನುಗಾರಿಕೆಯಲ್ಲಿ ನಷ್ಟವನ್ನು ಹೊಂದಿದವರಾಗಿರುತ್ತಾರೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ಹಾಲು ಮಹಾ ಮಂಡಳಿಯು ೧೯೮೫ ರಲ್ಲಿ ನೂತನವಾಗಿ ದ.ಕ. ಹಾಲು ಒಕ್ಕೂಟವನ್ನು ಪ್ರಾರಂಭಿಸಿ ಪ್ರಥಮ ಹಂತವಾಗಿ ೫,೦೦೦ ಲೀ. ಹಾಲನ್ನು ಸಂಗ್ರಹ ಮಾಡಿರುತ್ತದೆ. ಈ ಒಕ್ಕೂಟದ ಕಾರ್ಯ ವ್ಯಾಪ್ತಿಯು ದ.ಕ.ಜಿಲ್ಲೆ ಹಾಗೂ ಉಡುಪಿ ಜಿಲ್ಲೆಯನ್ನು ಹೊಂದಿರುತ್ತದೆ.ತದ ನಂತರ ಒಕ್ಕೂಟವು ರೈತರಿಗೆ ವಿವಿಧ ತಾಂತ್ರಿಕ ಸೌಲಭ್ಯಗಳನ್ನು ನೀಡಿ ಉಭಯ ಜಿಲ್ಲೆಯಲ್ಲಿ ಪ್ರಸ್ತುತ ೨ ಲಕ್ಷದ ೫೦ ಸಾವಿರ ಲೀ. ಹಾಲನ್ನು ದಿನವಹಿ ಸಂಗ್ರಹ ಮಾಡಲಾಗುತ್ತಿದೆ.

ಮಂಗಳೂರು ತಾಲೂಕಿನಲ್ಲಿ ಪ್ರಸ್ತುತ ೭೯ ಹಾ.ಉ.ಸ. ಸಂಘಗಳಿದ್ದು, ನಾಲ್ಕು ರೂ.ಪ್ರೋತ್ಸಾಹ ಧನದಂತೆ ೫೦೪೯ ಸದಸ್ಯರು ಸಂಘಗಳಿಗೆ ದಿನವಹಿ ೨೯೪೬೨ ಲೀಟರ್‌ನಷ್ಟು ಹಾಲನ್ನು ನೀಡುತ್ತಿದ್ದಾರೆ.ತಾಲೂಕಿನ ರೈತರುಗಳಿಗೆ ಹಾಲಿನ ಉತ್ಪಾದನೆಯನ್ನು ವೃದ್ಧಿಸಲು ಕೆಲವೊಂದು ಸೌಲಭ್ಯಗಳನ್ನು ನೀಡುತ್ತದೆ. ಅವುಗಳೆಂದರೆ –

೧. ರೈತರಿಗೆ ನಿಗದಿತ ಬೆಲೆ:

ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ತಾಲೂಕಿನ ಎಲ್ಲಾ ಗ್ರಾಮಗಳಲ್ಲಿ ಏರ್ಪಡಿಸಿ ಸಂಘಗಳಿಗೆ ಸದಸ್ಯರನ್ನು ನೋಂದಾಯಿಸಿ ಸದಸ್ಯರಿಂದ ಬಂದ ಹಾಲನ್ನು ಹಾಲಿನ ಗುಣಮಟ್ಟಕ್ಕನುಗುಣವಾಗಿ ಸಂಘದಲ್ಲಿ ಪಡೆದು ಪ್ರತಿ ಹತ್ತು ದಿನಗಳಿಗೊಮ್ಮೆ ಹಣ ಬಟವಾಡೆ ಮಾಡಲಾಗುತ್ತಿದ್ದು ಇದು ಹೈನುಗಾರಿಕೆಯನ್ನು ಪ್ರೋತ್ಸಾಹಿಸಿದಂತಾಗುತ್ತದೆ.

೨. ಪಶು ಆಹಾರ ಸೌಲಭ್ಯ:

ಜಾನುವಾರುಗಳಿಗೆ ನಿಗದಿತ ಸಮಯದಲ್ಲಿ ಪಶು ಆಹಾರವನ್ನು ನೀಡಬೇಕಾಗಿದ್ದು, ಒಕ್ಕೂಟದ ವತಿಯಿಂದ ರಾಜ್ಯದ ೫ ಕಡೆಗಳಲ್ಲಿ ಇರುವ ಪಶು ಆಹಾರ ಘಟಕಗಳಿಂದ ಪಶು ಆಹಾರವನ್ನು ತರಿಸಿ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಹಕಾರಿ ಸಂಘಗಳಿಗೆ ವಿತರಿಸಲಾಗುತ್ತಿದ್ದು, ಈ ಪ್ರಕಾರ ಸಮತೋಲನ ಪಶು ಆಹಾರ ನೀಡುವುದರಿಂದ ರಾಸುಗಳು

ಆರೋಗ್ಯದಿಂದ ಇದ್ದು ಹೆಚ್ಚು ಹಾಲು ನೀಡುವ ಸಾಮರ್ಥ್ಯವನ್ನು ಹೊಂದಲು ಸಹಕಾರಿಯಾಗಿದೆ. ಸಂಘಗಳಿಗೆ ಇದರ ನಿರಂತರ ಸೌಲಭ್ಯವಿರುವುದರಿಂದಾಗಿ ಹೈನುಗಾರರು ಹೈನುಗಾರಿಕೆಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ.

೩. ಕೃತಕ ಗರ್ಭಧಾರಣೆ:

ರಾಸುಗಳು ಬೆದೆಗೆ ಬಂದಾಗ ಅವುಗಳಿಗೆ ಕೃತಕ ಗರ್ಭದಾರಣೆಯ ಮುಖಾಂತರ ಅವುಗಳ ಸಂತಾನಾಭಿವೃದ್ಧಿಯನ್ನು ಮಂದುವರಿಸಿಕೊಂಡು ಹೋಗಿರುತ್ತದೆ.ಕೃತಕ ಗರ್ಭಧಾರಣಾ ಸೌಲಭ್ಯವು ಸಂಘಗಳಿಗೆ ಕೃತಕ ಗರ್ಭಧಾರಣಾ ತರಭೇತಿದಾರರಿಂದ ನೀಡಲಾಗುತ್ತಿದ್ದು, ಜಾನುವಾರುಗಳು ಬೆದೆಗೆ ಬಂದಾಗ ಸಂಘಗಳಲ್ಲಿಯೇ ಇದರ ಸೇವೆ ಸಿಗುವುದರಿಂದಾಗಿ ಸಾಕಷ್ಟು ಜಾನುವಾರುಗಳು ಗರ್ಭಧರಿಸಿ ಹೆಚ್ಚಿನ ಹೆಣ್ಣು ಕರುಗಳ ಸಂಖ್ಯೆ ತಾಲೂಕಿನಲ್ಲಿ ಆಗಿರುವುದರಿಂದ ಹಾಲಿನ ಉತ್ಪಾದನೆ ಹೆಚ್ಚಾಗಿದೆ.

೪. ಪಶು ವೈದ್ಯಕೀಯ ಸೌಲಭ್ಯ:

ತಾಲೂಕಿನಲ್ಲಿ ಜಾನುವಾರುಗಳ ಆರೋಗ್ಯವನ್ನು ಕಾಪಾಡಲು ಹಾಗೂ ಜಾನುವಾರುಗಳು ಕಾಯಿಲೆಗೆ ತುತ್ತಾದಾಗ ಅವುಗಳಿಗೆ ಚಿಕಿತ್ಸೆಗೆ ತಾಲೂಕುವಾರು ಒಕ್ಕೂಟದ ವತಿಯಿಂದ ಪಶುವೈದ್ಯಾಧಿಕಾರಿಗಳನ್ನು ನೇಮಿಸಿದೆ. ರಾಸುಗಳಿಗೆ ತುರ್ತು ಚಿಕಿತ್ಸೆ ಬೇಕಾದಾಗ ಪಶು ವೈದ್ಯರನ್ನು ಸಂಪರ್ಕಿಸಿದಲ್ಲಿ ಕನಿಷ್ಠ ವೆಚ್ಚದಲ್ಲಿ ಪಶುವೈದ್ಯಕೀಯ ಸೇವೆಯನ್ನು ನೀಡುತ್ತದೆ.

೫. ವಿವಿಧ ಯೋಜನೆಗಳು:

ಅ) **ಮಿನಿಡೈರಿ** : ಸದಸ್ಯರು ಕನಿಷ್ಠ ೨೦ ರಾಸುಗಳನ್ನು ಏಕ ಭಾರಿ ಖರೀದಿಸಿದಲ್ಲಿ, ಅಂತವರಿಗೆ ಮಿನಿ ಡೈರಿ ಯೋಜನೆಯಿಂದ ಪಶು ಆಹಾರವನ್ನು ಅನುದಾನವಾಗಿ ನೀಡಲಾಗುತ್ತಿದೆ.

ಆ) **ಹುಲ್ಲು ಕತ್ತರಿಸುವ ಯಂತ್ರ** : ಸದಸ್ಯರು ಬೆಳೆಸಿದ ಹುಲ್ಲನ್ನು ರಾಸುಗಳಿಗೆ ನೀಡುವ ಮುನ್ನ ಅವುಗಳನ್ನು ಸಣ್ಣ ಸಣ್ಣ ತುಂಡುಗಳಾಗಿ ನೀಡಬೇಕಾಗಿದ್ದು ಇದಕ್ಕಾಗಿ ಒಕ್ಕೂಟದ ವತಿಯಿಂದ ಹುಲ್ಲು ಕತ್ತರಿಸುವ ಯಂತ್ರವನ್ನು ಶೇ. ೫೦ರ ಅನುದಾನದಲ್ಲಿ ನೀಡಲಾಗುತ್ತದೆ.

ಇ) **ಹಾಲು ಕರೆಯುವ ಯಂತ್ರ** :ಪ್ರಸ್ತುತ ತಾಲೂಕಿನಲ್ಲಿ ಕೂಲಿ ಕಾರ್ಮಿಕರ ಸಮಸ್ಯೆ ಇರುವುದರಿಂದ ಹಾಲು ಕರೆಯುವ ಸಂಖ್ಯೆಯು ಕಡಿಮೆ ಆಗಿರುವುದನ್ನು ಮನಗಂಡು ಆಧುನಿಕ

ತಂತ್ರಜ್ಞಾನವನ್ನು ಹೈನುಗಾರಿಕೆಯಲ್ಲಿ ಅಳವಡಿಸಿಕೊಂಡಿದ್ದು ಹಾಲು ಕರೆಯಲು ೫೦% ಅನುದಾನ ನೀಡಲಾಗುತ್ತದೆ.

ಈ) ಕರುಸಾಕಾಣಿಕಾ ಯೋಜನೆ :ಕೃತಕ ಗರ್ಭಧಾರಣೆಯಿಂದ ಜನಿಸಿರುವ ಕರುಗಳು ಸಾಕಾಣಿಕೆಯ ಅಪೂರ್ಣವಾಗಿ ಜಂತುಹುಳುಗಳ ಬಾಧೆಯಿಂದ ಸಾಕಷ್ಟು ಸಾವನ್ನಪ್ಪುತ್ತಿದ್ದವು. ಹುಟ್ಟಿದಂತಹ ಹೆಣ್ಣು ಕರು ಪ್ರೌಢಾವಸ್ಥೆಗೆ ಬಂದು ಪರಿವರ್ತನೆ ಮಾಡಲು ರೈತರಿಗೆ ಕೃತಕ ಗರ್ಭಧಾರಣೆ ಮೂಲಕ ಹುಟ್ಟಿದ ಕರುಗಳಿಗೆ ಕ್ಲಪ್ತ ಸಮಯಕ್ಕೆ ಲಸಿಕೆ ನೀಡಿ ಅನುದಾನದ ರೂಪದಲ್ಲಿ ೧೧ ರಿಂದ ೯೦ ದಿನದವರೆಗೆ ವಿಶೇಷ ಕರು ಆಹಾರ ನೀಡುವುದರಿಂದ ಸಾಕಷ್ಟು ಕರುಗಳು ಮರಣ ಹೊಂದದೆ ಉತ್ತಮ ದನವಾಗಿ ಪರಿವರ್ತನೆ ಆಗಿದೆ.

ಉ) ಲವಣಾಂಶದ ಅನುದಾನ :ತಾಲೂಕಿನಲ್ಲಿ ಸಾಕಷ್ಟು ಮಳೆಗಾಲದಲ್ಲಿ ಮಳೆ ಬಂದರೆ ಮಣ್ಣಿನಲ್ಲಿರುವ ಲವಣಾಂಶವು ಹೋಗಿ ಅರಬ್ಬೀ ಸಮುದ್ರ ಸೇರುತ್ತದೆ. ಇದರಿಂದಾಗಿ ತಾಲೂಕಿನ ಮಣ್ಣಿನಲ್ಲಿ ಲವಣಾಂಶದ ಕೊರತೆ ಉಂಟಾಗಿ ಹಲವಾರು ಸಮಸ್ಯೆಗಳುಂಟಾಗುತ್ತದೆ.ಇದನ್ನು ನಿವಾರಿಸಲು ರಾಸುಗಳಿಗೆ ೫೦ ಗ್ರಾಂ.ನಷ್ಟು ಲವಣ ಮಿಶ್ರವನ್ನು ಪಶು ಆಹಾರದೊಂದಿಗೆ ಸೇರಿಸಿ ನೀಡಬೇಕಾಗಿದ್ದು ಒಕ್ಕೂಟವು ಸಂಘಗಳಿಗೆ ಇದನ್ನು ಪೂರೈಕೆ ಮಾಡುತ್ತಿದ್ದು ಇದರಿಂದಾಗಿ ಎದುರಾಗುವ ಸಮಸ್ಯೆಯು ಕಡಿಮೆ ಆಗಿ ಹೈನುಗಾರಿಕೆಯನ್ನು ಪ್ರೋತ್ಸಾಹಿಸಿದಂತಾಗುತ್ತದೆ.

ಊ) ರಾಸು ಜಂತುಹುಳದ ಅನುದಾನ : ಜಾನುವಾರುಗಳಲ್ಲಿ ಉತ್ತಮ ಗುಣಮಟ್ಟದ ಹಾಲನ್ನು ಪಡೆಯಲು ರಾಸುಗಳು ಆರೋಗ್ಯದಿಂದ ಇದ್ದು, ಜಂತುಗಳ ಬಾಧಕಗಳಿಂದ ಹೊರತಾಗಿರಬೇಕಾಗಿರುತ್ತದೆ. ಇದಕ್ಕಾಗಿ ರಾಸುಗಳಿಗೆ ವರ್ಷಕ್ಕೆ ಎರಡು ಬಾರಿ ನಿರಂತರವಾಗಿ ಹುಳದ ಔಷಧಿಯನ್ನು ನೀಡುವಂತೆ ಈ ಒಕ್ಕೂಟವು ಕಾರ್ಯನಿರ್ವಹಿಸುತ್ತದೆ.

೬. ಮುಂದಿನ ಯೋಜನೆಗಳು:

ದ.ಕ.ಹಾ.ಉ. ಒಕ್ಕೂಟವು ಇನ್ನೂ ಹಲವಾರು ಯೋಜನೆಗಳನ್ನು ಇಟ್ಟುಕೊಂಡಿದೆ. ಅವುಗಳಲ್ಲಿ ಪ್ರಮುಖವಾದವು.

೧) **ವಿಚಾರಗೋಷ್ಠಿ** : ಆಧುನಿಕ ಹೈನುಗಾರಿಕೆಯ ಬಗ್ಗೆ ಸದಸ್ಯರಲ್ಲಿ ಸಾಕಷ್ಟು ಅರಿವು ಮೂಡಿಸುವುದು ಒಕ್ಕೂಟದ ಅತೀ ಮುಖ್ಯ ಉದ್ದೇಶವಾಗಿರುವುದರಿಂದ ೨-೩ ಸಂಘಗಳನ್ನು ಒಟ್ಟುಗೂಡಿಸಿ ಕನಿಷ್ಠ ೧೦೦ ಹೈನುಗಾರರಿಗೆ ಆಧುನಿಕ ಹೈನುಗಾರಿಕಾ ಚರ್ಚೆ, ವಿಚಾರಗೋಷ್ಠಿ ಏರ್ಪಡಿಸುವ ಮುಂದಾಲೋಚನೆ ಮಾಡಿಕೊಂಡಿದೆ.

೨) **ಜಾನುವಾರು ಪ್ರದರ್ಶನ :** ಉತ್ತಮ ಸಾಕಾಣಿಕೆ ಮಾಡಿದ ಉತ್ತಮ ತಳಿಯ ರಾಸುಗಳನ್ನು ಪ್ರದರ್ಶನಕ್ಕೆ ತರುವುದರಿಂದ ಹೆಚ್ಚಿನ ರೈತರಿಗೆ ಜಾನುವಾರುಗಳನ್ನು ಸಾಕಾಣಿಕೆ ಮಾಡುವುದರ ಬಗ್ಗೆ ಒಲವು ಬರುವಂತೆ ಮಾಡುವುದು ಇದರ ಇನ್ನೊಂದು ಯೋಜನೆಯಾಗಿದೆ.

೩) **ಜನಶ್ರೀ ಯೋಜನೆ :** ಆಕಸ್ಮಿಕವಾಗಿ ಹೈನುಗಾರರು ಮರಣ ಹೊಂದಿದ್ದಲ್ಲಿ ಅಂತಹ ಸದಸ್ಯರ ಅವಲಂಬಿತರಿಗೆ ಆರ್ಥಿಕ ಸಹಾಯವಾಗಿ ವಿಮಾ ಕಂಪೆನಿಯಿಂದ ಒಡಂಬಡಿಕೆ ಮಾಡಿಕೊಂಡು ವಿಮಾ ಮೊತ್ತವನ್ನು ನೀಡುವ ಯೋಜನೆ ಜಾರಿಯಲ್ಲಿರುತ್ತದೆ. ಇವೆಲ್ಲವು ಈ ಒಕ್ಕೂಟದ ಪ್ರಮುಖ ಯೋಜನೆಗಳಾಗಿವೆ.

ಜಿಲ್ಲೆಯಲ್ಲಿ ಪ್ರಸ್ತುತ ೪೦,೦೦೦ ದಿಂದ ೫೦,೦೦೦ ಲೀಟರ್ ಹಾಲಿನ ಕೊರತೆ ಇದ್ದು, ಕೊರತೆ ಇರುವ ಹಾಲನ್ನು ಹೊರ ಜಿಲ್ಲೆಯಿಂದ ತರಿಸಿ ಗ್ರಾಹಕರಿಗೆ ವಿತರಿಸಲಾಗುತ್ತದೆ.ಕರ್ನಾಟಕ ಹಾಲು ಮಹಾಮಂಡಳದ ಮುಂದಿನ ಯೋಜನೆಯು ಜಿಲ್ಲೆಗೆ ಬೇಕಾದ ಹಾಲನ್ನು ಜಿಲ್ಲೆಯಲ್ಲೇ ಉತ್ಪಾದಿಸಿ ಗ್ರಾಹಕರಿಗೆ ಬೇಕಾದ ಹಾಲನ್ನು ಸಂಪೂರ್ಣವಾಗಿ ಜಿಲ್ಲೆಯಲ್ಲೇ ಉತ್ಪಾದಿಸಲು ಈ ಮಂಡಳಿಯ ಆದ್ಯ ಗುರಿಯಾಗಿರುತ್ತದೆ.ತಾಲೂಕಿನಲ್ಲಿ ಹೈನುಗಾರಿಕೆಯು ಪ್ರಗತಿದತ್ತವಾಗಿ ನಡೆಯುತ್ತಿದ್ದು ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಪ್ರಗತಿಯನ್ನು ಸಾಧಿಸಲೆಂದು ಕರ್ನಾಟಕ ಹಾಲು ಮಹಾ ಮಂಡಳಿಯ ಗುರಿಯಾಗಿದೆ.

೩.೭ ಉಪಸಂಹಾರ

ಹೈನುಗಾರಿಕೆಯು ಕಳೆದ ೧೦-೧೨ ವರ್ಷಗಳಿಗೆ ಹೋಲಿಸಿದಾಗ ಕರ್ನಾಟಕ ಹಾಲು ಮಹಾ ಮಂಡಳಿಯ ನೆರವಿನಿಂದಾಗಿ ಸಾಕಷ್ಟು ಪ್ರಗತಿದಾಯಕವಾಗಿ ಹೈನುಗಾರಿಕೆಯು ಮುಂದುವರಿದುಕೊಂಡು ಬಂದಿರುವುದು ಉತ್ಪಾದನೆಯಾದ ಹಾಲಿನ ಹೆಚ್ಚಳವು ಸ್ಪಷ್ಟ ನಿದರ್ಶನವಾಗಿರುತ್ತದೆ. ಹೈನುಗಾರರ ಆರ್ಥಿಕ ಸಬಲೀಕರಣವನ್ನು ನಿರಂತರವಾಗಿ ಕಾಪಾಡಿಕೊಂಡು ತಾಲ್ಲೂಕು ಮತ್ತು ಜಿಲ್ಲೆಯ ಗ್ರಾಹಕರಿಗೆ ಅವಶ್ಯಕತೆ ಇರುವಷ್ಟು ಹಾಲನ್ನು ಉತ್ಪಾದನೆ ಮಾಡಲು ಈ ಒಕ್ಕೂಟವು ಸತತವಾಗಿ ಪ್ರಯತ್ನಿಸುತ್ತಾ ಬಂದಿದೆ.

ಅಧ್ಯಾಯ–೪

ಹೈನುಗಾರಿಕಾ ಅಭಿವೃದ್ಧಿಗೆ ಸಹಕಾರಿ ಸಂಘಗಳ ಕೊಡುಗೆಗಳ ಕುರಿತು ವಿಶ್ಲೇಷಣೆ

ಅಧ್ಯಾಯ – ೪

ಹೈನುಗಾರಿಕಾ ಅಭಿವೃದ್ಧಿಗೆ ಸಹಕಾರಿ ಸಂಘಗಳ ಕೊಡುಗೆಗಳ ಕುರಿತು ವಿಶ್ಲೇಷಣೆ

೪.೧ ಪೀಠಿಕೆ:

ಗ್ರಾಮ ಸ್ವರಾಜ್ಯದ ಮೂಲಕ ರಾಮರಾಜ್ಯದ ಕನಸು ಕಾಣಲು ಗ್ರಾಮೀಣ ಜನರಿಗೆ ದುಡಿಮೆಯ ಅವಕಾಶವಿರುವ ಗ್ರಾಮೀಣ ಕೈಗಾರಿಕೆಗಳು ಕೃಷಿ ಆಧಾರಿತ ಉದ್ಯೋಗಗಳು ಸೃಷ್ಟಿಯಾಗಬೇಕೆಂದು ಮಹಾತ್ಮ ಗಾಂಧೀಜಿಯವರು ಹೇಳುತ್ತಿದ್ದುದು ಸಹಕಾರ ಸಂಘಗಳ ಮೂಲಕ ಸಾಕಾರಗೊಳ್ಳುತ್ತಿದೆ. ಸಮಾಜದ ಎಲ್ಲಾ ವರ್ಗದ ಜನರಿಗೂ ಸಾಮಾಜಿಕ ನ್ಯಾಯ ದೊರಕಿಸುತ್ತಿರುವುದು ಸಹಕಾರ ಸಂಘಗಳು. ಇಂತಹ ಈ ಸಂಘಗಳು ಸದಸ್ಯರ ಅಭಿವೃದ್ಧಿಗೆ ಶ್ರಮಿಸುತ್ತಾ, ಸಂಘವು ಗಳಿಸಿದ ಲಾಭದಲ್ಲಿ ಸಾಮಾಜಿಕ ಅಭಿವೃದ್ಧಿ ಕಾರ್ಯಗಳನ್ನು ಹಮ್ಮಿಕೊಂಡು ಪ್ರಜಾಪ್ರಭುತ್ವ ಮಾದರಿಯಲ್ಲಿ ಕಾರ್ಯ ನಿರ್ವಹಿಸುತ್ತದೆ. ದೇಶದ ಹೈನೋದ್ಯಮದಲ್ಲಿ ಸಹಕಾರಿ ಸಂಸ್ಥೆಗಳು ಮಾತ್ರ ರೈತರ ಹಿತಾಸಕ್ತಿ, ರೈತರ ಅಭಿವೃದ್ಧಿ ಧ್ಯೇಯವಾಗಿಟ್ಟುಕೊಂಡು ಶ್ರಮಿಸುತ್ತಿರುವ ಸಂಸ್ಥೆಗಳು. ಕೃಷಿಕ ಅಥವಾ ರೈತ ಭಾರತದ ಬೆನ್ನೆಲುಬು ಆಗಿದ್ದಂತೆ ಸದಸ್ಯರು ಈ ಸಹಕಾರ ಸಂಘಗಳ ಬೆನ್ನೆಲುಬು. ಸಂಘದ ಅಭಿವೃದ್ಧಿಯು ಅದರ ಸದಸ್ಯರನ್ನು ಅವಲಂಬಿಸಿದೆ. ಸಹಕಾರದಿಂದ ಸಮಾಜದ ಸರ್ವರ ಅಭಿವೃದ್ಧಿಯನ್ನು ಕಾಣಬಹುದು. ಖಾಸಗಿ ಅಥವಾ ಬಹುರಾಷ್ಟ್ರೀಯ ಡೈರಿಗಳ ಮುಖ್ಯ ಉದ್ದೇಶ ಅಧಿಕ ಲಾಭಗಳಿಸುವುದಾದರೆ, ಈ ಹಾಲು ಉತ್ಪಾದಕರ ಸಹಕಾರ ಸಂಘಗಳ ಪ್ರಮುಖ ಉದ್ದೇಶ ಹಾಲು ಉತ್ಪಾದಕರಿಗೆ ಲಾಭದಾಯಕ ಖರೀದಿ ಬೆಲೆ ನೀಡುವುದು.

ಪ್ರತಿಯೊಬ್ಬ ಮನುಷ್ಯ ತಮ್ಮ ಹೊಟ್ಟೆಪಾಡಿಗಾಗಿ ಹಲವು ಕ್ಷೇತ್ರಗಳಲ್ಲಿ ದುಡಿಯುತ್ತಾನೆ. ಅದರಲ್ಲಿ ಹೈನುಗಾರಿಕಾ ಕ್ಷೇತ್ರವೂ ಒಂದು. ಈ ಉದ್ಯೋಗವು ಯಶಸ್ಸನ್ನು ಕಾಣುವಲ್ಲಿ ಸಹಕಾರಿ ಸಂಘಗಳು ಯಾವ ರೀತಿಯಾಗಿ ಕೊಡುಗೆಯನ್ನು ನೀಡುತ್ತದೆ ಎಂಬುವುದನ್ನು ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ. ಮಂಗಳೂರು ತಾಲೂಕಿನಲ್ಲಿ ಹೈನುಗಾರಿಕೆಯು ಪ್ರಮುಖ ಪಾತ್ರ ವಹಿಸುತ್ತದೆ. ಜನರಿಗೆ ಉದ್ಯೋಗದ ಜೊತೆಗೆ ಸ್ವಲ್ಪಮಟ್ಟಿನ ಆದಾಯ, ಕೃಷಿಗೆ ಉಪಯುಕ್ತವಾದಂತಹ ಗೊಬ್ಬರವನ್ನು ಕೂಡ ಪೂರೈಸುತ್ತದೆ.

'ಮಂಗಳೂರು ತಾಲೂಕಿನಲ್ಲಿ ಹೈನುಗಾರಿಕೆ' ಎಂಬ ಈ ಅಧ್ಯಯನವನ್ನು ಈ ಪ್ರದೇಶದಲ್ಲಿ ಹೈನುಗಾರಿಕೆಯ ಪರಿಸ್ಥಿತಿಯನ್ನು ಅಧ್ಯಯನ ಮಾಡುವುದು, ಹಾಗೂ ಹೈನುಗಾರಿಕಾ ವಿಧಾನವನ್ನು ಅಧ್ಯಯನ ಮಾಡುವುದು ಮತ್ತು ಅಧ್ಯಯನ ಪ್ರದೇಶದಲ್ಲಿ ಹೈನುಗಾರಿಕಾ ಅಭಿವೃದ್ಧಿಗೆ ಸಹಕಾರಿ ಸಂಘಗಳ ಪಾತ್ರದ ಕುರಿತು ವಿಶ್ಲೇಷಣೆ ಮಾಡುವಂತಹ ಉದ್ದೇಶವಾಗಿಟ್ಟುಕೊಂಡು ನಡೆಸಲಾಗಿದೆ.

ಮಂಗಳೂರು ತಾಲೂಕಿನಲ್ಲಿರುವ ಕೆಲವೊಂದು ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಸದಸ್ಯರಿಗೆ ಪ್ರಶ್ನಾವಳಿಯನ್ನು ನೀಡಿ ಆ ಮೂಲಕ ಉತ್ಪಾದಕರಿಂದ ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಹೈನುಗಾರಿಕೆಯಲ್ಲಿ ತೊಡಗಿರುವ ಜನರಿಂದ ಮಾಹಿತಿಯನ್ನು ಈ ಕೆಳಗಿನ ಶೀರ್ಷಿಕೆಗಳಡಿಯಲ್ಲಿ ಕೋಷ್ಟಕಗಳು ೪.೧ ರಿಂದ ೪.೨ರ ಮೂಲಕ ಅಭಿವ್ಯಕ್ತಪಡಿಸಲಾಗಿದೆ.

೪.೨ ಪ್ರಶ್ನಾವಳಿಗೆ ಉತ್ತರಿಸಿದವರಿಗೆ ಸಂಬಂಧಿಸಿದಂತಹ ಸಾಮಾನ್ಯ ಮಾಹಿತಿಗಳು

ಅಧ್ಯಯನದ ವಿಷಯಕ್ಕೆ ಸಂಬಂಧಿಸಿದಂತೆ ಮಾಹಿತಿ ಸಂಗ್ರಹಿಸುವ ಸಂದರ್ಭದಲ್ಲಿ ಉತ್ತರಿಸಿದವರ ವೈಯಕ್ತಿಕ ಹಿನ್ನೆಲೆಯ ಪರಿಚಯ ಮಾಡಿಕೊಳ್ಳುವ ಕ್ರಮವಿದೆ. ಅದರಂತೆ ಪ್ರಸ್ತುತ ಅಧ್ಯಯನದಲ್ಲಿಯೂ ಪ್ರಶ್ನಾವಳಿಯ ಆರಂಭದಲ್ಲಿ ಮಾಹಿತಿದಾರರ ಹೆಸರು, ವಯಸ್ಸು, ಶಿಕ್ಷಣ, ಉದ್ಯೋಗ, ವಾರ್ಷಿಕ ಆದಾಯ ಹಾಗೂ ಜಾತಿಗೆ ಸಂಬಂಧಿಸಿದಂತೆ ಸಾಮಾನ್ಯ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಕ್ಷೇತ್ರ ಕಾರ್ಯದ ಸಂಧರ್ಭದಲ್ಲಿ ಪ್ರಶ್ನಾವಳಿಯನ್ನು ಮಂಗಳೂರು ತಾಲೂಕಿನ ಆಯ್ದ ಮೂರು ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಒಟ್ಟು 60 ಹೈನುಗಾರರಿಗೆ ಹಂಚಲಾಯಿತು. ಈ ಪ್ರಶ್ನಾವಳಿಗೆ ಉತ್ತರಿಸಿದವರಿಂದ ಈ ಎಲ್ಲಾ ಮಾಹಿತಿಗಳು ದೊರೆತಿವೆ.

ಕೋಷ್ಟಕ – ೪.೧

ಪ್ರತಿಕ್ರಿಯೆದಾರರ ಸಂಕ್ಷಿಪ್ತ ವಿವರಗಳು.

ವಿವರಗಳು	ಲಕ್ಷಣಗಳು	ಪ್ರಮಾಣ	ಒಟ್ಟು
ಲಿಂಗ	ಮಹಿಳೆಯರು ಪುರುಷರು	೩೨ (೫೪) ೨೮ (೪೬)	೬೦ (೧೦೦)
ವಯಸ್ಸು	ಅ. ೨೫ಕ್ಕಿಂತ ಕಡಿಮೆ ಆ. ೨೫ – ೪೦	ಇಲ್ಲ ೨೪ (೪೦)	

	ಇ. ೪೦ – ೬೦	೨೮ (೪೬)	೬೦ (೧೦೦)
	ಈ. ೬೦ ಕ್ಕಿಂತ ಅಧಿಕ	೦೮ (೧೪)	
ಶಿಕ್ಷಣ	ಅನಕ್ಷರಸ್ಥರು	೧೦ (೧೬–೭)	೬೦(೧೦೦)
	ಪ್ರಾಥಮಿಕ	೨೩ (೨೮)	
	ಪ್ರೌಢ	೧೮ (೩೦)	
	ಕಾಲೇಜು	೮ (೧೪)	
	ಸ್ನಾತಕೋತ್ತರ	೧ (೧.೭)	
ಉದ್ಯೋಗ	ಕೃಷಿ	೪೦ (೬೬)	೬೦ (೧೦೦)
	ಕೂಲಿ	೧೩ (೨೨)	
	ಸರಕಾರಿ	ಇಲ್ಲ	
	ಸ್ವಂತ ಉದ್ಯಮ	೭ (೧೨)	
ವಾರ್ಷಿಕ ಆದಾಯ	೫೦,೦೦೦ಕ್ಕಿಂತ ಕಡಿಮೆ	೪೬ (೭೭)	೬೦ (೧೦೦)
	೫೦,೦೦೦–೧ ಲಕ್ಷ	೧೨ (೨೦)	
	೧ ಲಕ್ಷ – ೨ ಲಕ್ಷ	೦೨ (೩)	
	೨ ಲಕ್ಷಕ್ಕಿಂತ ಮೇಲ್ಪಟ್ಟು	ಇಲ್ಲ	
ಜಾತಿ	ಹಿಂದು	೫೦ (೮೩.೪)	೬೦ (೧೦೦)
	ಕ್ರಿಶ್ಚಿಯನ್	೬(೧೦)	
	ಮುಸ್ಲಿಂ	ಇಲ್ಲ	
	ಇತರೆ	೪ (೬.೬)	

ಸೂಚನೆ : ಆವರಣದಲ್ಲಿರುವುದು ಶೇಕಡಾ ಪ್ರಮಾಣ

ಮೂಲ : ಪ್ರಾಥಮಿಕ ದತ್ತಾಂಶ

೪.೩ ಹೈನು ಉದ್ಯಮದ ಬಗ್ಗೆ ಮಾಹಿತಿ

ಹೈನು ಉದ್ಯಮದ ಬಗ್ಗೆ ಜನರ ಅಭಿಪ್ರಾಯಗಳು

ಹೆಚ್ಚಿನ ಜನರು, ಹೈನುಗಾರಿಕೆಯನ್ನು ತಮ್ಮ ಉಪಕಸುಬಾಗಿ ನಿರ್ವಹಿಸುತ್ತಿದ್ದು, ಹೈನುಗಾರಿಕೆಯ ಬಗ್ಗೆ ಅಭಿಪ್ರಾಯವನ್ನು ಕೇಳಿದಾಗ ಫಲಾನುಭವಿಗಳು ಈ ರೀತಿ ವ್ಯಕ್ತಪಡಿಸಿದ್ದಾರೆ.

ಕೊಷ್ಟಕ ೪.೨

ಹೈನು ಉದ್ಯಮದ ಬಗ್ಗೆ ಜನರ ಅಭಿಪ್ರಾಯ

ಕ್ರ.ಸಂ.	ಅಭಿಪ್ರಾಯ	ಸಂಖ್ಯೆ	ಶೇಕಡಾವಾರು
1	ಕೃಷಿಗಿಂತ ಉತ್ತಮ	18	30
2	ಕೃಷಿಯಷ್ಟೇ	35	58.3
3	ಕೃಷಿಗಿಂತ ಕಡಿಮೆ	7	11.7
	ಒಟ್ಟು	**60**	**100**

ಮೂಲ : ಪ್ರಾಥಮಿಕ ದತ್ತಾಂಶ

ಹೈನುಗಾರಿಕೆಯಲ್ಲಿ ತೊಡಗಿರುವ ಜನರಲ್ಲಿ ಶೇ 30ರಷ್ಟು ಜನರ ಅಭಿಪ್ರಾಯದಂತೆ ಹೈನುಗಾರಿಕೆಯು ಕೃಷಿಗಿಂತ ಉತ್ತಮ, ಇನ್ನು 58.3%ದಷ್ಟು ಫಲಾನುಭವಿಗಳ ಅಭಿಪ್ರಾಯದಂತೆ ಇದು ಕೃಷಿಯಷ್ಟೇ ಲಾಭದಾಯಕವಾದುದು ಹಾಗೂ 11.7%ದಷ್ಟು ಜನರು ಕೃಷಿಗಿಂತ ಕಡಿಮೆ ಲಾಭದಾಯಕವಾದುದೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಯಾಕೆಂದರೆ, ಕೃಷಿ ಚಟುವಟಿಕೆಗೆ ಬಹಳಷ್ಟು ಕಾರ್ಮಿಕರ ಅಗತ್ಯತೆ ಬೇಕು. ಇತ್ತೀಚೆಗೆ ಕೃಷಿ ಕಾರ್ಮಿಕರ ಕೊರತೆ ಇರುವ ಸ್ಥಿತಿಯಲ್ಲಿ ಕೃಷಿಗಿಂತ ಹೈನುಗಾರಿಕೆ ಉತ್ತಮ. ಅಲ್ಲದೆ ಲಾಭದಾಯಕವೂ ಕೂಡ. ಉಳಿದ 35 ಅಭಿಪ್ರಾಯಗಳ ಪ್ರಕಾರ ಇದು ಕೃಷಿಯಷ್ಟೆ ಲಾಭದಾಯಕವಾದುದು. ಯಾಕೆಂದರೆ ಕೃಷಿಗೆ ಖರ್ಚು ವೆಚ್ಚಗಳಿಂದ್ದಂತೆಯೇ ಹೈನುಗಾರಿಕೆಗೂ ಖರ್ಚನ್ನು ಮಾಡುತ್ತೇವೆ. ಆದ್ದರಿಂದ ಕೃಷಿಯಷ್ಟೇ ಲಾಭದಾಯಕ. ಶೇಕಡಾ 11.7 ರಷ್ಟು ಅಭಿಪ್ರಾಯದಂತೆ ಹೈನುಗಾರಿಕೆಯು ಕೃಷಿಗಿಂತ ಕಡಿಮೆ ಲಾಭದಾಯಕವಾದುದು. ಇಲ್ಲಿ ಪಶುಗಳಿಗೆ ಆಹಾರ, ಚಿಕಿತ್ಸೆ ಮೊದಲಾದವುಗಳಿಗೆ ಬಹಳಷ್ಟು ಖರ್ಚು ಮಾಡುತ್ತಿದ್ದು ಲಾಭ ಅನ್ನುವುದು ತೀರಾ ಕಡಿಮೆ.

ಕೋಷ್ಟಕ – ೪.೩

ಹೈನುರಾಸುಗಳ ತ್ಯಾಜ್ಯಗಳ ಬಳಕೆಯ ವಿವರ:

ಕ್ರಸಂ.	ಉತ್ತರ	ಪ್ರತಿಕ್ರಿಯೆ	ಶೇಕಡಾವಾರು ವಿವರ
1	ಹೌದು	60	100
2	ಇಲ್ಲ	–	–
	ಒಟ್ಟು	60	100

ಮೂಲ : ಪ್ರಾಥಮಿಕ ದತ್ತಾಂಶ

ಈ ಮೇಲಿನ ದತ್ತಾಂಶದ ಪ್ರಕಾರ ಹೈನುಗಾರಿಕೆಯಲ್ಲಿ ತೊಡಗಿರುವ ಜನರು ರಾಸುಗಳ ತ್ಯಾಜ್ಯವನ್ನು ಎಲ್ಲರೂ ಉಪಯುಕ್ತ ಬಳಕೆ ಮಾಡುತ್ತಾರೆ ಎಂಬುವುದು ಸ್ಪಷ್ಟವಾಗುತ್ತದೆ. ಹೆಚ್ಚಿನ ಜನರು ಕೃಷಿಕರಾಗಿದ್ದು, ಹೈನುಗಾರಿಕೆಯಿಂದ ಸಿಗುವಂತಹ ತ್ಯಾಜ್ಯಗಳನ್ನು ಕೃಷಿ ಹಾಗೂ ತೋಟಗಾರಿಕಾ ಚಟುವಟಿಕೆಗಳಿಗೆ ಬಳಸಿಕೊಳ್ಳುತ್ತಿದ್ದಾರೆ.

ಗೋಬರ್ ಅನಿಲ ಬಳಕೆಯ ವಿವರ

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮೂರು ಕ್ಷೇತ್ರವನ್ನು ಸಂಪರ್ಕಿಸಿದಾಗ ತಿಳಿದುಕೊಂಡ ವಿಷಯವೆಂದರೆ, ಗೋಬರ್ ಅನಿಲ ಬಳಕೆದಾರರ ಪ್ರಮಾಣ ಬಹಳಷ್ಟು ಕಡಿಮೆ.

ಕೋಷ್ಟಕ ೪.೪ ಗೋಬರ ಅನಿಲ ಬಳಕೆಯ ವಿವರ.

ಕ್ರಸಂ.	ವಿವರಗಳು	ಪ್ರತಿಕ್ರಿಯೆ	ಶೇಕಡಾವಾರು ಪ್ರಮಾಣ
1	ಹೌದು	17	28.33
2	ಇಲ್ಲ	43	71.67
	ಒಟ್ಟು	60	100

ಈ ಕೋಷ್ಟಕದ ಪ್ರಕಾರ 28.33%ದಷ್ಟು ಫಲಾನುಭವಿಗಳು ಮಾತ್ರ ಗೋಬರ್ ಅನಿಲವನ್ನು ಬಳಸುತ್ತಿದ್ದು, ಉಳಿದಂತಹ ಶೇಕಡಾ 71.67ರಷ್ಟು ಫಲಾನುಭವಿಗಳು ಗೋಬರ್ ಅನಿಲವನ್ನು ಬಳಸುತ್ತಿಲ್ಲ. ಗೋಬರ್ ಗ್ಯಾಸ್ ಅಳವಡಿಕೆಗೆ ಹಣಕಾಸಿನ ಸಮಸ್ಯೆ ಇದ್ದು ಹಾಗೂ ಇತರ ಇಂಧನದ ಮೂಲವಾದ ಕಟ್ಟಿಗೆ ಧಾರಾಳವಾಗಿ ಲಭ್ಯವಾಗುತ್ತದೆ. ಇದರಿಂದ ನಾವು ಗೋಬರ್ ಗ್ಯಾಸ್ ಬಳಕೆ ಮಾಡುತ್ತಿಲ್ಲ ಎಂಬುವುದು ಅವರ ಅಭಿಪ್ರಾಯ.

ಹೈನುಗಾರಿಕೆಯಿಂದ ಆರ್ಥಿಕ ಅಭಿವೃದ್ಧಿ ಮಾಹಿತಿ

ಜನರು ತಮ್ಮ ಜೀವನ ನಿರ್ವಹಣೆಗಾಗಿ ಹಲವಾರು ಕೆಲಸಗಳನ್ನು ನಿರ್ವಹಿಸುತ್ತಾರೆ. ಇದರಿಂದ ಆರ್ಥಿಕ ಲಾಭವನ್ನು ಪಡೆಯುತ್ತಾರೆ. ಅಂತೆಯೇ ಆರ್ಥಿಕ ಅಭಿವೃದ್ಧಿ ಹೈನುಗಾರಿಕೆಯಿಂದ ಸಾಧ್ಯವಾಗಿದೆಯೇ ಎಂಬುವುದನ್ನು ಈ ಮುಂದಿನ ಕೋಷ್ಟಕದಿಂದ ತಿಳಿದುಕೊಳ್ಳಬಹುದು.

ಕೋಷ್ಟಕ – ೪.೫

ಹೈನುಗಾರಿಕೆಯಿಂದ ಆರ್ಥಿಕ ಅಭಿವೃದ್ಧಿ ಮಾಹಿತಿ

ಕ್ರ.ಸಂ.	ಉತ್ತರ	ಪ್ರತಿಕ್ರಿಯೆ	ಶೇಕಡಾ
1	ಹೌದು	46	76.77
2	ಇಲ್ಲ	14	23.33
	ಒಟ್ಟು	60	100

ಮೂಲ: ಪ್ರಾಥಮಿಕ ದತ್ತಾಂಶ

ಈ ಕೋಷ್ಟಕದಲ್ಲಿ ಸ್ಪಷ್ಟವಾಗಿರುವಂತೆ ಶೇ. 76.67 ಫಲಾನುಭವಿಗಳ ಮಾಹಿತಿಯಂತೆ ಹೈನುಗಾರಿಕೆಯಿಂದ ಆರ್ಥಿಕ ಅಭಿವೃದ್ಧಿ ಸಾಧ್ಯವಾಗಿದೆ. ಹಾಗೂ ಶೇ 23.33ರಷ್ಟು ಫಲಾನುಭವಿಗಳ ಮಾಹಿತಿಯಂತೆ ಯಾವುದೇ ರೀತಿಯ ಆರ್ಥಿಕ ಅಭಿವೃದ್ಧಿ ಸಾಧ್ಯವಾಗಿಲ್ಲ ಎಂಬುವುದಾಗಿದೆ. ಅವರಲ್ಲಿ ಪಶುಗಳಿಗೆ ಬೇಕಾದ ಹುಲ್ಲು, ಮೇಯಿಸಲು ಸ್ವಂತ ಜಾಗದ ಕೊರತೆ, ಇದರಿಂದಾಗಿ ಹೆಚ್ಚಾಗಿ ಅವುಗಳ ಆಹಾರವನ್ನು ಹಣ ಕೊಟ್ಟು ಪಡೆಯುವುದರಿಂದ ಹಾಲು ಮಾರಾಟದಿಂದ ಬಹಳಷ್ಟು ಲಾಭ ಇಲ್ಲ ಎನ್ನುತ್ತಾರೆ.

ಹಾಲಿನ ಮಾರಾಟದ ವಿವರ

ಹೈನುಗಾರರು ಉತ್ಪಾದಿಸಿದ ಒಟ್ಟು ಹಾಲಿನಲ್ಲಿ ತಮ್ಮ ಬಳಕೆಯ ಹೊರತಾಗಿ ಹೆಚ್ಚುವರಿ ಹಾಲನ್ನು ಬೇರೆ–ಬೇರೆ ಕಡೆ ಮಾರಾಟ ಮಾಡುತ್ತಾರೆ. ಇದರ ಬಗೆಗಿನ ಕಿರುಮಾಹಿತಿ ಈ ರೀತಿ ಇದೆ.

60 ಜನರ ಸದಸ್ಯರಲ್ಲಿ ಎಲ್ಲರೂ ಕೂಡ ಹಾಲನ್ನು ಸಂಘಕ್ಕೆ ಪೂರೈಸುತ್ತಾರೆ. ಇದರಲ್ಲಿ ಕೆಲವರು ಹಾಲನ್ನು ಡೈರಿಯ ಜೊತೆಗೆ ಸ್ವಲ್ಪ ಪ್ರಮಾಣದ ಹಾಲನ್ನು ಸ್ಥಳೀಯವಾಗಿ ತಮ್ಮ ನೆರೆಹೊರೆಯ ಜನರಿಗೆ ಮಾರಾಟ ಮಾಡುತ್ತಾರೆ. ಸ್ಥಳೀಯವಾಗಿ ಮಾರಾಟ ಮಾಡುವುದರಿಂದ

ಹಣದ ಹೊರತಾಗಿ ಯಾವುದೇ ರೀತಿಯ ಇತರ ಪ್ರಯೋಜನ ಇಲ್ಲದಿದ್ದರೂ ನೀಡಬೇಕಾಗುತ್ತದೆ. ಯಾಕೆಂದರೆ ನೆರೆಹೊರೆಯ ಜನರಿಗೆ ಹಾಲು ನೀಡದಿದ್ದರೆ ಮನಸ್ತಾಪ ಉಂಟಾಗಬಹುದು ಅಥವಾ ತಮ್ಮ ಮನೆಯಲ್ಲಿ ನಡೆಯುವ ಕೃಷಿಕಾರ್ಯಗಳಿಗೆ ಬರುವುದಿಲ್ಲ ಎಂಬ ಕಾರಣಗಳಿಂದಾಗಿ ಹಾಲನ್ನು ಅವರಿಗೂ ನೀಡುತ್ತೇವೆ ಎಂದು ಮಾಹಿತಿದಾರರು ತಿಳಿಸಿದ್ದಾರೆ.

ಕಾರ್ಯನಿರ್ವಹಿಸುತ್ತಿರುವ ವಿವರ

ಹೈನುಗಾರಿಕೆಯಲ್ಲಿ ಬಹಳಷ್ಟು ಕೆಲಸ ಕಾರ್ಯಗಳಿದ್ದು, ಇದನ್ನು ಯಾರು ನಿರ್ವಹಿಸುತ್ತಾರೆ ಎಂದು ಫಲಾನುಭವಿಗಳಲ್ಲಿ ಕೇಳಿದಾಗ ಈ ರೀತಿಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಕೋಷ್ಟಕ ೪.೬

ಕ್ರಸಂ.	ವಿವರ	ಸಂಖ್ಯೆ	ಶೇಕಡಾವಾರು
1	ಮಹಿಳೆಯರು	30	50
2	ಗಂಡಸರು	19	31.7
3	ಮಕ್ಕಳು	11	18.3
4	ಕೆಲಸಗಾರರು	–	–
	ಒಟ್ಟು	**60**	**100**

ಮೂಲ : ಪ್ರಾಥಮಿಕ ದತ್ತಾಂಶ

ಈ ಕೋಷ್ಟಕದ ಪ್ರಕಾರ ಹೈನುಗಾರಿಕೆಗೆ ಸಂಬಂಧಿಸಿದಂತೆ ಮಹಿಳೆಯರು ಶೇ 50ರಷ್ಟು ಕೊಡುಗೆಯನ್ನು ನೀಡಿದರೆ, ಗಂಡಸರು 31.7% ಮತ್ತು ಮಕ್ಕಳು 18.3%ದಷ್ಟು ಕಾರ್ಯನಿರ್ವಹಿಸುವವರಾಗಿದ್ದಾರೆ. ಒಟ್ಟಿನಲ್ಲಿ ಹೈನುಗಾರಿಕಾ ಚಟುವಟಿಕೆಗೆ ಸಂಬಂಧಿಸಿದಂತೆ ಮಹಿಳೆಯರ ಪಾತ್ರ ಅಧಿಕವಿದೆ ಮತ್ತು ಅಧ್ಯಯನ ಕ್ಷೇತ್ರದಲ್ಲಿ ಹೈನುಗಾರಿಕೆಗೆ ಸಂಬಂಧಿಸಿದಂತೆ ಕೆಲಸಗಾರರನ್ನು ನೇಮಿಸಿಕೊಂಡಿಲ್ಲ ಎಂದು ತಿಳಿದು ಬರುತ್ತದೆ.

ಈ ಕೋಷ್ಟಕದ ಪ್ರಕಾರ ಮಹಿಳೆಯರ ಕಾರ್ಯ ನಿರ್ವಹಿಸುವಿಕೆಯ ಪಾಲು ಅಧಿಕ. ಯಾಕೆಂದರೆ ಪುರುಷರು ಬೇರೆ ಕೆಲಸಗಳಲ್ಲಿ ಅಂದರೆ ಆದಾಯ ತರುವಂತಹ ಇತರ ಕೆಲಸಗಳನ್ನು ನಿರ್ವಹಿಸುತ್ತಾರೆ. ಇದರಿಂದ ಮನೆಯಲ್ಲಿ ಇರುವ ನಾವು ಹೆಚ್ಚಾಗಿ ಹೈನುಗಾರಿಕಾ ಕೆಲಸಗಳನ್ನು ನಿರ್ವಹಿಸುತ್ತಿದ್ದೇವೆ ಎಂಬುವುದು ಮಹಿಳೆಯರ ಉತ್ತರ. ಇನ್ನು ಮಕ್ಕಳು ಶಾಲಾ–

ಕಾಲೇಜುಗಳಿಗೆ ಹೋಗುತ್ತಿದ್ದು ಹೆಚ್ಚಿನ ಕೆಲಸಗಳನ್ನು ನಿರ್ವಹಿಸದೆ ಕೇವಲ ಹಾಲನ್ನು ಸೊಸೈಟಿಗೆ ಕೊಂಡೊಯ್ಯುವ ಕೆಲಸಗಳಲ್ಲಿ ಮಾತ್ರ ಭಾಗವಹಿಸುತ್ತಾರೆ.

ಹಾಲನ್ನು ಸೊಸೈಟಿಗೆ ಕೊಂಡೊಯ್ಯುವ ಕೆಲಸದ ವಿವರ:

ರಾಸುವಿನಿಂದ ಕರೆದಂತಹ ಹಾಲನ್ನು ಮಾರಾಟ ಸ್ಥಳಕ್ಕೆ ಅಥವಾ ಸೊಸೈಟಿಗೆ ಕೊಂಡೊಯ್ಯುವವರಿಂದ ಮಾಹಿತಿ ಸಂಗ್ರಹಿಸಲಾಗಿದೆ. ಅದರ ಮಾಹಿತಿ ಈ ಕೋಷ್ಟಕದಲ್ಲಿ ನೀಡಲಾಗಿದೆ.

ಕೋಷ್ಟಕ ೪.೭

ಕ್ರ.ಸಂ.	ವಿವರ	ಸಂಖ್ಯೆ	ಶೇಕಡಾವಾರು ಪ್ರಮಾಣ
1	ಮಹಿಳೆಯರು	5	8.33
2	ಗಂಡಸರು	15	25
3	ಮಕ್ಕಳು	15	25
4	ಅವಕಾಶಕ್ಕೆ ತಕ್ಕಂತೆ	25	41.67
	ಒಟ್ಟು	**60**	**100**

ಮೂಲ : ಪ್ರಾಥಮಿಕ ದತ್ತಾಂಶ

ಈ ಕೋಷ್ಟಕದ ಪ್ರಕಾರ ಮಹಿಳೆಯರು ಮನೆಕೆಲಸಗಳನ್ನು ನಿರ್ವಹಿಸಬೇಕಾದುದರಿಂದ ಮಹಿಳೆಯರ ಪಾತ್ರ ಈ ಕೆಲಸದಲ್ಲಿ ಕಡಿಮೆ. ಗಂಡಸರು ಮತ್ತು ಮಕ್ಕಳು ಹಾಲನ್ನು ಮಾರುಕಟ್ಟೆಗೆ ಕೊಂಡೊಯ್ಯುವ ಕೆಲಸವನ್ನು ಮಾಡಿದರು. ಶೇ. 41.67ರಷ್ಟು ಫಲಾನುಭವಿಗಳ ಕುಟುಂಬದಲ್ಲಿ ಅವಕಾಶಕ್ಕೆ ತಕ್ಕಂತೆ ಅಂದರೆ ಮಹಿಳೆಯರು, ಗಂಡಸರು, ಮಕ್ಕಳು ನಿರ್ವಹಿಸುತ್ತಾರೆ.

ಕೋಷ್ಟಕ : ೪.೮

ಹೈನುಗಾರಿಕಾ ಆಸಕ್ತಿ ವಿವರ:

ಕ್ರ.ಸಂ.	ವಿವರ	ಪ್ರತಿಕ್ರಿಯೆ	ಶೇಕಡಾ
1	ಹೌದು	54	90
2	ಇಲ್ಲ	6	10
	ಒಟ್ಟು	**60**	**100**

ಮೂಲ : ಪ್ರಾಥಮಿಕ ದತ್ತಾಂಶ

ಫಲಾನುಭವಿಗಳ ಹೈನುಗಾರಿಕೆಯ ಬಗ್ಗೆ ಅವರ ಆಸಕ್ತಿಯ ಬಗ್ಗೆ ಪ್ರಶ್ನಿಸಿದಾಗ ಶೇ. 90ರಷ್ಟು ಪ್ರತಿಕ್ರಿಯೆ ಹೈನುಗಾರಿಕೆಯನ್ನು ಮುಂದುವರಿಸುವಂತದ್ದಾಗಿದೆ. ಯಾಕೆಂದರೆ, ಹಾಲನ್ನು ಬೇರೆ ಮೂಲಗಳಿಂದ ಖರೀದಿಸುವುದಕ್ಕಿಂತ, ಸ್ವತಃ ಉತ್ಪಾದಿಸುವುದು ಉತ್ತಮ. ಅಲ್ಲದೆ ಕೃಷಿ ಚಟುವಟಿಕೆಗಳಿಗೆ ಬೇಕಾದ ಗೊಬ್ಬರವನ್ನು ಹಣ ಕೊಟ್ಟು ಖರೀದಿಸುವುದಕ್ಕಿಂತ ಹೈನುಗಾರಿಕೆಯ ಮೂಲಕ ಮನೆಯಲ್ಲೆ ತಯಾರಿಸಿ ತೋಟಗಾರಿಕೆ ಹಾಗೂ ಕೃಷಿಗೆ ಬಳಸಿಕೊಳ್ಳಬಹುದು. ಇದಕ್ಕಾಗಿ ಹೈನುಗಾರಿಕೆಯನ್ನು ಮುಂದುವರಿಸುವ ಆಸಕ್ತಿ ಹೊಂದಿದಾರೆ. ಇನ್ನು ಶೇ. 10%ರಷ್ಟು ಪ್ರತಿಕ್ರಿಯೆ ಹೈನುಗಾರಿಕೆಯನ್ನು ಮುಂದುವರಿಸಿಕೊಳ್ಳುವುದಾಗಿತ್ತು. ಈ ಬಗ್ಗೆ ಯಾಕೆ ಎಂದು ಪ್ರಶ್ನಿಸಿದಾಗ ಕೆಲವು ಕಾರಣಗಳನ್ನು ನೀಡಿದ್ದಾರೆ. ಅವುಗಳಲ್ಲಿ ಪ್ರಮುಖವಾದವು ಅಧಿಕ ನಿರ್ವಹಣಾ ವೆಚ್ಚ. ಮನೆಯಲ್ಲಿ ಸದಸ್ಯರ ಕೊರತೆ ಇತ್ಯಾದಿ.

ಕೋಷ್ಟಕ : ೪.೯

ಸಹಕಾರ ಸಂಘದಲ್ಲಿ ಮಾಹಿತಿದಾರರ ಸದಸ್ಯತನ ವಿವರ:

ಕ್ರಸಂ.	ವಿವರ	ಉತ್ತರ	ಶೇಕಡಾವಾರು ಪ್ರಮಾಣ
1	ಹೌದು	60	100
2	ಇಲ್ಲ	–	–
	ಒಟ್ಟು	**60**	**100**

ಮೂಲ : ಪ್ರಾಥಮಿಕ ದತ್ತಾಂಶ

ಈ ಮೇಲಿನ ದತ್ತಾಂಶದ ಪ್ರಕಾರ ಎಲ್ಲಾ ಮಾಹಿತಿದಾರರು ಕೂಡ ಸಹಕಾರ ಸಂಘದ ಸದಸ್ಯತನ ಪಡೆದಿದ್ದಾರೆ ಎಂಬುವುದು ಸ್ಪಷ್ಟವಾಗುತ್ತದೆ. ಯಾಕೆಂದರೆ ಡೈರಿಗೆ ಹಾಲನ್ನು ಪೂರೈಸುವಾತ ಸದಸ್ಯನಾದಲ್ಲಿ ಆತನಿಗೆ ಕೇವಲ ಹಾಲಿನ ಬೆಲೆ ಮಾತ್ರವಲ್ಲದೆ ಇತರ ಆರ್ಥಿಕ ಸೌಲಭ್ಯಗಳಾದ ಬೋನಸ್, ವಸ್ತು ರೂಪದ ಉಡುಗೊರೆ ಪಡೆಯುತ್ತಾನೆ.

ಸದಸ್ಯತನ ಅವಧಿಯ ವಿವರ:

ಹಾಲು ಉತ್ಪಾದಕರ ಸಹಕಾರಿ ಸಂಘದಲ್ಲಿ ಫಲಾನುಭವಿಗಳು ಎಷ್ಟು ವರ್ಷದಿಂದ ಸದಸ್ಯತ್ವವನ್ನು ಪಡೆದಿದ್ದಾರೆ ಎಂಬುವುದನ್ನು ಈ ಕೋಷ್ಟಕದಲ್ಲಿ ತಿಳಿಸಲಾಗಿದೆ.

ಕೋಷ್ಟಕ . ೪.೧೦

ಕ್ರ.ಸಂ.	ಅವಧಿ	ಸಂಖ್ಯೆ	ಶೇಕಡಾವಾರು ಪ್ರಮಾಣ
1	2 ವರ್ಷ	4	6.67
2	2–5 ವರ್ಷ	10	16.67
3	5–10 ವರ್ಷ	21	35
4	10ಕ್ಕಿಂತ ಮೇಲ್ಪಟ್ಟು	25	41.66
	ಒಟ್ಟು	**60**	**100**

ಮೂಲ : ಪ್ರಾಥಮಿಕ ದತ್ತಾಂಶ

ಹಾ. ಉ. ಸಹಕಾರಿ ಸಂಘದ ಸೇವೆಯ ಬಗೆಗಿನ ಅಭಿಪ್ರಾಯ:

ಹಾಲು ಉತ್ಪಾದಕರ ಸಹಕಾರ ಸಂಘವು ನೀಡುತ್ತಿರುವ ಸೇವೆಗಳ ಬಗ್ಗೆ ಮಾಹಿತಿದಾರರಲ್ಲಿ ಅಭಿಪ್ರಾಯವನ್ನು ಕೇಳಿದಾಗ ಅವರಿಂದ ಬಂದ ಅಭಿಪ್ರಾಯ ಈ ಕೋಷ್ಟಕದಲ್ಲಿದೆ.

ಕೋಷ್ಟಕ ೪.೧೧

ಕ್ರ.ಸಂ.	ಉತ್ತರ	ಸಂಖ್ಯೆ	ಶೇಕಡಾವಾರು ಪ್ರಮಾಣ
1	ಅತ್ಯುತ್ತಮ	25	41.66
2	ಉತ್ತಮ	31	51.67
3	ಸಾಮಾನ್ಯ	4	6.67
4	ಅತೃಪ್ತಿಕರ	–	–
	ಒಟ್ಟು	**60**	**100**

ಮೂಲ : ಪ್ರಾಥಮಿಕ ದತ್ತಾಂಶ

ಈ ದತ್ತಾಂಶದ ಪ್ರಕಾರ ಹಾಲು ಉತ್ಪಾದಕರ ಸಹಕಾರ ಸಂಘವು ನೀಡುತ್ತಿರುವ ಸೇವೆಯು ಅತ್ಯುತ್ತಮವಾದುದು. ಯಾಕೆಂದರೆ, ಇಂದು ಸಂಘವು ನೀಡುತ್ತಿರುವ ಸೌಲಭ್ಯಗಳನ್ನು ಹಿಂದೆ ಪಡೆಯುತ್ತಿರುವ, ಉತ್ಪಾದಿಸಿದ ಎಲ್ಲಾ ಹಾಲಿಗೆ ಬೇಡಿಕೆ ಇರಲಿಲ್ಲ. ಆದರೆ ಇಂದು ಅಂತಹ ಸಮಸ್ಯೆಗಳಿಲ್ಲ ಎಂಬುವುದು 25 ಸದಸ್ಯರ ಅಭಿಪ್ರಾಯ. ಇನ್ನು ಶೇಕಡಾ 51.67ರಷ್ಟು ಅಭಿಪ್ರಾಯದಂತೆ ಸಂಘದ ಸೇವೆಯು ಉತ್ತಮ. ಸಂಘದಿಂದ ಪಶು ಆಹಾರ ಸೌಲಭ್ಯ, ಪಶುಚಿಕಿತ್ಸೆ, ಸದಸ್ಯರ ಮಕ್ಕಳಿಗೆ ವಿದ್ಯಾರ್ಥಿ ವೇತನಗಳು ಸಿಗುತ್ತಿರುವುದರಿಂದ ಉತ್ತಮವಾದುದು. ಇನ್ನು ಕೆಲವು ಸದಸ್ಯರ ಅಭಿಪ್ರಾಯದಂತೆ ಅಂದರೆ 6.67%ದಷ್ಟು ಸಂಘದ ಸೇವೆಯು ಸಾಮಾನ್ಯ.

ಹಾ. ಉ. ಸ. ಸಂಘದ ಸದಸ್ಯರ ಅನುಭವದ ವಿವರ:

ಸದಸ್ಯರ ಸಕ್ರಿಯವಾದ ಪಾಲ್ಗೊಳ್ಳುವಿಕೆ ಸಂಘಗಳ ಬೆಳವಣಿಗೆಗೆ ಅವಶ್ಯಕವಾಗಿದೆ. ಈ ಸಹಕಾರ ಸಂಘಗಳ ಆರ್ಥಿಕ ಸಹಕಾರವನ್ನು ಮಾತ್ರ ನೀಡುವುದಲ್ಲದೆ ವ್ಯಕ್ತಿಯ ಸರ್ವತೋಮುಖ ಅಭಿವೃದ್ಧಿಗೂ ಅವಕಾಶ ಮಾಡಿಕೊಡುತ್ತದೆ.

ಕೋಷ್ಟಕ – ೪.೧೨

ಕ್ರಸಂ.	ಸದಸ್ಯರ ಅನುಭವದ ವಿವರ	ಸಂಖ್ಯೆ	ಶೇಕಡಾವಾರು ವಿವರ
1	ಸಾಮಾನ್ಯ ಸದಸ್ಯನಾಗಿ	50	83.33
2	ನಿರ್ದೇಶಕನಾಗಿ	8	13
3	ಅಧ್ಯಕ್ಷನಾಗಿ	1	1.7
4	ಎಲ್ಲವೂ	1	1.7
	ಒಟ್ಟು	**60**	**100**

ಮೂಲ : ಪ್ರಾಥಮಿಕ ದತ್ತಾಂಶ

ಈ ಕೋಷ್ಟಕದ ಪ್ರಕಾರ 83.33% ರಷ್ಟು ಫಲಾನುಭವಿಗಳು ಸಾಮಾನ್ಯ ಸದಸ್ಯನಾಗಿದ್ದು, 13% ರಷ್ಟು ನಿರ್ದೇಶಕನಾಗಿ ಹಾಗೂ 1.7% ರಷ್ಟು ಅಧ್ಯಕ್ಷ ಮತ್ತು 1.7% ರಷ್ಟು ಎಲ್ಲಾ ರೀತಿಯ ಸದಸ್ಯತನದ ಅನುಭವವನ್ನು ಫಲಾನುಭವಿಗಳು ಹೊಂದಿದ್ದಾರೆ ಎಂದು ಸ್ಪಷ್ಟವಾಗುತ್ತದೆ.

ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ನಡೆಯುವ ಚುನಾವಣೆಗಳ ವಿವರ

ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ನಿರ್ದೇಶಕರು, ಅಧ್ಯಕ್ಷರು, ಚುನಾವಣೆಗಳ ಮೂಲಕ ಆಯ್ಕೆ ಮಾಡಲಾಗುತ್ತಿದೆ. ಈ ಬಗ್ಗೆ ಮಾಹಿತಿದಾರರಲ್ಲಿ ಪ್ರಶ್ನಿಸಿದಾಗ ವ್ಯಕ್ತಪಡಿಸಿದ ಮಾಹಿತಿಯನ್ನು ಈ ಕೋಷ್ಟಕದಲ್ಲಿ ಪ್ರಸ್ತುತಪಡಿಸಿದೆ.

ಕೋಷ್ಟಕ ೪.೧೩

ಕ್ರಸಂ.	ಉತ್ತರ	ಪ್ರತಿಕ್ರಿಯೆ	ಶೇಕಡಾವಾರು ಪ್ರಮಾಣ
1	ಆಗುತ್ತಿವೆ	55	91.7
2.	ಇಲ್ಲ	–	–

3.	ಗೊತ್ತಿಲ್ಲ	5	8.3
	ಒಟ್ಟು	**60**	**100**

ಮೂಲ : ಪ್ರಾಥಮಿಕ ದತ್ತಾಂಶಗಳು

ಈ ಕೋಷ್ಟಕದ ಪ್ರಕಾರ 55 ಮಂದಿ ಸದಸ್ಯರು ಚುನಾವಣೆ ಆಗುತ್ತಿದೆ ಅಂದರೆ – 91.7%ದಷ್ಟು ಚುನಾವಣೆಗಳು ಆಗುತ್ತಿವೆ ಎಂದು ವ್ಯಕ್ತಪಡಿಸಿದರೆ, ಶೇಕಡಾ – 8.3 ರಷ್ಟು ಮಾಹಿತಿದಾರರು ಚುನಾವಣೆಗಳು ನಡೆಯುವ ವಿಚಾರ ತಮಗೆ ಗೊತ್ತಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.

ಸಂಘದಲ್ಲಿ ಚುನಾವಣೆಯು ನಡೆಯುವ ವಿಷಯದ ಬಗ್ಗೆ ಅಲ್ಲಿನ ನೌಕರರು ಎಲ್ಲಾ ಸದಸ್ಯರಿಗೂ ಮನವರಿಕೆ ಮಾಡುತ್ತಾರೆ. ಇದರಿಂದ ಬಹಳಷ್ಟು ಸದಸ್ಯರು ಚುನಾವಣೆಗಳು ನಡೆಯುತ್ತದೆ ಎಂದರೆ ಶೇಕಡಾ 8.3 ರಷ್ಟು ಸದಸ್ಯರು ಗೊತ್ತಿಲ್ಲ ಎಂದು ಅಭಿಪ್ರಾಯ ಪಡುತ್ತಾರೆ. ಕಾರಣ ಇಲ್ಲಿ ಸದಸ್ಯರು ಅನಕ್ಷರಸ್ಥರಾಗಿರಬಹುದು, ಅಥವಾ ಡೈರಿಗೆ ಬಂದಂತಹ ಸಂಘದ ಸದಸ್ಯನ ಮನೆಯಿಂದ ಯಾರೋ ಹಾಲು ತಂದವನಲ್ಲಿ ಚುನಾವಣಾ ವಿಷಯವನ್ನು ಹೇಳಿದ್ದು, ಆತ ಮನೆಯಲ್ಲಿ ತಿಳಿಸಿರದೇ ಇದ್ದಲ್ಲಿ ಚುನಾವಣಾ ವಿಚಾರ ಸದಸ್ಯನಿಗೆ ಗೊತ್ತಿಲ್ಲದಿರಬಹುದು.

ಶೈಕ್ಷಣಿಕ ನೆರವಿನ ವಿವರ

ಹಾಲು ಉತ್ಪಾದಕರ ಸಹಕಾರ ಸಂಘವು ಸದಸ್ಯರಿಗೆ ಅವರ ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿ ವೇತನವನ್ನು ಜನಶ್ರೀ ಯೋಜನೆಯಡಿಯಲ್ಲಿ 9ನೇ ತರಗತಿಯಿಂದ 12 ಪಿ.ಯು.ಸಿಯವರಗೆ ನೀಡುತ್ತಿದ್ದು ಇದರ ಉಪಯೋಗವನ್ನು ಬಹುತೇಕ ಸದಸ್ಯರು ಪಡೆಯುತ್ತಿದ್ದಾರೆ. ಇದರ ಕುರಿತಾದ ಮಾಹಿತಿ ಈ ಮುಂದಿನ ಕೋಷ್ಟಕದಲ್ಲಿ ತಿಳಿಸಲಾಗಿದೆ.

ಕೋಷ್ಟಕ : ೪.೧೪

ಕ್ರಸಂ	ಪ್ರತಿಕ್ರಿಯೆ	ಫಲಾನುಭವಿಗಳು (ಶೇಕಡಾ)
1	ಹೌದು	76.67
2	ಇಲ್ಲ	23.33
	ಒಟ್ಟು	**100**

ಮೂಲ : ಪ್ರಾಥಮಿಕ ದತ್ತಾಂಶ

ಅಧ್ಯಯನ ಪ್ರದೇಶದಲ್ಲಿ ಶೇಕಡಾ 73.67ರಷ್ಟು ಫಲಾನುಭವಿಗಳು ಈ ಯೋಜನೆಯ ಉಪಯೋಗವನ್ನು ತಾವು ಸದಸ್ಯರಾಗಿರುವ ಹಾ.ಉ.ಸ. ಸಂಘದಿಂದ ಪಡೆದುಕೊಳ್ಳುತ್ತಿದ್ದು, 23.33%ದಷ್ಟು ಸದಸ್ಯರು ಈ ಯೋಜನೆಯ ಸವಲತ್ತನ್ನು ಪಡೆದುಕೊಳ್ಳುತ್ತಿಲ್ಲ, ಯಾಕೆಂದರೆ ಕೆಲವು ಸದಸ್ಯರ ಮಕ್ಕಳು ವಿದ್ಯಾಭ್ಯಾಸ ಮುಗಿಸಿದ್ದು, ಇನ್ನು ಕೆಲವರು 9ನೇ ತರಗತಿಯಿಂದ ಕಡಿಮೆ ಇದ್ದು ಇನ್ನು ಕೆಲವು ಮಕ್ಕಳು ಪದವಿ ಪೂರ್ವ ಶಿಕ್ಷಣವನ್ನು ಮುಗಿಸಿದ್ದರಿಂದ ಈ ಸೌಲಭ್ಯ ಪಡೆಯುತ್ತಿಲ್ಲ.

ಹೈನುಗಾರಿಕೆಯಲ್ಲಿ ಆಧುನಿಕ ತಂತ್ರಜ್ಞಾನದ ಬಗ್ಗೆ ಮಾಹಿತಿದಾರರ ವಿವರ:

ಬದುಕು ನಿಂತ ನೀರಲ್ಲ, ಬದಲಾವಣೆ ಅತೀ ಅಗತ್ಯ, ಹೈನುಗಾರಿಕೆಯಲ್ಲಿಯೂ ನಾವು ಹಲವಾರು ರೀತಿಯ ಬದಲಾವಣೆಗಳನ್ನು ಕಾಣುತ್ತೇವೆ. ಅಧ್ಯಯನ ಕ್ಷೇತ್ರದಲ್ಲಿ ಮಾಹಿತಿದಾರರು ಇತ್ತೀಚಿನ ದಿನದಲ್ಲಿ ಆಧುನಿಕ ಔಷಧೀಯ ಪದ್ಧತಿ, ರಸ ಮೇವಿನ ಬಳಕೆ, ಮಾದರಿ ಕೊಟ್ಟಿಗೆ, ಕೊಟ್ಟಿಗೆಯಲ್ಲಿ ವಿದ್ಯುತ್ ಬಳಕೆ ಮೊದಲಾದವುಗಳನ್ನು ಗಮನಿಸಬಹುದು. ಹಿಂದೆ ಜನರು ಪಶುಚಿಕಿತ್ಸೆಯಲ್ಲಿ ಸಾಂಪ್ರದಾಯಿಕ ಚಿಕಿತ್ಸಾ ವಿಧಾನವನ್ನು ಅನುಸರಿಸುತ್ತಿದ್ದರು. ಆದರೆ ಇಂದು ಲಸಿಕೆಗಳನ್ನು ಜಾನುವಾರುಗಳಿಗೆ ನೀಡುವುದರ ಮೂಲಕ ಆಧುನಿಕ ಚಿಕಿತ್ಸಾ ಕ್ರಮವನ್ನು ಅನುಸರಿಸುತ್ತಿದ್ದಾರೆ. ಹಸಿರು ಹುಲ್ಲು, ಬೈಹುಲ್ಲು, ಹಿಂಡಿಯನ್ನು ಪಶು ಆಹಾರವಾಗಿ ಉಪಯೋಗಿಸುತ್ತಿದ್ದ ಜನರು ಇಂದು ಅದರ ಜೊತೆಗೆ ಮುಸುಕಿನ ಜೋಳ, ಲವಣಾಂಶ ಮೊದಲಾದವುಗಳನ್ನು ಉಪಯೋಗಿಸುತ್ತಿದ್ದಾರೆ. ಕೊಟ್ಟಿಗೆಯಲ್ಲಿ ಎಲ್ಲಾ ಜನರು ವಿದ್ಯುತ್ತನ್ನು ಬೆಳಕಿಗಾಗಿ ಬಳಸಿಕೊಳ್ಳುತ್ತಾರೆ ಎಂದು ಮಾಹಿತಿ ನೀಡಿದ್ದಾರೆ.

ಇಷ್ಟೇ ಅಲ್ಲದೆ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿಯೂ ಕೂಡ ನಾವು ಆಧುನಿಕ ತಂತ್ರಜ್ಞಾನವನ್ನು ಕಾಣುತ್ತೇವೆ. ಹಿಂದೆ ಹಾಲನ್ನು ಲೀಟರ್‌ಗಳಲ್ಲಿ ಅಳೆಯುತ್ತಿದ್ದರು. ಇಂದು ಇಲೆಕ್ಟ್ರಾನಿಕ್ ತೂಕದ ಯಂತ್ರವಾದ ಸ್ವಯಂಚಾಲಿತ ತೂಕದ ಯಂತ್ರವನ್ನು ಡೈರಿಗಳು ಅಳವಡಿಸಿಕೊಂಡಿದ್ದುದರಿಂದಾಗಿ ಉತ್ಪಾದಕರು ಹಾಲನ್ನು ನೇರವಾಗಿ ತೂಕಮಾಡಿಸುತ್ತಾರೆ.

ಹೈನುಗಾರಿಕಾ ಸಾಲ–ಸೌಲಭ್ಯಕ್ಕೆ ಸಂಬಂಧಿಸಿದ ಅಭಿಪ್ರಾಯ :

ಅಧ್ಯಯನ ಪ್ರದೇಶದಲ್ಲಿ ಹೈನುಗಾರರು ಹೈನುಗಾರಿಕೆಗೆ ಸಂಬಂಧಿಸಿದಂತೆ ಬೇಕಾದ ಸಾಲ ಸೌಲಭ್ಯಗಳನ್ನು ಹಲವಾರು ಮೂಲಗಳಿಂದ ಪಡೆಯುತ್ತಾರೆ. ಹೆಚ್ಚಾಗಿ ಅವರು ತಮ್ಮ ಸಹಕಾರ ಸಂಘದ ಬ್ಯಾಂಕಿನಿಂದ ಸಾಲವನ್ನು ಪಡೆದುಕೊಳ್ಳುತ್ತಾರೆ. ಕೆಲವು ಫಲಾನುಭವಿಗಳು ಇತರ

ಬ್ಯಾಂಕುಗಳಿಂದ ಪಡೆಯುತ್ತಾರೆ. ಅಲ್ಲದೆ ಇತ್ತೀಚಿಗೆ ಸ್ವಸಹಾಯ ಸಂಘಗಳು ಕೂಡ ಇಂತಹ ವಾಣಿಜ್ಯ ಉದ್ದೇಶಕ್ಕೆ ಹಣವನ್ನು ಸಾಲವಾಗಿ ನೀಡುತ್ತದೆ. ಹೆಚ್ಚಾಗಿ ಅವರು ತಮ್ಮ ಸಹಕಾರ ಸಂಘದ ಬ್ಯಾಂಕಿನಿಂದ ಸಾಲವನ್ನು ಪಡೆದುಕೊಳ್ಳುತ್ತಾರೆ ಎಂಬುವುದು ಫಲಾನುಭವಿಗಳ ಅಭಿಪ್ರಾಯ. ಇನ್ನು ಕೆಲವರು ಜಾನುವಾರುಗಳ ಖರೀದಿಗೆ ಯಾವುದೇ ಹಣಕಾಸು ಸಂಸ್ಥೆಗಳಿಂದ ಸಾಲವನ್ನು ಪಡೆಯದೇ ತಮ್ಮ ಕುಟುಂಬದ ಸದಸ್ಯರಿಂದಲೇ ಹಣವನ್ನು ಒಟ್ಟುಗೂಡಿಸಿ ವ್ಯವಸ್ಥೆಯನ್ನು ಮಾಡುತ್ತಾರೆ ಎಂದು ಮಾಹಿತಿದಾರರು ವ್ಯಕ್ತಪಡಿಸಿದ್ದಾರೆ. ಈ ಕುರಿತ ದತ್ತಾಂಶವನ್ನು ಕೋಷ್ಟಕದಲ್ಲಿ ತಿಳಿಸಲಾಗಿದೆ.

ಕೋಷ್ಟಕ : ೪.೧೫

ಹೈನುಗಾರಿಕಾ ಸಾಲ-ಸೌಲಭ್ಯಗಳ ಮೂಲ

ಕ್ರ.ಸಂ.	ಮೂಲ	ಸಂಖ್ಯೆ	ಪ್ರಮಾಣ (%)
1	ಬ್ಯಾಂಕುಗಳು	40	66.7
2	ಸ್ವ-ಸಹಾಯ ಗುಂಪು	5	8.3
3	ಇತರ	15	25
	ಒಟ್ಟು	60	100

ಮೂಲ : ಪ್ರಾಥಮಿಕ ದತ್ತಾಂಶ

ಮೇಲಿನ ಈ ಕೋಷ್ಟಕದ ಪ್ರಕಾರ – ಶೇ 66.7 ರಷ್ಟು ಮಾಹಿತಿದಾರರು ಹಣಕಾಸಿನ ಸೌಲಭ್ಯಕ್ಕೆ ಬ್ಯಾಂಕುಗಳನ್ನು ಅವಲಂಬಿಸಿಕೊಂಡಿದ್ದು, 8.3% ದಷ್ಟು ಮಾಹಿತಿದಾರರು ಸ್ವ-ಸಹಾಯ ಗುಂಪುಗಳಿಂದ ಹಾಗೂ ಇನ್ನುಳಿದ ಶೇ – 25 ರಷ್ಟು ಮಾಹಿತಿದಾರರ ಅಭಿಪ್ರಾಯದಂತೆ ಹೈನುಗಾರರು ತಮ್ಮದೇ ಆದಾಯ ಅಥವಾ ತಮ್ಮ ಕುಟುಂಬದ ಎಲ್ಲಾ ಸದಸ್ಯರ ಆದಾಯದಿಂದ ಹೈನುಗಾರಿಕಾ ನಿರ್ವಹಣೆ ಅಥವಾ ಹೊಸ ರಾಸುಗಳ ಕೊಂಡುಕೊಳ್ಳುವಿಕೆಗೆ ಉಪಯೋಗಿಸುತ್ತಾರೆ.

ಕೋಷ್ಟಕ : ೪.೧೬

ಹಸು ತಳಿಗಳ ಲಾಭದಾಯಕತೆಯ ಬಗ್ಗೆ ಮಾಹಿತಿದಾರರ ಅಭಿಪ್ರಾಯ

ಕ್ರ.ಸಂ.	ತಳಿಗಳು	ಅಭಿಪ್ರಾಯ	ಪ್ರಮಾಣ (%)
1	ದೇಶೀಯ ತಳಿ	28	16.67
2	ವಿದೇಶಿ ತಳಿ	32	53.33
	ಒಟ್ಟು	**60**	**100**

ಅಧ್ಯಯನ ಕ್ಷೇತ್ರದಲ್ಲಿ ಜನರು ದೇಶೀಯ ತಳಿ ಹಾಗೂ ವಿದೇಶಿ ತಳಿಗಳನ್ನು ಬಳಸಿಕೊಳ್ಳುತ್ತಾರೆ. ಅವರಲ್ಲಿ ಯಾವ ತಳಿಗಳು ತುಂಬಾ ಲಾಭದಾಯಕ ಎಂದು ಕೇಳಿದಾಗ ನೀಡಿದಂತಹ ಮಾಹಿತಿಯನ್ನು ಈ ಮೇಲಿನ ಕೋಷ್ಟಕದಲ್ಲಿ ತಿಳಿಸಲಾಗಿದೆ. ಶೇಕಡಾ 16.67ರಷ್ಟು ಜನರು ದೇಶೀಯ ತಳಿಗಳು ಉತ್ತಮವೆಂದು ತಿಳಿಸಿದರೆ, ಬಹಳಷ್ಟು ಮಂದಿ ಮಾಹಿತಿದಾರರು ಅಂದರೆ 32 ಜನರು, ಅಂದರೆ 53.33% ದಷ್ಟು ಮಾಹಿತಿದಾರರ ಅಭಿಪ್ರಾಯದಂತೆ ವಿದೇಶೀ ತಳಿಗಳೇ ತುಂಬಾ ಉತ್ತಮ. ಯಾಕೆಂದರೆ ಅವರ ಪ್ರಕಾರ ವಾಣಿಜ್ಯ ದೃಷ್ಟಿಯಲ್ಲಿ ಈ ವಿದೇಶಿ ತಳಿಯ ಪಶುಗಳು ತುಂಬಾ ಪ್ರಮಾಣದ ಹಾಲನ್ನು ನೀಡುತ್ತದೆ. ಇದರಿಂದ ಅಧಿಕ ಆದಾಯವನ್ನು ಪಡೆಯಬಹುದು ಎಂಬುವುದು ಈ ಜನರ ನಿಲುವು.

ಸಂಘದಿಂದ ಹೈನುಗಾರಿಕೆಗೆ ಪಡೆಯುವ ಸೌಲಭ್ಯಗಳ ವಿವರ :

ಹಾಲು ಉತ್ಪಾದಕರ ಸಹಕಾರ ಸಂಘದ ಸದಸ್ಯರೆಲ್ಲರೂ ಒಂದಲ್ಲ ಒಂದು ರೀತಿಯ ಸೌಲಭ್ಯವನ್ನು ಪಡೆದುಕೊಳ್ಳುತ್ತಿದ್ದಾರೆ. ಹಣಕಾಸಿನ ವಿಚಾರದಲ್ಲಿ ಈ ಹಾಲು ಉತ್ಪಾದಕರು ಕೇವಲ ಉತ್ಪಾದಿತ ಹಾಲಿನ ಬೆಲೆಯನ್ನು ಪಡೆಯುವುದಲ್ಲದೆ, ಬೋನಸ್ ಕೂಡ ಪಡೆಯುತ್ತಾರೆ. ಅಲ್ಲದೆ ಜನಶ್ರೀ ಯೋಜನೆಯಿಂದ ಸಿಗುವ ವಿದ್ಯಾರ್ಥಿ ವೇತನದ ಸದುಪಯೋಗವನ್ನು ಕೆಲವು ಸದಸ್ಯರು ಪಡೆದುಕೊಳ್ಳುತ್ತಿದ್ದು ಯಶಸ್ವಿ ವಿಮಾ ಯೋಜನೆಯಡಿಯಲ್ಲಿ ವೈದ್ಯಕೀಯ ಸೌಲಭ್ಯವನ್ನು ಕೂಡ ಸಹಕಾರ ಸಂಘ ನೀಡುತ್ತದೆ.

ಪಶು ಆಹಾರಕ್ಕೆ ಸಂಬಂಧಿಸಿದಂತೆ ಉತ್ಪಾದಕರು ಹಸಿರು ಹುಲ್ಲು, ಹುಲ್ಲಿನ ಕಾಂಡ, ಹಿಂಡಿ, ಲವಣ ಮಿಶ್ರಣವನ್ನು ಕೂಡ ಪಡೆಯುತ್ತಾರೆ. ನಿಗದಿತ ಬೆಲೆಯನ್ನು ಪಾವತಿಸಿ ಈ ರೀತಿಯ ಪಶು ಆಹಾರವನ್ನು ಸದಸ್ಯರು ಕೊಂಡುಕೊಳ್ಳುತ್ತಾರೆ. ಅಲ್ಲದೆ ಆರ್ಥಿಕ ವರ್ಷದ ಕೊನೆಯ ತಿಂಗಳಲ್ಲಿ ಸದಸ್ಯರಿಗೆ ಪಶು ಆಹಾರವಾದ ಹಿಂಡಿಯನ್ನು ಸ್ವಲ್ಪ ಕಡಿಮೆ ಬೆಲೆಗೆ ಮಾರಾಟ ಮಾಡಿ ಇದರ ಲಾಭವನ್ನು ಸದಸ್ಯರು ಪಡೆಯುತ್ತಾರೆ.

ಔಷಧೋಪಚಾರಗಳಿಗೆ ಸಂಬಂಧಿಸಿದಂತೆ ಪಶುಗಳಿಗೆ ಸೂಕ್ತವಾದ ಚಿಕಿತ್ಸೆಗಳನ್ನು ಈ ಸಂಘದ ಪಶು ವೈದ್ಯರಿಂದ ನೀಡಲಾಗುತ್ತದೆ. ಅಂದರೆ ಕಾಲುಬಾಯಿ ಜ್ವರ, ಕೆಚ್ಚಲು ಬಾವು ಹಾಗೂ ಕೃತಕ ಗರ್ಭಧಾರಣೆಗೆ ಸಂಬಂಧಿಸಿದಂತೆ ಔಷಧಿಗಳನ್ನು ನೀಡುವ ಕಾರ್ಯವನ್ನು ಈ ಸಹಕಾರ ಸಂಘಗಳಿಂದ ಮಾಡಲಾಗುತ್ತದೆ. ಮಾಹಿತಿದಾರರು ನೀಡಿರುವ ಮಾಹಿತಿಯಂತೆ ಅವರು ತಮ್ಮ ಪಶುಗಳಿಗೆ ಚಿಕಿತ್ಸೆಯನ್ನು ಈ ಸಹಕಾರ ಸಂಘದ ಪಶು ವೈದ್ಯಕೀಯ ಚಿಕಿತ್ಸೆಯ ತರಬೇತಿದಾರರಿಂದ ಕಡಿಮೆ ಬೆಲೆಗೆ ಪಡೆದುಕೊಳ್ಳುತ್ತಿದ್ದು, ಸಹಕಾರ ಸಂಘಗಳ ಕೂಡ ತಮ್ಮ

ಸಂಘದಲ್ಲಿ ವೈದ್ಯಕೀಯ ವಿಚಾರಕ್ಕೆ ಸಂಬಂಧಿಸಿದಂತೆ ಮಾಹಿತಿ ಶಿಬಿರಗಳನ್ನು ನಡೆಸುತ್ತಿದ್ದು ಇದರ ಸದುಪಯೋಗವನ್ನು ಬಹುತೇಕ ಸದಸ್ಯರು ಪಡೆದುಕೊಳ್ಳುತ್ತಿದ್ದಾರೆಂದು ಅಭಿಪ್ರಾಯ ಪಟ್ಟಿದ್ದಾರೆ. ಇಷ್ಟು ಅಲ್ಲದೆ ಈ ಹಾಲು ಉತ್ಪಾದಕರ ಸಹಕಾರ ಸಂಘದಿಂದ ಇತರ ಸವಲತ್ತು ಅಂದರೆ ಪ್ರತೀ ವರ್ಷ ಸದಸ್ಯರು ವಸ್ತು ರೂಪದಲ್ಲಿ ಅಂದರೆ ಕೊಡೆ, ಕ್ಯಾನ್ ಹಾಗೂ ಇನ್ನಿತ್ತರ ವಸ್ತುಗಳನ್ನು ಕೂಡ ಪಡೆಯುತ್ತಾರೆ. ಒಟ್ಟಿನಲ್ಲಿ ಹಾ.ಉ.ಸ. ಸಂಘಗಳು ಹಾಲು ಉತ್ಪಾದಕರ ಅಭಿವೃದ್ಧಿಗೆ ಸಹಕಾರವನ್ನು ನೀಡುತ್ತಿದೆ. ರಾಸುಗಳಿಗೆ ಬಂಜೆತನ ನಿವಾರಣಾ ಶಿಬಿರವನ್ನು ಮೂರು ತಿಂಗಳಿಗೊಮ್ಮೆ ಮಾಡುತ್ತಿದೆ ಹಾಗೂ ಸಾಂಕ್ರಮಿಕ ರೋಗ ನಿವಾರಣಾ ಲಸಿಕೆ ಕಾರ್ಯಕ್ರಮವನ್ನು ಸಂಘದ ವತಿಯಿಂದ ನಡೆಸುತ್ತದೆ.

ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿರುವ ಉದ್ದೇಶದ ವಿವರ

ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿರುವ ಮಾಹಿತಿದಾರರಲ್ಲಿ ಯಾವ ಉದ್ದೇಶಕ್ಕಾಗಿ ಹೈನುಗಾರಿಕೆಯನ್ನು ಮಾಡುತ್ತಿದ್ದೀರಿ ಎಂದು ಕೇಳಿದಾಗ ಹಲವಾರು ರೀತಿಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಕೆಲವರು ಆದಾಯಕ್ಕಾಗಿ ಅಂದರೆ ಹಾಲು, ಗೊಬ್ಬರದ ಮಾರಾಟದಿಂದ ಬರುವ ಅದಾಯ ತಮ್ಮ ಜೀವನ ನಿರ್ವಹಣೆಗೆ ಸಹಕಾರಿ ಎಂದರೆ ಕೆಲವರು ತಮ್ಮ ಸ್ವಂತ ಉಪಯೋಗಕ್ಕೆ ಅಂದರೆ ಗೊಬ್ಬರದ ಮೂಲಕ ಕೃಷಿ ಚಟುವಟಿಕೆಗೆ ಪೂರಕವಾಗಿದ್ದು ಇದಕ್ಕಾಗಿ ಪಶುಗಳನ್ನು ಸಾಕುತ್ತೇವೆ ಎಂಬ ಮಾಹಿತಿಯನ್ನು ನೀಡಿದ್ದಾರೆ. ಈ ಕುರಿತ ಮಾಹಿತಿಯನ್ನು ಈ ಕೋಷ್ಟಕದಲ್ಲಿ ನೀಡಲಾಗಿದೆ.

<u>ಕೋಷ್ಟಕ : ೪.೧೭</u>

ಹೈನುಗಾರಿಕೆಯಲ್ಲಿ ತೊಡಗಿಕೊಂಡಿರುವ ಉದ್ದೇಶ

ಕ್ರಸಂ.	ಉದ್ದೇಶ	ಪ್ರತಿಕ್ರಿಯೆ	ಶೇಕಡಾವಾರು ಪ್ರಮಾಣ
1	ಆದಾಯಕ್ಕಾಗಿ	17	28.33
2	ಗೊಬ್ಬರಕ್ಕಾಗಿ	31	51.67
3	ಇತರ	12	20
	ಒಟ್ಟು	**60**	**100**

ಮೂಲ : ಪ್ರಾಥಮಿಕ ದತ್ತಾಂಶ

ಈ ಕೋಷ್ಟಕದ ದತ್ತಾಂಶದ ಪ್ರಕಾರ ಶೇ 28.33 ಫಲಾನುಭವಿಗಳು ಆದಾಯಕ್ಕಾಗಿ ಶೇ – 51.67ರ ಷ್ಟು ಫಲಾನುಭವಿಗಳು ಗೊಬ್ಬರಕ್ಕಾಗಿ ಹಾಗೂ ಶೇ. 20ರಷ್ಟು ಜನರು ಇತರ

ಉದ್ದೇಶಗಳಿಂದಾಗಿ ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಬಹಳಷ್ಟು ಸದಸ್ಯರು ಕೃಷಿಕರಾಗಿದ್ದು ತಮ್ಮ ಕೃಷಿ ಚಟುವಟಿಕೆಗಾಗಿ ಗೊಬ್ಬರವನ್ನು ಪಡೆಯುವ ಉದ್ದೇಶದಿಂದ ಇನ್ನು ಕೆಲವರು ಹಾಲು ಮಾರಿ ಬರುವ ಆದಾಯಕ್ಕಾಗಿ, ಇನ್ನು 20%ದಷ್ಟು ಜನರು ತಮ್ಮ ಆಸಕ್ತಿ, ಹವ್ಯಾಸದಿಂದ ಹೈನುಗಾರಿಕೆಯನ್ನು ಮಾಡುತ್ತಿದ್ದಾರೆ.

ಹೈನುಗಾರಿಕೆಯ ಬಗ್ಗೆ ತರಬೇತಿ ನೀಡುವ ಕೇಂದ್ರಗಳ ಲಭ್ಯತೆಯ ಬಗ್ಗೆ ಮಾಹಿತಿ :

ಮಾಹಿತಿದಾರರ ಪ್ರಕಾರ ಹೈನುಗಾರಿಕೆಯ ತರಬೇತಿ ನೀಡುವ ವಿಶೇಷವಾದ ಯಾವುದೇ ಕೇಂದ್ರಗಳು ಲಭ್ಯವಿಲ್ಲ. ಆದರೆ ಹಾ.ಉ.ಸ. ಸಂಘಗಳು ಹೈನುಗಾರಿಕೆಗೆ ಸಂಬಂಧಿಸಿದಂತೆ ಪ್ರತಿ ವರ್ಷ ಮಾಹಿತಿ ಶಿಬಿರ, ಚರ್ಚಾಕೂಟಗಳನ್ನು ನಡೆಸುತ್ತದೆ. ಅಲ್ಲದೆ ದಕ್ಷಿಣ ಕನ್ನಡ ಹಾಲು ಉತ್ಪಾದಕರ ಒಕ್ಕೂಟ, ಮಂಗಳೂರು ಇದರ ಪ್ರಾಯೋಜಕತ್ವದಲ್ಲಿ ನಡೆಯುವ ಶಿಬಿರದಲ್ಲಿ ಜನರು ಭಾಗವಹಿಸುವಂತೆ ಮಾಡಿ ಪಶುಗಳನ್ನು ಹೇಗೆ ಪಾಲನೆ ಪೋಷಣೆ ಮಾಡಬೇಕು, ಯಾವ ರೀತಿಯ ಮುಂಜಾಗ್ರತಾ ಲಸಿಕೆ ನೀಡಬೇಕು, ಇತ್ಯಾದಿ ಎಲ್ಲಾ ವಿಷಯಗಳಿಗೆ ಸಂಬಂಧಿಸಿದ ಮಾಹಿತಿಯನ್ನು ನೀಡುತ್ತದೆ.

ಕೋಷ್ಟಕ ೪.೧೮

ಪಶುವೈದ್ಯಕೀಯ ಸೇವೆಯ ಗುಣಮಟ್ಟ

ಕ್ರಸಂ.	ಗುಣ ಮಟ್ಟ	ಸಂಖ್ಯೆ	ಶೇಕಡಾವಾರು ಪ್ರಮಾಣ
1	ಅತ್ಯುತ್ತಮ	10	16.67
2	ಉತ್ತಮ	42	70
3	ತೃಪ್ತಿಕರ	8	13.33
4	ತೃಪ್ತಿಕರ	–	–
	ಒಟ್ಟು	**60**	**100**

ಮೂಲ : ಪ್ರಾಥಮಿಕ ದತ್ತಾಂಶ

ಈ ಸಂಘದ ವತಿಯಿಂದ ಹೈನು ಉದ್ಯಾಮಿಗಳಿಗೆ ಪಶುವೈದ್ಯಕೀಯ ಸಲಹೆ, ಶಿಬಿರಗಳು, ಪಶು ವೈದ್ಯಕೀಯ ಚಿಕಿತ್ಸೆ ದೊರೆಯುತ್ತದೆ. ಈ ಎಲ್ಲಾ ಸೇವೆಗಳ ಗುಣಮಟ್ಟದ ಬಗ್ಗೆ ಫಲಾನುಭವಿಗಳಲ್ಲಿ ಚರ್ಚಿಸಿದಾಗ ಈ ರೀತಿಯ ಮಾಹಿತಿ ದೊರೆತಿದೆ. ಈ ಸೇವೆಯು ಶೇಕಡಾ 16.67ರಷ್ಟು ಅತ್ಯುತ್ತಮವಾಗಿದ್ದು, ಯಾಕೆಂದರೆ ಸಂಘದ ನೌಕರರು ಕೂಡ ಉತ್ತಮ ಸಹಕಾರ

ನೀಡುತ್ತಾರೆ. ಸಂಘದ ವತಿಯಿಂದ ಕಡಿಮೆ ವೆಚ್ಚದಲ್ಲಿ ಪಶು ವೈದ್ಯಕೀಯ ಸೌಲಭ್ಯ ದೊರೆಯುತ್ತದೆ. 70%ದಷ್ಟು ಫಲಾನುಭವಿಗಳ ಪ್ರಕಾರ ಉತ್ತಮವಾಗಿದೆ. ಯಾರೊಬ್ಬ ಸದಸ್ಯನಿಗೂ ಪಶುವೈದ್ಯಕೀಯ ಸೇವೆ ಅತೃಪ್ತಿಕರವಾಗಿಲ್ಲದೆ ಇದ್ದು ಶೇಕಡಾ 13.33 ರಷ್ಟು ಫಲಾನುಭವಿಗಳಿಗೆ ತೃಪ್ತಿಕರ ಎಂಬುವುದು ಈ ದತ್ತಾಂಶದಿಂದ ತಿಳಿದುಬರುತ್ತಿದೆ.

ಹಾಲು ಮತ್ತು ಹಾಲಿನ ಉತ್ಪನ್ನಗಳಿಗೆ ನಿರ್ಧರಿಸಲ್ಪಡುವ ಬೆಲೆಯ ಬಗ್ಗೆ ಜನರ ಅಭಿಪ್ರಾಯ


ಹಾಲು ಮತ್ತು ಹಾಲಿನ ಉತ್ಪನ್ನಗಳಿಗೆ ಸರಕಾರದಿಂದ ನಿರ್ಧರಿಸಲ್ಪಡುವ ಬೆಲೆಯ ಬಗ್ಗೆ ಜನರು ಬೇರೆ-ಬೇರೆ ರೀತಿಯಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇದನ್ನು ಈ ಕೆಳಕಂಡ ಕೋಷ್ಟಕದಲ್ಲಿ ವ್ಯಕ್ತಪಡಿಸಲಾಗಿದೆ.

ಕೋಷ್ಟಕ : ೪.೧೯

ಹಾಲಿನ ಬೆಲೆಯ ಬಗ್ಗೆ ಜನರ ಅಭಿಪ್ರಾಯ :

ಕ್ರಸಂ.	ಅಭಿಪ್ರಾಯ	ಸಂಖ್ಯೆ	ಪ್ರಮಾಣ (%)
1	ತೃಪ್ತಿಕರವಾಗಿದೆ	20	33.33
2	ತೃಪ್ತಿಕರವಾಗಿಲ್ಲ	18	30
3	ಸಾಮಾನ್ಯ	22	36.37
	ಒಟ್ಟು	*60*	*100*

ಮೂಲ : ಸಂಶೋಧಕರ ಕ್ಷೇತ್ರಕಾರ್ಯಾಧಾರಿತ ಮಾಹಿತಿ



ನಕ್ಷೆಯ ಪ್ರಕಾರ ಒಟ್ಟು 60 ಮಾಹಿತಿದಾರರಲ್ಲಿ 20 ಮಾಹಿತಿದಾರರು ಅಂದರೆ ಶೇಕಡಾ 33.33ರಷ್ಟು ಸದಸ್ಯರು ಸರಕಾರದಿಂದ ಹಾಲು ಮತ್ತು ಹಾಲಿನ ಉತ್ಪನ್ನಗಳಿಗೆ ಸರಕಾರದಿಂದ ನಿಗದಿಪಡಿಸುವ ಬೆಲೆಯ ಬಗ್ಗೆ ತೃಪ್ತಿಕರ ಎಂದು 18 ಸದಸ್ಯರು ತೃಪ್ತಿಕರವಾಗಿಲ್ಲವೆಂದು ಹಾಗೂ 22 ರಷ್ಟು ಅಂದರೆ 36.37%ದಷ್ಟು ಸದಸ್ಯರು ಈ ಬೆಲೆಯು ಸಾಮಾನ್ಯ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಇದರಿಂದ ನಮಗೆ ಈ ಕೋಷ್ಟಕದಿಂದ ಸರಕಾರದಿಂದ ನಿಗದಿಸಲ್ಪಡುವ ಬೆಲೆಯು ಸಾಮಾನ್ಯ ಎಂದು ತಿಳಿದುಬರುತ್ತದೆ.

ಸರಕಾರವು ಹಾಲು ಉತ್ಪಾದಕರ ಸಹಕಾರ ಸಂಘದ ಸದಸ್ಯರಾಗಿದ್ದು ಹಾಲು ಪೂರೈಕೆ ಮಾಡುತ್ತಿರುವ ಸದಸ್ಯರಿಗೆ ಅವರು ಸಂಘದಿಂದ ಪಡೆಯುವ ಬೆಲೆಯ ಜೊತೆಗೆ ಅವರ ಸಂಘದ ಬ್ಯಾಂಕ್ ಖಾತೆಗೆ ರೂ. 4 ಪ್ರೋತ್ಸಾಹ ಧನವನ್ನು ನೀಡುತ್ತದೆ. ಅಲ್ಲದೆ ಯಶಸ್ವಿನಿ ಯೋಜನೆಯಡಿಯಲ್ಲಿ ಸದಸ್ಯನಿಗೆ ಔಷದೋಪಚಾರದ ಖರ್ಚನ್ನು ನಿಭಾಯಿಸುತ್ತದೆ. ಹಿಂದೆ ಇಂತಹ ಸೌಲಭ್ಯಗಳು ಇರಲ್ಲಿಲ್ಲ. ಅದ್ದರಿಂದ ಸರಕಾರ ನಿರ್ಧರಿಸುವ ಬೆಲೆ ತೃಪ್ತಿಕರ.

ಇನ್ನು ಕೆಲವು ಸದಸ್ಯರ ಪ್ರಕಾರ ಸಾಮಾನ್ಯ ಇನ್ನು ಕೆಲವು ಅಭಿಪ್ರಾಯದಂತೆ ಈ ಬೆಲೆಯು ತೃಪ್ತಿಕರವಾಗಿಲ್ಲ. ಯಾಕೆಂದರೆ ಸರಕಾರದ ಬೆಲೆಗಿಂತ ಅಧಿಕ ಹಣವನ್ನು ನಾವು ಪಶುಗಳಿಗೆ ಖರ್ಚು ಮಾಡುತ್ತೇವೆ. ಆದ್ದರಿಂದ ಆದಾಯಕ್ಕಿಂತ ಖರ್ಚು ಅಧಿಕವಾಗುತ್ತದೆ. ಇದರಿಂದ ತೃಪ್ತಿಕರವಲ್ಲ ಎನ್ನುತ್ತಾರೆ.


ವಿಮಾ ಮಾಹಿತಿ :

ಪಶುಗಳಿಗೆ ಉಂಟಾಗುವ ಅವಘಡಗಳನ್ನು ತಪ್ಪಿಸಲು ವಿಮೆ ಮಾಡಲಾಗುತ್ತದೆ. ಇಂತಹ ತೊಂದರೆಗಳನ್ನು ತಪ್ಪಿಸಲು ಅಧ್ಯಯನ ಕ್ಷೇತ್ರದಲ್ಲಿ ಎಷ್ಟು ಮಂದಿ ವಿಮೆ ಮಾಡಿದ್ದಾರೆ ಎಂದು ಕೇಳಿದಾಗ ಬಹಳಷ್ಟು ಕಡಿಮೆ ಜನರು ವಿಮೆಯನ್ನು ಮಾಡಿಕೊಂಡಿದ್ದಾರೆ ಎಂದು ತಿಳಿದುಬರುತ್ತದೆ. ವಿಮಾ ಸೌಲಭ್ಯ ಇಲ್ಲದಂತಹ ಪಶುಗಳಿಗೆ ಹಾನಿಯುಂಟಾದಲ್ಲಿ ಇತರ ಯಾವುದೇ ಮೂಲದಿಂದ ಸಹಕಾರ ಸಿಗುತ್ತಿಲ್ಲ ಎಂಬುವುದು ಎಲ್ಲಾ ಫಲಾನುಭವಿಗಳ ಅಭಿಪ್ರಾಯ.

ಕೋಷ್ಟಕ : 4.20

ಕ್ರ.ಸಂ.	ಉತ್ತರ	ಸಂಖ್ಯೆ	ಪ್ರಮಾಣ (%)
1	ಹೌದು	15	25
2	ಇಲ್ಲ	45	75
	ಒಟ್ಟು	**60**	**100**

ಮೂಲ : ಪ್ರಾಥಮಿಕ ದತ್ತಾಂಶಗಳು.



ಮೂಲ : ಪ್ರಾಥಮಿಕ ದತ್ತಾಂಶ

ಈ ರೇಖಾಚಿತ್ರದ ಪ್ರಕಾರ 25%ದಷ್ಟು ಹೈನುಗಾರರು ಮಾತ್ರ ಜಾನುವಾರು ವಿಮೆ ಮಾಡಿದ್ದು, ಉಳಿದ 75% ಹೈನುಗಾರರು ಜಾನುವಾರು ವಿಮಾ ಸೌಲಭ್ಯವನ್ನು ಹೊಂದಿಲ್ಲವೆಂದು ಸ್ಪಷ್ಟವಾಗುತ್ತದೆ.

ಜಾನುವಾರು ವಿಮಾದಾರರ ಸಂಖ್ಯೆಗಿಂತ ವಿಮೆಯನ್ನು ಹೊಂದಿಲ್ಲದವರ ಪ್ರಮಾಣ ಅಧಿಕವಿದೆ. ಅವರ ಪ್ರಕಾರ ಜಾನುವಾರುಗಳಿಗೆ ವಿಮೆಯನ್ನು ಮಾಡುವಷ್ಟು ಆದಾಯವನ್ನು ಪಡೆಯುವುದಿಲ್ಲ. ಇದಕ್ಕಾಗಿ ವಿಮೆಯನ್ನು ಮಾಡಿರುವುದಿಲ್ಲ ಎಂದು ತಿಳಿಸುತ್ತಾರೆ.

ನಿರುದ್ಯೋಗ ನಿವಾರಣೆಯ ಬಗ್ಗೆ ಜನರ ಅಭಿಪ್ರಾಯ :

ಕೋಷ್ಟಕ – 4.21

ಕ್ರಮ. ಸಂ	ವಿವರಗಳು	ಸಂಖ್ಯೆ	ಪ್ರಮಾಣ (%)
1	ಹೌದು	48	80
2	ಇಲ್ಲ	12	20
	ಒಟ್ಟು	**60**	**100**

ಮೇಲಿನ ಈ ಕೋಷ್ಟಕದ ಪ್ರಕಾರ ಶೇಕಡಾ 80ರಷ್ಟು ಅಭಿಪ್ರಾಯದಂತೆ ಹೈನುಗಾರಿಕೆಯು ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಲು ಸಹಾಯಕವಾಗುತ್ತದೆ. ಮನೆಯಲ್ಲಿ ಸದಸ್ಯರ ಸಹಕಾರವಿದ್ದಾಗ, ನೀರಿನ ಪೂರೈಕೆ ಇದ್ದಾಗ ಇದರಿಂದ ಆದಾಯವನ್ನು ಪಡೆಯಬಹುದು. ಅಲ್ಲದೆ ಈ ಉದ್ಯಮವನ್ನು ಪ್ರಾರಂಭಿಸಲು ಅಧಿಕ ಬಂಡವಾಳದ ಅಗತ್ಯತೆ ಇಲ್ಲ. ಹಾಗೂ ವಿದ್ಯಾಭ್ಯಾಸ ಕೂಡ ಈ ಉದ್ಯೋಗಕ್ಕೆ ಮುಖ್ಯವಾಗಿರುವುದಿಲ್ಲ. ಆದರೆ 12 ಜನರ ಅಭಿಪ್ರಾಯದಂತೆ ಹೈನುಗಾರಿಕೆಯು ನಿರುದ್ಯೋಗ ಸಮಸ್ಯೆಯನ್ನು ನಿವಾರಣೆ ಮಾಡುವುದಿಲ್ಲ. ಯಾಕೆಂದರೆ ಗೊಬ್ಬರದ ಹೊರತಾಗಿ ಉಳಿದ ಯಾವುದೇ ರೀತಿಯ ಆಧಿಕ ಆದಾಯ ದೊರಕದೆ ಇರುವುದರಿಂದ ಬಹಳಷ್ಟು ಮಂದಿಗೆ ಈ ಉದ್ಯೋಗದಲ್ಲಿ ತಾವು ತೊಡಗಿಸಿಕೊಳ್ಳುವುದಿಲ್ಲ. ಅಲ್ಲದೇ ಪಶುಗಳ ಸಾಕಾಣಿಕೆಗೆ ಅಧಿಕ ಹಣ ಬೇಕಾಗುತ್ತದೆ. ಇದರಿಂದ ಪಡೆದಂತಹ ಆದಾಯವನ್ನು ಪಶುಗಳ ಆಹಾರ, ಚಿಕಿತ್ಸೆಗಾಗಿ ಖರ್ಚು ಮಾಡುತ್ತೇವೆ. ಇದರಿಂದಾಗಿ ಆದಾಯಕ್ಕಿಂತಲೂ ಅಧಿಕ ಖರ್ಚು ಉಂಟಾಗುತ್ತದೆ. ಇದಕ್ಕಾಗಿ ಹೆಚ್ಚಿನ ಯುವ ಜನರು ಹೈನುಗಾರಿಕೆಯಲ್ಲಿ ತೊಡಗಿಸಿಕೊಳ್ಳಲು ಆಸಕ್ತಿ ವಹಿಸುವುದಿಲ್ಲ.

048957

೪.೪ ಉಪಸಂಹಾರ

ಅಧ್ಯಯನದ ಪ್ರದೇಶದಲ್ಲಿ ಜನರು ತಮ್ಮ ಜೀವನ ನಿರ್ವಹಣೆಗಾಗಿ ಹಲವಾರು ಕ್ಷೇತ್ರಗಳಲ್ಲಿ ದುಡಿಯುತ್ತಿದ್ದು ಇದರಲ್ಲಿ ಹೈನುಗಾರಿಕೆಯೂ ಒಂದು. ಈ ಉದ್ಯೋಗದಿಂದ ತಮ್ಮ ಜೀವನ ನಿರ್ವಹಣೆಗಾಗಿ ತಕ್ಕ ಮಟ್ಟಿನ ಆದಾಯ ಪಡೆಯುತ್ತಿದ್ದಾರೆ. ಮುಖ್ಯವಾಗಿ ಕೃಷಿಗೆ ಬೇಕಾದಂತಹ ಗೊಬ್ಬರಕ್ಕಾಗಿ ಹೆಚ್ಚಿನ ಜನರು ಮನೆಯಲ್ಲಿ ಹೈನುರಾಸುಗಳನ್ನು ಸಾಕುತ್ತಿದ್ದಾರೆ. ಈ ಉದ್ಯೋಗದಲ್ಲಿ ಜನರನ್ನು ತೊಡಗಿಸಿಕೊಳ್ಳುವಂತೆ ಮಾಡುವಲ್ಲಿ ಸಹಕಾರಿ ಸಂಘಗಳು ಕೈಜೋಡಿಸಿವೆ.

ಅಧ್ಯಾಯ–೫

ಅಧ್ಯಯನದ ಶೋಧ,
ಸಾರಾಂಶ ಮತ್ತು
ಕೊನೆಯ ಮಾತು

ಅಧ್ಯಾಯ – ೫

ಅಧ್ಯಯನದ ಶೋಧ, ಸಾರಾಂಶ ಮತ್ತು ಕೊನೆಯ ಮಾತು

೫.೧ ಸಾರಾಂಶ:

ಈ ಅಧ್ಯಯನದ ಸಮಾಪ್ತಿಯಲ್ಲಿ ತಿಳಿಯುವುದೇನೆಂದರೆ ಹೈನುಗಾರಿಕೆಯನ್ನು ಪ್ರಾರಂಭಿಸಿದ ಎಲ್ಲರೂ ಯಶಸ್ಸು ಪಡೆಯಲು ಸಾಧ್ಯವಿಲ್ಲ. ಹಣ ಹೂಡಿ ಹಣ ಗಳಿಸುವ ಇತರ ಉದ್ಯಮಗಳಿಗೆ ಇದನ್ನು ಹೋಲಿಸಲಾಗುವುದಿಲ್ಲ. ಇಂದಿನ ಈ ಆಧುನಿಕ ಯುಗದಲ್ಲಿ ವೈಜ್ಞಾನಿಕ ಆಧಾರಗಳೊಂದಿಗೆ ಯಾವುದು ತಪ್ಪು ಯಾವುದು ಸರಿ ಎಂದು ನಿರ್ಧರಿಸಿ ಮುನ್ನಡೆಯಬೇಕಾಗಿದೆ. ಈ ಅಧ್ಯಯನದಲ್ಲಿ ಹೈನುಗಾರಿಕೆಯಲ್ಲಿ ತೊಡಗಿರುವ ಜನರ ಸ್ಥಿತಿಗತಿ, ಹೈನುಗಾರಿಕೆಯ ಬಗ್ಗೆ ಜನರ ಅಭಿಪ್ರಾಯ, ಸಹಕಾರ ಸಂಘಗಳಿಂದ ಪಡೆಯುವ ಸೌಲಭ್ಯಗಳು, ಜನರು ಯಾವ ತಳಿಯ ಹಸುಗಳನ್ನು ಜಾಸ್ತಿಯಾಗಿ ಉಪಯೋಗಿಸುತ್ತಾರೆ, ಹೈನುಗಾರಿಕೆಯಲ್ಲಿ ಜನರು ಆಧುನಿಕ ವಿಧಾನವನ್ನು ಅಳವಡಿಸಿಕೊಂಡಿದ್ದಾರೆಯೇ, ಸರಕಾರದ ಸವಲತ್ತುಗಳು ಮುಂತಾದ ವಿಚಾರಗಳ ಬಗ್ಗೆ ಅಧ್ಯಯನ ಮಾಡುವ ಕಾರ್ಯವನ್ನು ಮಾಡಲಾಗಿದೆ.

ಮೊದಲ ಅಧ್ಯಯನದಲ್ಲಿ ಹೈನುಗಾರಿಕೆಯ ಇತಿಹಾಸ, ಸಮಸ್ಯೆ, ಮಹತ್ವ, ಅಧ್ಯಯನದ ಉದ್ದೇಶಗಳು ಮತ್ತು ವಿಧಾನಗಳು ಹಾಗೂ ಮಿತಿಗಳನ್ನು ತಿಳಿಸಿಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಮಂಗಳೂರು ತಾಲೂಕಿನಲ್ಲಿ ಹೈನುಗಾರಿಕೆ ನಡೆದು ಬಂದ ರೀತಿ, ಆರ್ಥಿಕ ವ್ಯವಸ್ಥೆಯಲ್ಲಿ ಹೈನುಗಾರಿಕೆಯ ಪಾತ್ರದ ಕುರಿತಾದ ಸ್ಥೂಲ ಚಿತ್ರಣವನ್ನು ನೀಡಲಾಗಿದೆ. ಮುಂದಿನ ಅಧ್ಯಾಯದಲ್ಲಿ ಪ್ರದೇಶ ಪರಿಚಯ ಹಾಗೂ ಹೈನುಗಾರಿಕೆಯ ಪರಿಸ್ಥಿತಿಯ ಚಿತ್ರಣವನ್ನು ನೀಡಲಾಗಿದೆ. ಅಂದರೆ ಮೂರನೇ ಅಧ್ಯಾಯದಲ್ಲಿ ಅಧ್ಯಯನ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಮೂರು ಹಾಲು ಉತ್ಪಾದಕರ ಸಹಕಾರ ಸಂಘ ಮತ್ತು ಅವುಗಳ ಪಾತ್ರದ ಬಗ್ಗೆ ಮಾಹಿತಿಯನ್ನು ನೀಡಲಾಗಿದೆ. ಮುಂದಿನ ಅಧ್ಯಾಯವು ಈ ಅಧ್ಯಯನದ ಬಹಳ ಪ್ರಮುಖವಾದ ಅಧ್ಯಾಯವಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಹೈನುಗಾರಿಕಾ ಅಭಿವೃದ್ಧಿಗೆ ಸಹಕಾರಿ ಸಂಘಗಳ ಕೊಡುಗೆಗಳ ಕುರಿತು ವಿಶ್ಲೇಷಣೆ ಮಾಡಲಾಗಿದೆ. ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟದ ಪಾತ್ರ, ಮಾಹಿತಿದಾರರಲ್ಲಿ ಹೈನುಗಾರಿಕೆಗೆ ಸಂಬಂಧಿಸಿದಂತೆ ಕೇಳಿದ ವಿವಿಧ ಪ್ರಶ್ನೆಗಳಿಗೆ ಮಾಹಿತಿದಾರರು ನೀಡಿದಂತಹ ಉತ್ತರಗಳ ವಿಶ್ಲೇಷಣೆಗಳು ಹಾಗೂ ಸಮಸ್ಯೆಗಳ ಬಗ್ಗೆ ತಿಳಿಸಲಾಗಿದೆ.

ಒಟ್ಟಿನಲ್ಲಿ ಈ ಅಧ್ಯಯನದಿಂದ ತಿಳಿದುಬಂದಂತಹ ವಿಷಯವೇನೆಂದರೆ ಬಹಳಷ್ಟು ಜನರು ಕೃಷಿಯ ಜೊತೆಗೆ ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಇನ್ನಿತ್ತರ ಕೂಲಿ ಕೆಲಸವನ್ನು ಮಾಡುವ ಜನರು ಕೂಡ ಹೈನುಗಾರಿಕೆಯಲ್ಲಿ ನಿರ್ವಹಿಸುತ್ತಿದ್ದಾರೆ. ಹೈನು ಉದ್ಯಮದಿಂದ ಹೇಳುವಷ್ಟು ಮಟ್ಟದಲ್ಲಿ ಲಾಭವಿಲ್ಲದಿದ್ದರೂ ಹೈನುಗಾರರು ಅನೇಕ ವಿಧದ ಪ್ರಯೋಜನವನ್ನು ಪಡೆಯುತ್ತಿದ್ದಾರೆ. ಗೊಬ್ಬರಗಳ ತಯಾರಿಕೆ ಆಗಿ ಸಾವಯವ ಕೃಷಿಯನ್ನು ಮಾಡಿ, ಪರಿಸರವನ್ನು ಉಳಿಸಿಕೊಳ್ಳಬಹುದು. ಹೈನುಗಾರಿಕೆಯಿಂದ ಸಂಘದ ಸದಸ್ಯರು ಪಶುಗಳಿಗೆ ಬೇಕಾದ ಪಶು ಆಹಾರ, ಲಸಿಕೆ, ಔಷಧಿ, ಮೊದಲಾದ ವೈದ್ಯಕೀಯ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಹೈನುಗಾರರು ಕೆಲವೊಂದು ಮೂಲ ಸೌಕರ್ಯಗಳ ಕೊರತೆಯ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಅಂದರೆ ಎಲ್ಲಾ ಡೈರಿಗಳಲ್ಲಿಯೂ ಶೀತಲ ಸಾಂದ್ರದ ವ್ಯವಸ್ಥೆ ಇಲ್ಲ. ಎಲ್ಲಾ ಪ್ರದೇಶಗಳಲ್ಲಿಯೂ ಸಾರಿಗೆ ವ್ಯವಸ್ಥೆ ಅಭಿವೃದ್ಧಿ ಆಗಿರದೆ ಇರುವುದರಿಂದ ಪಶುಗಳಿಗೆ ವೈದ್ಯಕೀಯ ಚಿಕಿತ್ಸೆಯನ್ನು ಸಂಘದ ವಠಾರದಲ್ಲಿ ಆಯೋಜಿಸಿದ್ದರೆ ಅಲ್ಲಿಗೆ ಪಶುಗಳನ್ನು ಸಾಗಿಸುವುದು ಕಷ್ಟಕರ. ಇನ್ನು ಹೆಚ್ಚಿನ ಜನರು ಹೈನುಗಾರಿಕೆಯನ್ನು ಉದ್ಯೋಗದ ದೃಷ್ಟಿಯಿಂದ ಅಳವಡಿಸಿಕೊಂಡಿದ್ದಾರೆ. ಹೆಚ್ಚಿನ ಹೈನುಗಾರರು ಈ ಸಹಕಾರ ಸಂಘದ ಸದಸ್ಯತ್ವವನ್ನು ಪಡೆದುಕೊಂಡಿದ್ದು ಆ ಮೂಲಕ ಸಂಘದ ಸವಲತ್ತುಗಳನ್ನು ಉಪಯೋಗಿಸುತ್ತಿದ್ದಾರೆ. ಮಹಿಳೆಯರ ಪಾತ್ರ ಹೈನುಗಾರಿಕೆಯಲ್ಲಿ ಪ್ರಮುಖವಾದುದು. ಹೆಚ್ಚಾಗಿ ಮನೆಯಲ್ಲಿ ಕೊಟ್ಟಿಗೆಯ ನಿರ್ವಹಣೆಯನ್ನು ಮಹಿಳೆಯರೇ ನೋಡಿಕೊಳ್ಳುತ್ತಿದ್ದುದು ಕಂಡು ಬಂದಿದೆ. ಇನ್ನು ಪಶುತಳಿಗಳನ್ನು ಗಮನಿಸಿದರೆ ಹೆಚ್ಚಿನ ಹೈನುಗಾರರು ವಿದೇಶೀ ತಳಿಗಳನ್ನೇ ಉಪಯೋಗಿಸುತ್ತಿದ್ದಾರೆ. ಯಾಕೆಂದರೆ, ಊರ ತಳಿಗೆ ಹೋಲಿಸಿದರೆ ಅತ್ಯಧಿಕ ಪ್ರಮಾಣದಲ್ಲಿ ಹಾಲನ್ನು ನೀಡುತ್ತದೆ. ಇದರಿಂದಾಗಿ ಇತ್ತೀಚೆಗೆ ವಿದೇಶೀ ತಳಿಗಳನ್ನು ಬಹಳಷ್ಟು ಜನ ಹೈನುಗಾರರು ಬಳಸಿಕೊಳ್ಳುತ್ತಿದ್ದಾರೆಂದು ಈ ಅಧ್ಯಯನದಿಂದ ತಿಳಿದುಬಂದಿದೆ.

೫.೨ ಭವಿಷ್ಯದ ಸಂಶೋಧನಾ ಸಾಧ್ಯತೆಗಳು:

ಪ್ರತಿಯೊಂದು ಸಂಶೋಧನಾ ಅಧ್ಯಯನದಲ್ಲಿ ಆಯ್ದುಕೊಂಡ ವಿಷಯದ ಬಗ್ಗೆ ಹೊಸ ಹೊಸ ವಿಷಯಗಳನ್ನು ತಿಳಿಯುವ ಪ್ರಯತ್ನವನ್ನು ಮಾಡಲಾಗುತ್ತದೆ. ಅದೇ ವಿಷಯಕ್ಕೆ ಸಂಬಂಧಿಸಿದಂತೆ ಮುಂದಿನ ಅಧ್ಯಯನಗಳ ಸಾಧ್ಯತೆಯ ಬಗ್ಗೆಯೂ ಹೇಳಬಹುದಾಗಿದೆ. ಈ ಹಿನ್ನೆಲೆಯಲ್ಲಿ ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ಮುಂದಿನ ಅಧ್ಯಯನದ ಸಂಶೋಧನೆಗಳ ಸಾಧ್ಯತೆಯ ವಿವರವನ್ನು ಈ ಕೆಳಗಿನಂತೆ ಗುರುತಿಸಬಹುದು.

- ಹೈನುಗಾರಿಕೆಯನ್ನು ಪ್ರೋತ್ಸಾಹಿಸುವಲ್ಲಿ ಸರಕಾರದ ಪಾತ್ರದ ಬಗ್ಗೆ ಅಧ್ಯಯನ ಮಾಡಬಹುದಾಗಿದೆ.
- ನಗರ ಪ್ರದೇಶ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಹೈನುಗಾರಿಕೆಯ ತುಲನಾತ್ಮಕ ಅಧ್ಯಯನವನ್ನು ನಡೆಸಬಹುದಾಗಿದೆ.
- ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೈನುಗಾರಿಕೆಯ ವಿಶ್ಲೇಷಣೆ.
- ಹೈನು ಉತ್ಪನ್ನಗಳ ಉತ್ಪಾದಕರು ಹಾಗೂ ಅನುಭೋಗಿಗಳ ನಡುವಿನ ಸಂಬಂಧವನ್ನು ವಿಮರ್ಶಿಸಬಹುದಾಗಿದೆ.

೫.೩ ಸಲಹೆ ಸೂಚನೆಗಳು:

ಹೈನುಗಾರಿಕೆಯನ್ನು ಇನ್ನಷ್ಟು ಫಲಪ್ರದವಾಗಿ ನಡೆಸಿಕೊಳ್ಳಲು ಕೆಲವೊಂದು ಸಲಹೆ ಸೂಚನೆಗಳನ್ನು ನೀಡಬಹುದು. ಅವುಗಳೆಂದರೆ–

೧. ಜಾನುವಾರುಗಳಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರಗಳನ್ನು ಆಯೋಜಿಸಿ, ಅದರ ಪ್ರಯೋಜನವನ್ನು ಬಹಳಷ್ಟು ಜನರು ಪಡೆದುಕೊಳ್ಳುವಂತೆ ಮಾಡುವುದು. ಈ ಮೂಲಕ ಜಾನುವಾರುಗಳಿಗೆ ಬರುವಂತಹ ರೋಗಗಳನ್ನು ಮಿತಿಗೊಳಿಸುವುದು.

೨. ಸಹಕಾರ ಸಂಘಗಳ ಮೂಲಕ ಸಿಗುವ ಸವಲತ್ತುಗಳನ್ನು ಜನರಿಗೆ ಮನವರಿಕೆ ಮಾಡಿ, ಇನ್ನಷ್ಟು ಜನರು ಹೈನುಗಾರಿಕೆಯಲ್ಲಿ ತೊಡಗಿಕೊಳ್ಳುವಂತೆ ಪ್ರೋತ್ಸಾಹಿಸುವುದು.

೩. ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ನುರಿತ ಪಶುವೈದ್ಯರನ್ನು ನೇಮಕ ಮಾಡಿ ಸದಾ ಪಶು ವೈದ್ಯಕೀಯ ಸೇವೆಗಳು ದೊರೆಯುವಂತೆ ಮಾಡುವುದು.

೪. ಹಾಲಿಗೆ ಸರಕಾರವು ಅಧಿಕ ಬೆಂಬಲಬೆಲೆ ಮತ್ತು ಪ್ರೋತ್ಸಾಹಧನವನ್ನು ನೀಡುವುದರ ಮೂಲಕ ಹೆಚ್ಚು ಯುವ ಜನರು ಹೈನುಗಾರಿಕೆಯಲ್ಲಿ ತೊಡಗಿಕೊಳ್ಳುವಂತೆ ಮಾಡುವುದು.

೫. ದಿನೇ ದಿನೇ ಹೆಚ್ಚುತ್ತಿರುವ ಹಾಲಿನ ಉತ್ಪಾದನಾ ವೆಚ್ಚವನ್ನು ಕಡಿಮೆಗೊಳಿಸುವುದು.

೬. ಹೈನುಗಾರಿಕೆಯಲ್ಲಿ ತೊಡಗಿಸಿಕೊಳ್ಳಲು – ಬ್ಯಾಂಕ್ ಮತ್ತು ಇತರ ಹಣಕಾಸಿನ ಸಂಸ್ಥೆಗಳಲ್ಲದೆ ಹಾಲು ಉತ್ಪಾದಕರ ಸಹಕಾರ ಸಂಘಗಳ ಮುಖೇನವೇ ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯವನ್ನು ನೀಡುವಂತೆ ಮಾಡುವುದು.

೭. ಪ್ರತಿಯೊಬ್ಬ ಸದಸ್ಯನು ಜಾನುವಾರು ವಿಮೆ ಮಾಡುವಂತೆ ಪ್ರಯತ್ನಿಸುವುದು.

೮. ಜಾನುವಾರುಗಳನ್ನು ಮತ್ತು ಕೊಟ್ಟಿಗೆಗಳನ್ನು ಶುಚಿಯಾಗಿಡುವುದು.

9. ಹೈನುಗಾರಿಕೆಯಲ್ಲಿ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದು.

೫.೪ ಸಮಾಪ್ತಿ

"ಮಂಗಳೂರು ತಾಲೂಕಿನಲ್ಲಿ ಹೈನುಗಾರಿಕೆ – ಒಂದು ವಿಶ್ಲೇಷಣೆ" ಇದು ಒಂದು ಅಧ್ಯಯನವಾಗಿದೆ. ಮಂಗಳೂರು ತಾಲೂಕಿನಲ್ಲಿ ಆಯ್ದ ಹಾಲು ಉತ್ಪಾದಕರ ಸಹಕಾರಿ ಸಂಘಗಳಲ್ಲಿ ಕೆಲವೊಂದು ಹೈನುಗಾರರ ಅಥವಾ ಸದಸ್ಯರ ಸಂದರ್ಶನವನ್ನು ಒಳಗೊಂಡಿತ್ತು. ಅವರಿಗೆ ಪ್ರಶ್ನಾವಳಿಯನ್ನು ನೀಡಿ, ಅವರ ಜೊತೆ ಚರ್ಚಿಸಿ ಮಾಹಿತಿಗಳನ್ನು ಸಂಗ್ರಹಿಸಿ ಮಾಡಿದ ಅಧ್ಯಯನ ಇದಾಗಿದೆ. ಹೈನುಗಾರಿಕೆಯ ವಿಕಾಸದಿಂದ, ಹೈನೋದ್ಯಮ ಅಭಿವೃದ್ಧಿಯಿಂದ ಈ ಕ್ಷೇತ್ರದಲ್ಲಿ ಹೈನುರಾಸುಗಳ ಪೋಷಣೆಯಲ್ಲಿ ಸುಧಾರಣೆ, ನಾಟಿ ಹಸುಗಳ ತಳಿ ಅಭಿವೃದ್ಧಿ, ಹಾಲಿನ ಪ್ರಮಾಣದಲ್ಲಿ ಹೆಚ್ಚಳ, ಆರ್ಥಿಕವಾಗಿ ದುರ್ಬಲರಾದವರಿಗೆ ತಕ್ಕಮಟ್ಟಿನ ಜೀವನ ಮಾರ್ಗ ಮೊದಲಾದವುಗಳನ್ನು ದೊರಕಿಸಿಕೊಟ್ಟಿದೆ.

ಹೈನುಗಾರಿಕೆಯ ಪ್ರಮಾಣವನ್ನು ಇನ್ನಷ್ಟು ಹೆಚ್ಚಿಸುವುದರ ಜೊತೆಗೆ ಸರಕಾರದ ವಿವಿಧ ಸೌಲಭ್ಯಗಳನ್ನು ಹೈನುಗಾರರಿಗೆ ನಿರಂತರವಾಗಿ ಒದಗಿಸುವಲ್ಲಿ ಒಕ್ಕೂಟವು ಶ್ರಮವಹಿಸಬೇಕಾಗಿದೆ. ರೈತರಿಗೆ ಗೋವಂಶ ರಕ್ಷಣೆಯ ಅನಿವಾರ್ಯತೆ ತಿಳಿಸುವುದರ ಜೊತೆಗೆ ಅದನ್ನು ಪೂರಕವಾದ ಒಂದು ಉದ್ಯಮವೆಂದು ತಿಳಿಯಪಡಿಸಿ ವಿಶೇಷ ಆರ್ಥಿಕ ಸಹಕಾರವನ್ನು ನೀಡಿ ಈ ಉದ್ಯಮವು ಸದಾ ಅಭಿವೃದ್ಧಿಯ ಪಥದಲ್ಲಿ ಮುನ್ನಡೆಯುವಂತಾಗಬೇಕು.

೫.೬ ಉಪಸಂಹಾರ

ಭಾರತದ ಅಭಿವೃದ್ಧಿಯ ಗುಟ್ಟು ಗ್ರಾಮೀಣ ಅಭಿವೃದ್ಧಿಯಲ್ಲಿ ಅಡಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಬಡ ಜನರಿಗೆ ಪರ್ಯಾಯ ಉದ್ಯೋಗ ಒದಗಿಸಲು ಮತ್ತು ಅವರ ಆದಾಯದ ಮಟ್ಟವನ್ನು ಉತ್ತಮ ಪಡಿಸಲು ಕೃಷಿಯೇತರ ವಲಯಗಳನ್ನು ವಿಸ್ತರಿಸುವ ಅಗತ್ಯವಿದೆ. ತೀವ್ರ ಜನಸಂಖ್ಯಾ ಬೆಳವಣಿಗೆಯಿಂದಾಗಿ ಮತ್ತು ಗ್ರಾಮೋದ್ಯೋಗದ ಅಲಭ್ಯತೆಯಿಂದಾಗಿ ಕೃಷಿ ಈಗಾಗಲೇ ಒತ್ತಡಕ್ಕೆ ಸಿಲುಕಿದೆ ಅಲ್ಲದೆ ಗ್ರಾಮೀಣ ಪ್ರದೇಶಗಳಲ್ಲಿ ಬಹುತೇಕ ಕೃಷಿ ಚಟುವಟಿಕೆಗಳು ಮುಂಗಾರು ಋತುವಿನಲ್ಲಿ ಮಾತ್ರ ಕೇಂದ್ರೀಕೃತವಾಗಿದ್ದು ವರ್ಷದ ಎಲ್ಲಾ ಋತುವಿನಲ್ಲಿಯೂ ಆದಾಯವನ್ನು ಒದಗಿಸುವುದಿಲ್ಲ, ಇಂತಹ ಪರಿಸ್ಥಿತಿಯಲ್ಲಿ ಜೀವನ ನಿರ್ವಹಣೆಗಾಗಿ ಇತರ ಉಪಕಸುಬುಗಳನ್ನು ನಿರ್ವಹಣೆ ಮಾಡುವುದು ಉತ್ತಮ. ಇಂತಹ ಉಪಕಸುಬುಗಳಲ್ಲಿ ಹೈನುಗಾರಿಕೆಯು ಪ್ರಮುಖವಾದುದು.

ಅನುಬಂಧಗಳು

ಅನುಬಂಧಗಳು

ಅನುಬಂಧ ೧ – ಕೋಷ್ಟಕಗಳ ಪಟ್ಟಿ

ಅನುಬಂಧ ೨ – ಪ್ರಶ್ನಾವಳಿ

ಭಾಗ – 1

ವೈಯಕ್ತಿಕ ವಿಚಾರಗಳು

1.1. ಸದಸ್ಯರ ಹೆಸರು ಮತ್ತು ವಿಳಾಸ

1.2 ವೈಯಕ್ತಿಕ ವಿವರ

1.1 ಹೆಸರು	1.2 ಲಿಂಗ ಗಂ/ಹೆ	1.3 ವಯಸ್ಸು	1.4 ಶಿಕ್ಷಣ	1.5 ಉದ್ಯೋಗ	1.6 ವಾರ್ಷಿಕ ಆದಾಯ	1.7 ಜಾತಿ
		ಅ. 25ಕ್ಕಿಂತ ಕಡಿಮೆ ಆ. 25–40 ಇ. 40–60 ಈ. 60ಕ್ಕಿಂತ ಅಧಿಕ	ಅನಕ್ಷರಸ್ಥರು ಪ್ರಾಥಮಿಕ ಪ್ರೌಢ ಕಾಲೇಜು ಸ್ನಾತಕೋತ್ತರ	ಕೃಷಿ ಕೂಲಿ ಸರಕಾರ ಸ್ವಂತ ಉದ್ಯಮ	50,000ಕ್ಕಿಂತ ಕಡಿಮೆ 50,000ಕ್ಕಿಂತ – 1 ಲಕ್ಷ 1 ಲಕ್ಷ – 2 ಲಕ್ಷ 2 ಲಕ್ಷ – 3 ಲಕ್ಷ	ಹಿಂದು ಮುಸ್ಲಿಂ ಕ್ರೈಸ್ತ ಇತರೆ

ಭಾಗ – 2

ಹೈನುಗಾರಿಕೆಗೆ ಸಂಬಂಧಿಸಿದ ಮಾಹಿತಿಗಳು

2. ಹೈನು ಉದ್ಯಮವು ಲಾಭದಾಯಕವಾಗಿದೆಯೇ?

1. ಕೃಷಿಗಿಂತ ಉತ್ತಮ ☐
2. ಕೃಷಿಯಷ್ಟು ☐
3. ಕೃಷಿಗಿಂತ ಕಡಿಮೆ ☐

3. ಹೈನುರಾಸುಗಳಿಂದ ವಿಸರ್ಜಿಸಲ್ಪಡುವ ತ್ಯಾಜ್ಯ ವಸ್ತುಗಳ ಉಪಯುಕ್ತ ಬಳಕೆ ಆಗುತ್ತಿದೆಯೇ?

ಹೌದು ☐ ಇಲ್ಲ ☐

4. ನೀವು ಗೋಬರ್ ಅನಿಲವನ್ನು ಬಳಸಿಕೊಳ್ಳುತ್ತಿದ್ದೀರೆ?

ಹೌದು ☐ ☐

ಇಲ್ಲ

5. ಹೈನುಗಾರಿಕೆಯಿಂದ ರೈತರ ಆರ್ಥಿಕ ಅಭಿವೃದ್ಧಿ ಸಾಧ್ಯವಾಗಿದೆಯೇ?

ಹೌದು ☐ ☐

ಇಲ್ಲ

6. ಉತ್ಪಾದಿತ ಹಾಲನ್ನು ಎಲ್ಲಿ ಮಾರಾಟ ಮಾಡುತ್ತೀರಿ?

7. ಹೈನುಗಾರಿಕೆಗೆ ಸಂಬಂಧಿಸಿದಂತೆ ಯಾರು ಕಾರ್ಯ ನಿರ್ವಹಿಸುತ್ತಾರೆ?

1 ☐ ಳೆಯರು 2 ☐ ಡಸರು

3. ಮಕ್ಕಳು ☐ 4. ಕೆಲಸಗಾರರು ☐

8. ಹಾಲನ್ನು ಮಾರುಕಟ್ಟೆಗೆ ಕೊಂಡೊಯ್ಯುವ ಕೆಲಸವನ್ನು ಯಾರು ಮಾಡುತ್ತಾರೆ?

1. ಮಹಿಳೆಯರು ☐ 2. ಗಂಡಸರು ☐

3. ಮಕ್ಕಳು ☐ 4. ಅವಕಾಶಕ್ಕೆ ತಕ್ಕಂತೆ ☐

9. ಹೈನುಗಾರಿಕೆಯನ್ನು ಮುಂದುವರಿಸುವಂತಹ ಆಸಕ್ತಿ ಇದೆಯೇ?

ಹೌದು ☐ ಇಲ್ಲ ☐

10. ನೀವು ಹಾ. ಉ. ಸ. ಸಂಘದ ಸದಸ್ಯರಾಗಿದ್ದೀರ?

ಹೌದು ☐ ಇಲ್ಲ ☐

11. ಎಷ್ಟು ವರ್ಷದಿಂದ ಸಂಘದ ಸದಸ್ಯತ್ವವನ್ನು ಹೊಂದಿದ್ದೀರಿ?

1. 2 ವರ್ಷ
2. 2–4 ☐
3. 5–10 ☐
4. 10ಕ್ಕಿಂತ ಮೇಲ್ಪಟ್ಟು ☐

☐

12. ಸಹಕಾರಿ ಸಂಘದ ಸೇವೆ

1. ಅತ್ಯುತ್ತಮ ☐
2. ಉತ್ತಮ ☐
3. ಸಾಮಾನ್ಯ ☐
4. ಅತೃಪ್ತಿಕರ ☐

13. ನೀವು ಸದಸ್ಯರಾಗಿರುವ ಹಾ. ಉ. ಸ. ಸಂಘದಲ್ಲಿ ನಿಮ್ಮ ಪಾತ್ರ ಏನು?

1. ಸಾಮಾನ್ಯ ಸದಸ್ಯನಾಗಿ ☐
2. ನಿರ್ದೇಶಕನಾಗಿ ☐
3. ಅಧ್ಯಕ್ಷನಾಗಿ ☐
4. ಎಲ್ಲವೂ ☐

14. ಹೈನುಗಾರಿಕೆಯಲ್ಲಿ ಆಧುನಿಕ ತಂತ್ರಜ್ಞಾನದ ಬಗ್ಗೆ ನಿಮ್ಮ ಅಭಿಪ್ರಾಯ ಏನು?

15. ನೀವು ಸದಸ್ಯರಾಗಿರುವ ಹಾ. ಉ. ಸ. ಸಂಘದಲ್ಲಿ ಸಕಾಲಕ್ಕೆ ಚುನಾವಣೆಗಳು–

1. ಆಗುತ್ತಿವೆ ☐
2. ಇಲ್ಲ ☐
3. ಗೊತ್ತಿಲ್ಲ ☐

16. ಹಾ. ಉ. ಸ. ಸಂಘವು ನಿಮ್ಮ ಮಕ್ಕಳಿಗೆ ಶೈಕ್ಷಣಿಕ ನೆರವನ್ನು ನೀಡುತ್ತಿದೆಯೇ?

ಹೌದು ☐ ಇಲ್ಲ ☐

ಹೌದೆಂದಾರೆ ಯಾವೆಲ್ಲ ನೆರವು

17. ಹೈನುಗಾರಿಕೆಗೆ ಸಾಲ ಸೌಲಭ್ಯಗಳನ್ನು ಎಲ್ಲಿಂದ ಪಡೆಯುತ್ತಿದ್ದೀರಿ?

☐ 1. ಬ್ಯಾಂಕುಗಳು

☐ 2. ಸ್ವ-ಸಹಾಯ ಗುಂಪು

☐ 3. ಇತರೆ

18. ನಿಮ್ಮ ಪ್ರಕಾರ ಯಾವ ತಳಿಯ ಹಸು ತುಂಬಾ ಲಾಭದಾಯಕ

1. ದೇಶೀಯ ತಳಿ ☐ 2. ವಿದೇಶೀ ತಳಿ ☐

19. ಸಂಘದಿಂದ ಹೈನುಗಾರಿಕೆಗೆ ಯಾವೆಲ್ಲ ಸೌಲಭ್ಯಗಳನ್ನು ಪಡೆಯುತ್ತಿದ್ದೀರಿ?

20. ನೀವು ಹೈನುಗಾರಿಕೆಯಲ್ಲಿ ಯಾಕೆ ತೊಡಗಿಕೊಂಡಿದ್ದೀರಿ?

1. ಆದಾಯ ☐

2. ಗೊಬ್ಬರ ☐

3. ಸ್ವಂತ ☐

21. ಹೈನುಗಾರಿಕೆಯ ಬಗ್ಗೆ ತರಬೇತಿ ನೀಡುವ ಕೇಂದ್ರಗಳು ಲಭ್ಯವಿದೆಯೇ?

ಹೌದು ☐ ಇಲ್ಲ ☐

22. ಪಶು ವೈದ್ಯಕೀಯ ಸಲಹೆ, ಚಿಕಿತ್ಸೆ ಮೊದಲಾದವುಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು?

1. ಅತ್ಯುತ್ತಮ ☐ 2. ಉತ್ತಮ ☐

3. ತೃಪ್ತಿಕರ ☐ 4. ತೃಪ್ತಿಕರವಲ್ಲ ☐

23. ಹಾಲು ಮತ್ತು ಹಾಲಿನ ಉತ್ಪನ್ನಗಳಿಗೆ ಸರಕಾರ ನಿರ್ಧರಿಸುವ ಬೆಲೆ

ತೃಪ್ತಿಕರವಾಗಿದೆ ☐ ತೃಪ್ತಿಕರವಾಗಿಲ್ಲ ☐ ಸಾಮಾನ್ಯ ☐

24. ಹೈನುಗಾರಿಕೆಯಲ್ಲಿ ಎದುರಾಗುವ ಅವಘಡಗಳನ್ನು ತಪ್ಪಿಸಲು ವಿಮೆ ಮಾಡಿದ್ದೀರೋ?

ಹೌದು ☐ ಇಲ್ಲ ☐

25. ಹೈನುಗಾರಿಕೆಯಿಂದ ನಿರುದ್ಯೋಗ ನಿವಾರಿಸಬಹುದೇ?

ಹೌದು ☐ ಇಲ್ಲ ☐

ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಅನುಬಂಧ ೩– ನಕ್ಷೆಗಳು




Mangalore
Bantwal
Puttur
Sullia

ಅನುಬಂಧ ೪ – ಭಾವಚಿತ್ರಗಳು



ಸಾಂದ್ರ ಶೀತಲೀಕರಣ ಘಟಕ, ಕಡಂದಲೆ



ಕಡಂದಲೆ ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತ



ಮಂಗಳೂರು ಡೈರಿ ಘಟಕ

ಅನುಬಂಧ ೫ – ಪರಾಮರ್ಶನ ಪುಸ್ತಕಗಳು

೧. ಡಾ. ಎನ್.ಬಿ. ಶ್ರೀಧರ, ಡಾ. ಗಣೇಶಾ. ಎಂ. ಹೆಗಡೆ (೨೦೧೩) "ಹೈನು ಹೊನ್ನು" ಬೆಂಗಳೂರು; ಸಪ್ನ ಬುಕ್ ಹೌಸ್.

೨. ಎಂ. ಚಂದ್ರ ಪ್ರಜಾರಿ (೨೦೧೧); ಸಂಶೋಧನಾ ಪ್ರಸ್ತಾವ, ಹಂಪಿ; ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ.

೩. ಡಾ. ಹಿ.ಚಿ. ಬೋರಲಿಂಗಯ್ಯ (೨೦೦೨) "ಅಭಿವೃದ್ಧಿ ಪಥ" ಬೆಂಗಳೂರು; ವಿನಾಯಕ ಆಫ್ ಸೆಟ್ ಪ್ರಿಂಟರ್ಸ್.

೪. ಶೈಲೇಶ್ ಹೊಳ್ಳ ಕೆ.ಎನ್ (೨೦೧೨), "ಕಾಮಧೇನು–೩" ಬೆಂಗಳೂರು ಮೇರು ಪ್ರಕಾಶನ.

೫. ಪದವಿಪೂರ್ವ ಶಿಕ್ಷಣ ಇಲಾಖೆ (೨೦೧೩) "ಅರ್ಥಶಾಸ್ತ್ರಕ್ಕಾಗಿ ಸಂಖ್ಯಾಶಾಸ್ತ್ರ ಮತ್ತು ಭಾರತದ ಆರ್ಥಿಕ ಅಭಿವೃದ್ಧಿ" ಬೆಂಗಳೂರು; ಶ್ರೀ ವೆಂಕಟೇಶ್ವರ ಎಂಟರ್ ಪ್ರೈಸಸ್

೬. ಎಚ್.ಆರ್. ಕೃಷ್ಣ ಮೂರ್ತಿ (೨೦೦೨), "ಭಾರತದ ಆರ್ಥಿಕ ವ್ಯವಸ್ಥೆ" ಬೆಂಗಳೂರು; ಸ್ವಪ್ನ ಬುಕ್ ಹೌಸ್.

೭. ಜಿ.ವಿ. ಜೋಶಿ ಮತ್ತು ನೋಬರ್ಟ್ ಲೋಬೋ (೨೦೦೯) "ಕರಾವಳಿ ಕರ್ನಾಟಕದ ಅರ್ಥವ್ಯವಸ್ಥೆ ಹಿಂದಿನಿಂದ ಇಂದಿನವರೆಗೆ" ಮಂಗಳೂರು; ಮಂಗಳ ಪ್ರಕಾಶನ.

೮. ಚಿನ್ನಸ್ವಾಮಿ ಸೋಸಲ್ (೨೦೦೪), "ನಮ್ಮ ಗ್ರಾಮಗಳು ಅಂದು ಇಂದು" ಹಂಪಿ; ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ.

೯. ಎನ್.ಟಿ.ಎಂ. ಸ್ವಾಮಿ (೨೦೦೦), "ಸ್ವಸಹಾಯ ಸಂಘಗಳು ಒಂದು ಪರಿಕಲ್ಪನೆ" ದಾವಣಗೆರೆ; ಬದುಕು ಸ್ವಯಂ ಸೇವಾ ಸಂಸ್ಥೆ.

೧೦. ಶೈಲೇಶ್ ಹೊಳ್ಳ ಕೆ.ಎನ್. (೨೦೦೮), "ಕಾಮಧೇನು – ೨", ಬೆಂಗಳೂರು, ಮೇರು ಪ್ರಕಾಶನ.

೧೧. ಜಿ. ಗೋ ರಮೇಶ್ (೨೦೧೧), "ಪ್ರಬಂಧಗಳು" ಬೆಂಗಳೂರು; ಪ್ರಕಾಶ ಸಾಹಿತ್ಯ.

೧೨. ಡಾ. ನರಸಿಂಹಮೂರ್ತಿ (೨೦೦೬), "ಅಧಿಕ ಲಾಭಕ್ಕಾಗಿ ಆಧುನಿಕ ಹೈನುಗಾರಿಕೆ" ಬೆಂಗಳೂರು, ಕೃಷಿ ವಿಕಾಸ್ ಪಬ್ಲಿಕೇಶನ್ಸ್.

ಅಂತರ್ಜಾಲ ತಾಣಗಳು:

1. http//:kmfinandini.coop/index.php.....
2. http//:juistdial.com/Mangalore/dairy-form.
3. http//:www.amuldairy.com/index.php/........
4. http//:www.dairynutrition.Co/.....milk..../
5. http//:www.agriculture information.com.../169
6. http//:www.mangalore.com
7. http//:www.mangalore.com/news.php.....
8. http//:www.census2011.co.in/census/.......45
9. http//:www.istor.org/stable/20723496

AKSHARA GRANTHALAYA
ACC.NO. 048957
048957

Printing & Binding @
4269341, 42696